


ಗೌರಿ


ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

ಮಾರ್ಚ್ 26, 2014 ಪುಟ 20 ರೂ. 15/-






ಕರ್ನಾಟಕ ಎತ್ತ ಸಾಗಿದೆ?



ಮಂಡ್ಯ

ಕಾಂಗ್ರೆಸ್ ಬಣಬಣ
ಜೆಡಿಎಸ್ ಗೊಣಗೊಣ
ಬಿಜೆಪಿ ಝುಣಝುಣ





ಉತ್ತರ ಕನ್ನಡ


ಅನಂತಮಾರ್ಣಿಗೆ ಮುಸ್ಲಿಮರೇ ಬಂಡವಾಳ



ಹುಬ್ಬಳ್ಳಿ


ಸಾಹುಕಾರನ ಶಿಷ್ಯ

ವಿನೋದನ ಪುಂಡಾಟಿಕೆ




ಮೈಸೂರು

ಎರಡು ಕೋಟಿ ಕದ್ದ ಪೋಲೀಸರು



ಡಾ.ವಾಸು ಎಚ್.ವಿ.

ಪ್ರತೀ ಅತ್ಯಾಚಾರದಲ್ಲೂ ಪಾಲು ಹೊಂದಿರುವವರಲ್ಲಿ ಯಾರ್ಯಾರಿದ್ದೇವೆ?



ಮೈಸೂರಿನಲ್ಲಿ ರಾಜ್ಯದ ಹಲವಾರು ಮಹಿಳಾ ಸಂಘಟನೆಗಳು ಒಟ್ಟುಗೂಡಿ ಹಮ್ಮಿಕೊಂಡಿದ್ದ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಮುಗಿಯುವ ಹೊತ್ತಿಗೆ ಈ ಸುದ್ದಿ ಬಂದಿತು. ಅಲ್ಲೇ ಪಕ್ಕದ ಪಾಂಡವಪುರದಲ್ಲಿ 8 ವರ್ಷದ ಹುಡುಗಿಯೊಬ್ಬಳ ಮೇಲೆ ಹಿಂದಿನ ರಾತ್ರಿ ಅತ್ಯಾಚಾರವೆಸಗಿ, ಕೊಂದು, ಮಣ್ಣಿನಲ್ಲಿ ಹೂತು ಹಾಕಲಾಗಿತ್ತು; ನಾವು ಮೈಸೂರಿನ ರೈಲ್ವೇ ನಿಲ್ದಾಣಕ್ಕೆ ಬರುವ ಹೊತ್ತಿಗೆ ಆರೋಪಿಯನ್ನು ಬಂಧಿಸಲಾಗಿದೆ ಎಂಬ ವರ್ತಮಾನ ಬಂದಿತು (ನಂತರ ಅದು ಸುಳ್ಳೆಂದು ಗೊತ್ತಾಯಿತು. ಆದರೆ ಮರುದಿನ ಆರೋಪಿಯನ್ನು ಬಂಧಿಸಲಾಯಿತು). ಅಷ್ಟು ಹೊತ್ತಿಗೆ ಪಾಂಡವಪುರದಲ್ಲಿ ಜನರು ಪ್ರತಿಭಟನೆ ಮಾಡಿದ್ದರು. ಹುಡುಗಿಯ ತಂದೆ-ತಾಯಿಯ ಆರ್ತನಾದ ಎಲ್ಲರ ಎದೆಗೆ ತಟ್ಟುತ್ತಿತ್ತು, ಮುದ್ದಾದ ಎಳೆ ಹುಡುಗಿಯ ಫೋಟೋ ನೋಡಿದವರೆಲ್ಲರ ಕರುಳು ಚುರ್ರೆನ್ನುತ್ತಿತ್ತು. ಅದೇ ರಾತ್ರಿ ಪಾಂಡವಪುರದಲ್ಲಿ ಮೇಣದ ಬತ್ತಿಯನ್ನು ಹಿಡಿದು ತಮ್ಮ ಪ್ರತಿಭಟನೆಯನ್ನೂ, ನೋವನ್ನೂ ದಾಖಲಿಸಬೇಕೆಂದಿದ್ದೇವೆಂದು ಅಲ್ಲಿನ ಗೆಳೆಯರೊಬ್ಬರು ಹೇಳಿದರು.

ಪ್ರತಿಭಟನೆ ಯಾರ ವಿರುದ್ಧ? ಮಾರನೆಯ ದಿನ ಮಂಡ್ಯದ ಜಿಲ್ಲಾಧಿಕಾರಿ ಕಚೇರಿಯ ಮುಂದೆ ಪ್ರತಿಭಟನೆ ಮಾಡಬೇಕೆಂಬ ಇನ್ನೊಂದು ಸಲಹೆಯೂ ಬಂದಿತು. ಪ್ರತಿಭಟನೆಯು ಮುಂದಿಡುವ ಹಕ್ಕೊತ್ತಾಯಗಳೇನು? ಸರಣಿಯಾಗಿ ನಡೆಯುತ್ತಿರುವ ಇಂತಹ ಘಟನೆಗಳ ಕುರಿತು ಸರ್ಕಾರವು ಏನನ್ನೂ ಮಾಡುತ್ತಿಲ್ಲ, ಅದನ್ನು ನಾವು ಖಂಡಿಸಬೇಕು. ಸರ್ಕಾರವು ಏನು ಮಾಡಬೇಕೆಂದು ನಾವು ಬಯಸುತ್ತೇವೆ? ಇವೆಲ್ಲಕ್ಕೂ ಸರ್ಕಾರವನ್ನು ಮಾತ್ರ ಹೊಣೆ ಮಾಡುವುದು ಸರಿಯೇ?

ಇವೆಲ್ಲಾ ಚರ್ಚೆಗಳು 'ಮಹಿಳಾ ದಿನ'ದ ಸಂಜೆ ನಡೆದುಹೋದವು. ಹೆಚ್ಚುತ್ತಿರುವ ಮತ್ತು ಹೆಚ್ಚಾಗಿ ಬೆಳಕಿಗೆ ಬರುತ್ತಿರುವ ಅತ್ಯಾಚಾರ ಹಾಗೂ ಇನ್ನಿತರ ಲೈಂಗಿಕ ಹಲ್ಲೆಗಳು ಮತ್ತು ಅದರಲ್ಲೂ ಅಪ್ರಾಪ್ತ ವಯಸ್ಕ ಹೆಣ್ಣು ಮಕ್ಕಳ ಮೇಲಾಗುತ್ತಿರುವ ಅತ್ಯಾಚಾರಗಳು ಸಮಾಜದಲ್ಲಿ ಆತಂಕವನ್ನು ಉಂಟುಮಾಡುತ್ತಿವೆ. ಮತ್ತೂ ಒಂದು ಆತಂಕದ ಸಂಗತಿಯೆಂದರೆ, ಅತ್ಯಾಚಾರ ಮಾಡುತ್ತಿರುವ ಗಂಡು ಕುಲದ ಸರಾಸರಿ ವಯಸ್ಸೂ ದಿನೇದಿನೇ ಕಡಿಮೆಯಾಗುತ್ತಿದೆ. ಈ ಆತಂಕವು ಕೆಲವು ಸಾರಿ ಆಕ್ರೋಶವಾಗಿ ಸ್ಫೋಟಗೊಳ್ಳುತ್ತದೆ. ಆದರೆ ಹೆಚ್ಚಿನ ಸಾರಿ ಹತಾಶೆಯಾಗಿ ವ್ಯಕ್ತಗೊಳ್ಳುತ್ತಿದೆ.

ಇಂತಹ ಒಂದು ಅತ್ಯಾಚಾರದ ಸುದ್ದಿ ಕೇಳಿದಾಗಲೆಲ್ಲಾ, ಹೆಣ್ಣು ಹೆತ್ತ ತಾಯಂದಿರು ತಮ್ಮ ಮಗಳನ್ನು ನೆನೆದು ಭಯಗೊಳ್ಳುತ್ತಿದ್ದಾರೆ. ಇದು ನಿಲ್ಲುವ ವಿದ್ಯಮಾನದಂತೆ ಕಾಣುತ್ತಿಲ್ಲ; ಇದಕ್ಕೇನು ಮಾಡುವುದು ಎಂಬ ಚಿಂತೆ ಅಂತಹವರನ್ನು ಕಾಡುತ್ತದೆ. ಮರಣದಂಡನೆ, ಪುರುಷತ್ವ ಹರಣದಿಂದ ಹಿಡಿದು ಹಲವು ರೀತಿಯ ಉಗ್ರ ಶಿಕ್ಷೆಗಳನ್ನು ನೀಡಬೇಕೆಂಬ, ಕೆಲವು ಸಾರಿ ಕಲ್ಲು ಹೊಡೆದು ಸಾಯಿಸಬೇಕು ಎಂಬುವುದರ ತನಕ ಪರಿಹಾರ ಕ್ರಮಗಳು ಸೂಚನೆಯಾಗುತ್ತವೆ. ಇದರ ಜೊತೆ ಜೊತೆಗೇ ಹೆಣ್ಣುಮಕ್ಕಳು ತುಂಬಾ ಹುಷಾರಿನಿಂದ ಇರಬೇಕು; ಒಬ್ಬರೇ ತಿರುಗಾಡಬಾರದು, ರಾತ್ರಿ ತಡವಾಗಿ ಬರಬಾರದು ಇತ್ಯಾದಿ ಇತ್ಯಾದಿ ಸಲಹೆಗಳು.

ಹೆಣ್ಣುಮಕ್ಕಳಿಗೆ ಕರಾಟೆ ಇತ್ಯಾದಿ ಆತ್ಮರಕ್ಷಣೆಯ ಕ್ರಮಗಳನ್ನು ಕಲಿಸಬೇಕು ಎಂಬುದೂ ಬಹಳ ಕಾಲದಿಂದ ಚಾಲ್ತಿಯಲ್ಲಿದೆ. ಮಹಿಳೆಯರು ಹಾಕುವ ಬಟ್ಟೆಗಳೇ ಅತ್ಯಾಚಾರಕ್ಕೆ ಪ್ರಚೋದನೆ ನೀಡುತ್ತದೆ ಎಂಬ ಹಳೆಯ ವಾದವು ಹೊಸಹೊಸದಾಗಿ ಮತ್ತೆ ಕೇಳಿಬರುತ್ತಲೇ ಇರುತ್ತದೆ. ಅದರ ಜೊತೆಗೆ, ಈಗ ಪತ್ರಿಕೆ ಹಾಗೂ ಟಿವಿಗಳಲ್ಲಿ ಇಂತಹ ಸುದ್ದಿಗಳು ಹೆಚ್ಚಾದಂತೆಲ್ಲಾ, ಅತ್ಯಾಚಾರಕ್ಕೆ ಪ್ರಚೋದನೆ ಕೊಟ್ಟ ಹಾಗೆಯೇ ಆಗುತ್ತದೆ, ಆದ್ದರಿಂದ ಅದರ ಸುದ್ದಿ ಬರಬಾರದು ಎಂಬ ಒಂದು ವಾದವು ಹಲವರದ್ದಾಗಿದೆ.

ಏನು ಮಾಡಬೇಕೋ, ಮಾಡಬಾರದೋ ಎಲ್ಲವನ್ನೂ ಚರ್ಚಿಸೋಣ. ಆದರೆ ಈ ಚರ್ಚೆ ಯಾತಕ್ಕಾಗಿ? ಅತ್ಯಾಚಾರವನ್ನು ತಡೆಯುವುದಕ್ಕಾಗಿ ಅಲ್ಲವೇ? ಹಾಗಾದರೆ ಮೇಲಿನೆರಡು ಪ್ಯಾರಾಗಳಲ್ಲಿರುವ ಮತ್ತು ಅಂತಹ ಇನ್ನಷ್ಟು ಕ್ರಮಗಳಿಂದ ಅತ್ಯಾಚಾರವನ್ನು ತಡೆಯುವುದು ಸಾಧ್ಯವೇ? ಹೆಚ್ಚಿನ ಅತ್ಯಾಚಾರಗಳು ಪರಿಚಿತರಿಂದ ಸಂಭವಿಸುತ್ತವೆ ಮತ್ತು ಸಂಪೂರ್ಣ ಮೈಮುಚ್ಚಿಕೊಂಡಿರುವ ಮಹಿಳೆಯರ ಮೇಲೆ ನಡೆಯುತ್ತವೆ ಎಂಬುದು ಮೇಲಿನ ಹಲವು ಕ್ರಮಗಳ ಪರಿಣಾಮಹೀನತೆಯನ್ನು ಸೂಚಿಸುತ್ತವೆ. ಇನ್ನು ಶಾಲೆಗಳಿಗೆ ಹೋಗುವ ಅಥವಾ ಇನ್ನೂ ಶಾಲೆಗೆ ಹೋಗುವ ವಯಸ್ಸಿಗೂ ಬಾರದ ಎಳೆಯ ಹೆಣ್ಣು ಮಕ್ಕಳ ಮೇಲಿನ ಅತ್ಯಾಚಾರಗಳಿಗೆ ಕಾರಣವಾಗುತ್ತಿರುವುದು ಏನು?

ಇವೆಲ್ಲಾ ಹೋಗಲಿ, ಸರ್ಕಾರ ಇದಕ್ಕೇನು ಮಾಡಬೇಕು? ಎಲ್ಲಕ್ಕೂ ಸರ್ಕಾರವನ್ನೇ ಹೊಣೆ ಮಾಡುವುದು ಸರಿಯೇ?

ನಿರ್ಭಯಾ ಪ್ರಕರಣ ಮತ್ತು ಅದರ ನಂತರ ಪತ್ರಿಕೆಗಳಲ್ಲಿ ಬಂದ ಸಾಲು ಸಾಲು ಅತ್ಯಾಚಾರ ಪ್ರಕರಣಗಳ ಸುದ್ದಿಯನ್ನು ನೋಡಿ, ಕನ್ನಡದ ಮುಖ್ಯ ಚಿಂತಕರಲ್ಲೊಬ್ಬರು ಒಂದು ಎಸ್ಸೆಮ್ಮೆಸ್ಸನ್ನು ಕಳಿಸಿದ್ದರು. 'ನನ್ನಂಥ ನನ್ನೊಳಗೂ ಒಬ್ಬ ಅತ್ಯಾಚಾರಿ ಇರಬಹುದೇ? ಈ ಗಂಡು ಕುಲದೊಳಗೆ ಇಷ್ಟು ನೀಚವಾಗಿ ವರ್ತಿಸುವ ಗುಣ ಸಹಜವಾಗಿಯೇ ಇದ್ದು ಬಿಟ್ಟಿದೆಯೇ?' ಎಂದು. ಪ್ರಕೃತಿ ಸಹಜವಾಗಿ ಈ ಜಗತ್ತಿನೊಳಗೆ ಇರುವ ಲೈಂಗಿಕ ಬಯಕೆ ಮತ್ತು ಕ್ರಿಯೆಗಳ ಜೊತೆಗೆ ಅತ್ಯಾಚಾರವೂ ತಳಕು ಹಾಕಿಕೊಂಡಿರುವುದರಿಂದಲೂ, ಇದು ಇದ್ದಕ್ಕಿದ್ದಂತೆ ಈ ಕಾಲಮಾನದಲ್ಲಿ ಹುಟ್ಟಿಕೊಂಡಿರುವ ಹೊಸ ವಿದ್ಯಮಾನವೇನೂ ಅಲ್ಲವಾದ್ದರಿಂದಲೂ ಇದನ್ನು ಆ ರೀತಿ ತಡೆಯಲು ಸಾಧ್ಯವಿಲ್ಲವೆಂದು ಕೆಲವರು ಮಾತನಾಡುವುದಿದೆ. ನಿರ್ಭಯಾ ಪ್ರಕರಣದ ನಂತರ ಮಾಧ್ಯಮಗಳು ಅದನ್ನು ಹೆಚ್ಚೆಚ್ಚು ಬೆಳಕಿಗೆ ತರುತ್ತಿವೆ ಅಷ್ಟೇ ಎಂಬುದು ಅದರ ಜೊತೆಗೇ ಕೇಳಿಬರುವ ಮಾತು.

ಆದರೆ ಅಂಕಿಅಂಶಗಳು ಮತ್ತು ಸಮೀಕ್ಷೆಗಳು ಅದನ್ನು ಅಲ್ಲಗಳೆಯುತ್ತವೆ. ಅತ್ಯಾಚಾರದ ಪ್ರಮಾಣ ಹೆಚ್ಚುತ್ತಿದೆ. ವಿವಿಧ ಬಗೆಯ ಲೈಂಗಿಕ ಕಿರುಕುಳದ ಪ್ರಮಾಣ ಹೆಚ್ಚುತ್ತಿದೆ. ಲೈಂಗಿಕ ವಿಕೃತಿ ಹೆಚ್ಚುತ್ತಿದೆ. ಅತ್ಯಾಚಾರ ಮಾಡುವವರ ವಯಸ್ಸು ಕಡಿಮೆಯಾಗುತ್ತಿದೆ. ಮಕ್ಕಳ ಮೇಲೆ ಮತ್ತು ವಯಸ್ಸಾದವರ ಮೇಲೆ ನಡೆಸುತ್ತಿರುವ ಅತ್ಯಾಚಾರದ ಪ್ರಮಾಣವೂ ಹೆಚ್ಚಾಗುತ್ತಿದೆ.

ನಾವು ಮರೆಯಬಾರದ ಇನ್ನೊಂದು ಅಂಶವೂ ಇದರೊಂದಿಗಿದೆ. ಸಂಪೂರ್ಣ ಬುಡಕಟ್ಟು ಅವಸ್ಥೆಯಲ್ಲಿರುವ ಸಮಾಜದಲ್ಲಿ ಅತ್ಯಾಚಾರವೆನ್ನುವುದು, 'ನಾಗರಿಕ' ಸಮಾಜದಲ್ಲಿ ಕಂಡುಬರುವಂತಹ ಒಂದು ವಿದ್ಯಮಾನವಲ್ಲ, ಯಾವ ಸಮಾಜದಲ್ಲಿ ಲೈಂಗಿಕ ಕ್ರಿಯೆಯೆನ್ನುವುದು ಗಂಡು ಮತ್ತು ಹೆಣ್ಣು ಇಬ್ಬರೂ ಪರಸ್ಪರ ಒಪ್ಪಿಗೆಯಿಂದ ನಡೆಸುವ ಸಹಜ ಮಾನಸಿಕ ಹಾಗೂ ಲೈಂಗಿಕ ಚಟುವಟಿಕೆಯಾಗಿರುತ್ತದೋ, ಅಲ್ಲಿ ಅತ್ಯಾಚಾರ ಇರುವುದಿಲ್ಲ, ಯಾವ ಸಮಾಜದಲ್ಲಿ ಗಂಡಿಗೆ ದಮನಕಾರಿ ಸ್ಥಾನ ಲಭ್ಯವಾಗಿರುತ್ತದೋ, ಅಲ್ಲಿ ಆತ ಹೆಣ್ಣನ್ನು ಅನುಭವಿಸುತ್ತಾನೆ. ಅಂದರೆ ನಿಸ್ಸಂದೇಹವಾಗಿ ಅತ್ಯಾಚಾರವೆನ್ನುವುದು ಪ್ರಪಂಚದಲ್ಲಿ ಪುರುಷ ಪ್ರಧಾನ ವ್ಯವಸ್ಥೆ ಜಾರಿಗೆ ಬಂದನಂತರದ ವಿದ್ಯಮಾನ. ಹಾಗಾಗಿಯೇ ಇನ್ನೂ ಬುಡಕಟ್ಟು ಅವಸ್ಥೆಯಲ್ಲೇ ಇದ್ದ ಈಶಾನ್ಯ ಭಾರತದ ಹಲವು ಪ್ರದೇಶಗಳಲ್ಲಿ ಅತ್ಯಾಚಾರವೆನ್ನುವುದು ದೊಡ್ಡ ಪ್ರಮಾಣದಲ್ಲಿ ಪರಿಚಿತವಾಗಿದ್ದು ಭಾರತದ ಸೈನ್ಯದ ಮೂಲಕ.

ಅತ್ಯಾಚಾರಕ್ಕೂ 'ಅಧಿಕಾರ'ಕ್ಕೂ ಸಂಬಂಧವಿದೆ. ಅತ್ಯಾಚಾರವೆನ್ನುವುದು ಆಳುವವರ ಕೈಯ್ಯಲ್ಲಿ, ಅಧಿಕಾರಸ್ಥರ ಕೈಯ್ಯಲ್ಲಿ, ಯಜಮಾನರ ಕೈಯ್ಯಲ್ಲಿ ಒಂದು ಅಸ್ತ್ರವಾಗಿಯೂ ಬಳಕೆಯಾಗಿದೆ. ಅದೇ ರೀತಿ ಶ್ರೇಣೀಕೃತ ಸಮಾಜದಲ್ಲಿ, ಪುರುಷ ಮೇಲರಿಮೆಯ ಸಮಾಜದಲ್ಲಿ ಗಂಡಿನ ಅಧಿಕಾರದ ಸಾಧನವಾಗಿ, ಆತನ ಅಹಂಅನ್ನು ತೃಪ್ತಗೊಳಿಸುವ ಸಾಧನವಾಗಿಯೂ ಅತ್ಯಾಚಾರವು ಬಳಕೆಯಾಗುತ್ತಿದೆ. ಭಾರತದ ಪೋಲೀಸರು ಮತ್ತು ಸೈನ್ಯವು ನಡೆಸಿದ, ನಡೆಸುತ್ತಿರುವ ಅತ್ಯಾಚಾರವು ಈಶಾನ್ಯ ಭಾರತದಲ್ಲಿ (ಅದೇ ರೀತಿ ಛತ್ತೀಸ್‌ಗಢದ ಮಾವೋವಾದಿ ಹೋರಾಟದ ಪ್ರದೇಶದಲ್ಲಿ, ಹಿಂದೆ ವೀರಪ್ಪನ್ ಇದ್ದ ಕಾಡಿನಲ್ಲೂ) ಅಲ್ಲಿನ ಮಹಿಳೆಯರನ್ನು ಮತ್ತು ಇಡೀ ಸಮುದಾಯವನ್ನು ಗುರಿಯಾಗಿಟ್ಟುಕೊಂಡಿತ್ತು, ಅದರ ವಿರುದ್ಧ ಆಯಾ ಭಾಗಗಳ ಮಹಿಳೆಯರು ತಮ್ಮದೇ ರೀತಿಯಲ್ಲಿ ಸಮರ ಸಾರಿದ್ದಾರೆ. ಈ ಅರ್ಥದಲ್ಲಿ ಸರ್ಕಾರವೇ ಅತ್ಯಾಚಾರಿಯಾಗಿದೆ. ಇಂತಹ ಕೃತ್ಯವನ್ನೆಸಗಿ ಸಿಕ್ಕಿ ಹಾಕಿಕೊಂಡರೂ, ಆ ಸೈನಿಕರ ಮೇಲೆ ವಿಚಾರಣೆ ಹಾಗೂ ಶಿಕ್ಷೆ ಸಾಧ್ಯವಿಲ್ಲದಂತಹ ಕಾನೂನಿನಡಿ ರಕ್ಷಣೆ ಪಡೆಯುತ್ತಿದ್ದಾರೆ (ಅಂತಹದರಲ್ಲಿ ಒಂದು ಕಾಯ್ದೆ ಸಶಸ್ತ್ರ ಪಡೆಗಳ ವಿಶೇಷಾಧಿಕಾರ ಕಾಯ್ದೆ).

ಎರಡು ವಾರಗಳ ಹಿಂದಿನ 'ಲಂಕೇಶ್' ಮಹಿಳಾ ವಿಶೇಷಾಂಕದಲ್ಲಿ ಬಂದ ಮೀನಾ ಕಂದಸಾಮಿಯವರ ಲೇಖನದಲ್ಲೂ ಈ ಕುರಿತು ಪ್ರಶ್ನೆಯನ್ನೆತ್ತಲಾಗಿದೆ. ಅಲ್ಲಿ ರೇಪ್ ಮಾಡುತ್ತಿರುವವರಿಗೆ ನೀನು ಚಂದಾ ಕೊಡುತ್ತಿದ್ದೀಯಲ್ಲೋ ಎಂದು ಕೇಳಿದ್ದಾರೆ. ಅದು ಅತ್ಯಾಚಾರಿ ಸರ್ಕಾರದ ಬಗ್ಗೆ ಪ್ರಶ್ನೆಯನ್ನೇ ಕೇಳದೇ, ತೆರಿಗೆ ನೀಡುತ್ತಿರುವ ಎಲ್ಲರೂ ಅದರಲ್ಲಿ ಭಾಗಿಗಳೇ ಎನ್ನುವ ರೀತಿಯಲ್ಲಿ ಕೇಳಿರುವ ಪ್ರಶ್ನೆಯಾಗಿದೆ.

ಆದರೆ ಸರ್ಕಾರದ ಪಾತ್ರ ಇಷ್ಟಕ್ಕೇ ಸೀಮಿತವಾದದ್ದಲ್ಲ, ಇಂದು ಅತ್ಯಾಚಾರವೆಂಬ ಹೆಚ್ಚುತ್ತಿರುವ ವಿದ್ಯಮಾನವು ವಿವಿಧ ವಿಕೃತಿಗಳನ್ನು ತಾಳುತ್ತಿರುವುದರಲ್ಲೂ ಸರ್ಕಾರದ ಪಾತ್ರವಿದೆ. ಅಗಾಧ ಪ್ರಮಾಣದಲ್ಲಿ ಲೈಂಗಿಕ ವಿಕೃತಿಯನ್ನು ಬೆಳೆಸುತ್ತಿರುವುದರಲ್ಲಿ ಇಂದಿನ ಪೋರ್ನೋ (ಅಸಭ್ಯ, ಅಶ್ಲೀಲ, ನೀಲಿಚಿತ್ರಗಳ) ಉದ್ದಿಮೆಯು ಮುಖ್ಯ ಪಾತ್ರವನ್ನು ವಹಿಸಿದೆ. ಹಿಂದೆ ಇದು ನೀಲಿ ಚಿತ್ರಗಳ ರೂಪದಲ್ಲಿ ಮಾತ್ರ ಇತ್ತು, ಇಂಟರ್ನೆಟ್ ಲೋಕ ವ್ಯಾಪಕವಾದ ನಂತರದಲ್ಲಿ ಇದು ಮತ್ತಷ್ಟು ಅಗಾಧತೆಯನ್ನು ಪಡೆದುಕೊಂಡಿದೆ. ಅದರ ಜೊತೆಜೊತೆಗೇ ಮೊಬೈಲ್ ಬಳಕೆ ವ್ಯಾಪಕವಾದ ನಂತರ ಹಾಗೂ ಮೊಬೈಲ್‌ನೊಳಗೆ ಇನ್ನೂ ಹಲವು ತಾಂತ್ರಿಕ ಸಾಧ್ಯತೆಗಳು ತೆರೆದುಕೊಂಡ ನಂತರ ಗಂಡಸರ ಕೈಯ್ಯೊಳಗೇ ಒಂದು ದೊಡ್ಡ ವಿಕೃತ ಲೋಕ ಬಂದು ಕೂತಂತಾಯಿತು. ಇಂತಹ ಬಳಕೆ ಹೆಚ್ಚು ಮಾಡುತ್ತಿರುವುದು ಯುವಕರೇ ಆಗಿರುವುದು, ಇನ್ನೂ ಅಪ್ರಾಪ್ತ ವಯಸ್ಕ ಬಾಲಕರ ಕೈಗೆ ಇವೆಲ್ಲವೂ ಸಿಕ್ಕಿರುವುದೂ ಅಪಾಯಕಾರಿ ಪರಿಣಾಮ ಬೀರುತ್ತಿದೆ ಎಂಬುದನ್ನು ನಾವು ಗಮನಿಸಬಹುದು.

ಸಾರ್ವಜನಿಕ ಇಂಟರ್ನೆಟ್ ಪಾರ್ಲರ್‌ಗಳಲ್ಲಿ ಅರ್ಧಕ್ಕಿಂತ ಹೆಚ್ಚಿನವು ಗಂಡು ಕುಲಕ್ಕೆ ಇಂತಹ 'ಸೇವೆ'ಯನ್ನೇ ಸಲ್ಲಿಸುತ್ತಿವೆ. ಆಯಾ ಪಾರ್ಲರ್‌ಗಳ ಮಾಲೀಕರು ಅದರಲ್ಲಿ ಭಾಗಿಯಾಗದಿದ್ದರೂ ಇಂಟರ್ನೆಟ್‌ನಲ್ಲಿ ಅದು ಸಾಧ್ಯ, ಇನ್ನು ಅವರೇ ಶಾಮೀಲಾಗಿ ಯುವಸಮೂಹಕ್ಕೆ ವಿಕೃತ ಲೈಂಗಿಕತೆಯನ್ನು ಉಣಬಡಿಸುತ್ತಿರುವುದೂ ನಡೆಯುತ್ತಿದೆ. ಮೊಬೈಲ್ ಕಂಪೆನಿಗಳು (ಇದರಲ್ಲಿ ಸರ್ಕಾರೀ ಸ್ವಾಮ್ಯದ ಬಿಎಸ್‌ಎನ್‌ಎಲ್ ಸಹ ಸೇರಿದೆ) ನಿಮಗೆ ಹಾಟ್ ಹುಡುಗಿಯರ ಚಿತ್ರಗಳು ಬೇಕೆ ಎಂದು ಸತತವಾಗಿ ಮೆಸೇಜ್ ಕಳಿಸುತ್ತಿರುತ್ತವೆ. ಎಂಟಿಎಸ್ ಎಂಬ ಒಂದು ಕಂಪೆನಿಯ ಮೊಬೈಲ್‌ನಲ್ಲಿ ಒಂದೇ ಒಂದು ಬಟನ್ ಒತ್ತುವುದರ ಮೂಲಕ ಅಂತಹ ಚಿತ್ರಗಳ ಲಿಂಕ್‌ಗಳು ತೆರೆದುಕೊಳ್ಳುತ್ತವೆ.

ಇವೆಲ್ಲಕ್ಕೂ ಸರ್ಕಾರ ಹೇಗೆ ಸಮ್ಮತಿಸಿದೆ? ಒಂದು ವೇಳೆ ಸಮ್ಮತಿ ಇಲ್ಲವಾದರೆ ಏಕೆ ನಿಯಂತ್ರಿಸುತ್ತಿಲ್ಲ? ಇದೇ ರೀತಿಯಲ್ಲಿ ನಮ್ಮ ಟಿವಿ ಹಾಗೂ ಸಿನಿಮಾರಂಗಗಳೂ ಸಹ ಹೆಣ್ಣನ್ನು ಭೋಗದ ವಸ್ತುವನ್ನಾಗಿ ತೋರಿಸುತ್ತಿಲ್ಲವೇ? ಡಿಯೋಡೆರಂಟ್ ಸ್ಪ್ರೇಗಳ, ಒಳ ಉಡುಪುಗಳ, ಶೇವಿಂಗ್ ಬ್ಲೇಡ್ ಮತ್ತು ಜೆಲ್‌ಗಳ, ಬೈಕ್‌ನ, ಫ್ಯಾನ್‌ನ, ಟಿವಿಯ, ಕುರ್ಚಿಯ, ತಿನಿಸಿನ ಎಲ್ಲಾ ಜಾಹೀರಾತುಗಳಲ್ಲೂ ಅರೆ ನಗ್ನ ಮಹಿಳೆ ಏಕಿರುತ್ತಾಳೆ? ಜಾಹೀರಾತು ಉದ್ದಿಮೆಗೆ ಯಾವ ಮೌಲ್ಯಗಳೂ ಇಲ್ಲವೇ? ಕತ್ತಲಲ್ಲಿ ಕೂತು ನಾಯಕನನ್ನು ಕಾಡಿಸುವ ದುಷ್ಟ ಕ್ಯಾಬರೆ ನರ್ತಕಿ ಮಾಡುತ್ತಿದ್ದ ಚೇಷ್ಟೆಗಳನ್ನು ಸಿನಿಮಾದ ರೂಪದಲ್ಲಿ ನೋಡುತ್ತಿದ್ದವರು ಇಂದು ಬೆಳಕಿನಲ್ಲಿ ಇಡೀ ಕುಟುಂಬದ ಜೊತೆಗೇ ಚಿತ್ರದ ನಾಯಕಿಯ ರೂಪದಲ್ಲೇ ನೋಡುತ್ತಿಲ್ಲವೇ? ಇದರ ಸಾಮಾಜಿಕ, ಸಾಂಸ್ಕೃತಿಕ, ಮಾನಸಿಕ ಆಯಾಮಗಳು, ಪರಿಣಾಮಗಳು ಏನೇನಾಗಿರಬಹುದು?

ಇವೆಲ್ಲವನ್ನೂ ಸರ್ಕಾರ ನಿಯಂತ್ರಿಸಲು ಸಾಧ್ಯವಿಲ್ಲವೇ? ಸರ್ಕಾರ ಇವೆಲ್ಲಕ್ಕೂ ಜವಾಬ್ದಾರಿಯಲ್ಲವೇ? ಇವೆಲ್ಲವೂ ಉದ್ದಿಮೆಗಳ ಭಾಗವಲ್ಲವೇ? ಉದ್ದಿಮೆದಾರರೇ ಅಲ್ಲವೇ ಸರ್ಕಾರವನ್ನು ನಿಯಂತ್ರಿಸುತ್ತಿರುವುದು? ಅಂದಮೇಲೆ ಇವೆಲ್ಲಕ್ಕೂ ಒಂದಕ್ಕೊಂದು ಸಂಬಂಧವಿಲ್ಲವೇ? ಈ ಪ್ರಶ್ನೆಗಳು ನಮಗೆ ಅತ್ಯಾಚಾರಕ್ಕೂ ಸರ್ಕಾರಕ್ಕೂ ಇರುವ ಸಂಬಂಧದತ್ತ ಬೆಟ್ಟು ಮಾಡಿ ತೋರಿಸುತ್ತವೆ.

ಅತ್ಯಾಚಾರ ಮಹಿಳೆಯ ದೇಹದ ಮೇಲೆ ನಡೆಸುತ್ತಿರುವ ಯುದ್ಧವೂ ಆಗಿದೆ.

ಅತ್ಯಾಚಾರದ ಸುದ್ದಿಗಳನ್ನೂ ಕುತೂಹಲದಿಂದ (ಮತ್ತಷ್ಟು ಹಸಿಯಾಗಿ ಹೇಳಬಹುದೆಂದರೆ ಬಾಯಿ ಚಪ್ಪರಿಸುತ್ತಾ) ಓದುವ ಓದುಗರಿದ್ದಾರೆ. ಅವರ ಅಭಿರುಚಿಯನ್ನು ಆ ರೀತಿ ಅರ್ಥಮಾಡಿಕೊಂಡಿರುವ ಅಥವಾ ಆ ರೀತಿ ರೂಪಿಸುತ್ತಿರುವ ಪತ್ರಕರ್ತರೂ ಇದ್ದಾರೆ. ಇವರು ಯಾವ ರೀತಿಯಿಂದಲೂ ಅತ್ಯಾಚಾರಿಗಳಿಗಿಂತ ಕಡಿಮೆಯಿಲ್ಲ, ಆದರೆ ಅವರು ಬಳಸುವ ಭಾಷೆಯು ಅವರನ್ನು ಸಮಾಜಕ್ಕೆ ಬುದ್ಧಿ ಹೇಳುವವರಂತೆಯೂ ಬಿಂಬಿಸುತ್ತದೆ. ವಾಸ್ತವದಲ್ಲಿ ಅವರು ಜನರ ಅಭಿರುಚಿಗಳನ್ನು ಹೀನವಾಗಿಸುವುದರಲ್ಲಿ ಪಾತ್ರ ವಹಿಸುತ್ತಿರುತ್ತಾರೆ. ಬೇರೆ ಬೇರೆ ಕೋನಗಳಿಂದ ಈ ಚರ್ಚೆಗೆ ಪ್ರವೇಶಿಸುವ ಕೆಲವರು ವಾಸ್ತವದಲ್ಲಿ ಪರೋಕ್ಷವಾಗಿ ಈ ವಿಕೃತಿಗೆ ಪೂರಕವಾಗಿರುತ್ತಾರೆ.

ಈ ಪುರುಷ ಸಮಾಜವು ತಲ್ಲಣಿಸಿ ಹೋಗುವಂತೆ ಒಂದು ಚಳವಳಿ ನಡೆಯಬೇಕು. ಅದಕ್ಕೆ ಹಲವು ಆಯಾಮಗಳಿರಬೇಕು. ಮಹಿಳೆಯ ದೇಹ ಪುರುಷನ ಆಸ್ತಿಯಲ್ಲ, ಆಕೆಯ ದೌರ್ಬಲ್ಯದ ಸಂಕೇತವೂ ಅಲ್ಲ, ಬದಲಿಗೆ ಅದು ಆಕೆಯ ವಿಶಿಷ್ಟವಾದ ಗುರುತು, ಶಕ್ತಿ ಮತ್ತು ಸ್ವಾಭಿಮಾನದ ಸಂಕೇತ ಎಂಬ ಮೌಲ್ಯ ಸ್ಥಾಪಿತವಾಗಬೇಕು. ಮಹಿಳೆಯ ದೇಹವೇ ಆಕೆಯ ಇಡೀ ಅಸ್ತಿತ್ವ, ದೇಹದ ಹೊರತಾಗಿ ಆಕೆಗೆ ಬೇರೆ ಅಸ್ತಿತ್ವವೇ ಇಲ್ಲ ಎಂಬಂತೆ ಬಿಂಬಿಸುತ್ತಾ ಬಂದಿರುವುದರಲ್ಲೇ ಅತ್ಯಾಚಾರದ ಬೇರುಗಳೂ ಹುದುಗಿವೆ. ಮಹಿಳೆ ಮತ್ತು ಆಕೆಯ ಸಂತಾನೋತ್ಪತ್ತಿಯ ಶಕ್ತಿಯು, ಪುರುಷರ/ಬಲಿಷ್ಠರ/ಆಳುವವರ ಆಸ್ತಿಯಾಗಿ ಪರಿಗಣಿಸಲ್ಪಡುತ್ತಿರುವುದರಿಂದಲೇ ಅತ್ಯಾಚಾರ ಎಂಬುದು ಆಕೆಯ ಮೇಲೆ ಅಧಿಕಾರ ಚಲಾಯಿಸುವ ಮಾರ್ಗವೆಂದಾಗಿದೆ. ತನ್ನ ದೇಹದ ಮೇಲೆ, ತನ್ನ ಬದುಕಿನ ಮೇಲೆ, ತನ್ನ ಆಯ್ಕೆಯ ಮೇಲೆ ಮಹಿಳೆ ತನ್ನದೇ ಹಕ್ಕನ್ನು ಅಸರ್ಟ್ ಮಾಡಲು ಹೊರಟ ಪ್ರತೀ ಸಂದರ್ಭದಲ್ಲೂ ಇಡೀ ಮಹಿಳಾ ಕುಲದ ಮೇಲೆ ತನಗಿರುವ ಅಧಿಪತ್ಯವನ್ನು ಈ ಪುರುಷಾಧಿಪತ್ಯದ ಸಮಾಜ ಅತ್ಯಾಚಾರದ ಮೂಲಕ ಮತ್ತೆ ಮತ್ತೆ ಮರುಸ್ಥಾಪಿಸುತ್ತದೆ. ಅತ್ಯಾಚಾರದ ವಿರುದ್ಧ ವಾದ ಮಾಡುವಾಗ, ಹಾಗಾದರೆ ಮಹಿಳೆ ಮನೆಯಲ್ಲಿರಬೇಕು ಎಂದು ಹೇಳುವವರು ವಾಸ್ತವದಲ್ಲಿ ಮಹಿಳೆಯರ ಈ ಅಸರ್ಷನ್ ಮೇಲೆ ದಾಳಿ ಮಾಡುತ್ತಿರುತ್ತಾರೆ.

ಈಗ, ಕೊನೆಯಿಲ್ಲದ ಲಾಭದಾಹಿ ಉದ್ದಿಮೆದಾರರೂ ಕೂಡಾ ಹೆಣ್ಣನ್ನು ತಮಗೆ ಬೇಕುಬೇಕಾದಂತೆಲ್ಲಾ ಪ್ರದರ್ಶಿಸುತ್ತಾ, ಮತ್ತೆ ಮಹಿಳಾ ಸಮುದಾಯದ ಮೇಲೆ ಅಧಿಪತ್ಯ ಸಾಧಿಸುತ್ತಿದ್ದಾರೆ. ಇಲ್ಲಿ ಮಹಿಳೆ ಆಯ್ಕೆ ಮಾಡುವ ತುದಿಯಲ್ಲಿಲ್ಲ; ಎಲ್ಲದರ ಪರಿಣಾಮವನ್ನು ಅನುಭವಿಸುವ ತುದಿಯಲ್ಲಿದ್ದಾಳೆ. ಹೆಣ್ಣು ಶಿಶುಗಳ ಮಾರಾಟ ಹೆಚ್ಚಿದೆ; ಹೆಣ್ಣುಮಕ್ಕಳ ಸಾಗಾಣಿಕೆ ಹೆಚ್ಚಿದೆ; ಹೆಣ್ಣುಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಹೆಚ್ಚಿದೆ; ಹೆಣ್ಣುಮಕ್ಕಳ ಮೇಲಿನ ಅತ್ಯಾಚಾರ ಹೆಚ್ಚಿದೆ; ಹೆಣ್ಣುಮಕ್ಕಳ ಕೊಲೆ ಹೆಚ್ಚಿದೆ.......ಇದು ಸ್ಫೋಟಗೊಳ್ಳುವ ಬಿಂದುವಿನ ಸಮೀಪಕ್ಕೆ ತಲುಪಿದೆ. ದೊಡ್ಡ ವಿಪತ್ತು ನಮ್ಮ ಸಮಾಜದ ಮೇಲೆರಗಿದೆ; ಇಡೀ ಮಹಿಳಾ ಸಂಕುಲದ ಮೇಲೆ ಸರ್ಕಾರದಿಂದ, ಬಂಡವಾಳಿಗರಿಂದ, ಕೇಡು ಮನಸ್ಸಿನ ಗಂಡಸರಿಂದ ಅಘೋಷಿತ ಯುದ್ಧ ನಡೆಯುತ್ತಿದೆ!


ಈ ಯುದ್ಧ ಮುಗಿಸಲು ಅತ್ಯಾಚಾರಗಳ ವಿರುದ್ಧ, ಅದನ್ನು ಹೆಣ್ಣುಮಕ್ಕಳ ಮೇಲೆ ಹೇರುತ್ತಿರುವ ದುಷ್ಟ ಶಕ್ತಿಗಳ ವಿರುದ್ಧ ಸೆಣಸುವ ಜೀವಪರರ ಪಡೆ ಹಿಂದೆಂದಿಗಿಂತಲೂ ಇಂದು ಬೇಕಾಗಿದೆ. ಈ ಪಡೆ ಈಗ ಕಾರ್ಯಪ್ರವೃತ್ತವಾಗದಿದ್ದರೆ ಸಂದರ್ಭ ನಮ್ಮ ಮುಂದಿಡುತ್ತಿರುವ ಕರ್ತವ್ಯದ ಕರೆಗೆ ವಿಮುಖರಾಗಿ ಓಡಿದಂತೆ.

ನೀವಿರುವಲ್ಲಿ, ನಿಮಗೆ ಸಾಧ್ಯವಾಗಬಹುದಾದ ಯಾವುದೇ ರೀತಿಯಲ್ಲಿ ನೀವು ಅತ್ಯಾಚಾರ ವಿರೋಧಿ ಪಡೆಯ ಭಾಗವಾಗಲಾರಿರಾ? ಪುಟ್ಟ ಕಂಗಳಲ್ಲಿ ಕನಸು ಕಟ್ಟಿಕೊಂಡಿರುವ ಅಸಂಖ್ಯಾತ ಮುದ್ದು ಕಂದಮ್ಮಗಳನ್ನು, ಇನ್ನಾದರೂ ಅವರ (ಮತ್ತು ನಮ್ಮ) ನಾಳೆಗಳಿಗಾಗಿ ನಾವು ಉಳಿಸಿಕೊಳ್ಳಬೇಕಲ್ಲವೇ?


ರಾಯಚೂರಿನಲ್ಲಿ ಕಳೆದ ಎರಡು ಬೆಚ್ಚಗಿನ ದಿನಗಳು




• ಗೌರಿ ಲಂಕೇಶ್
editorlankesh@gmail.com



ಮೊನ್ನೆ ರಾಯಚೂರಿನಲ್ಲಿ ಪಿ.ಲಂಕೇಶರ 79ನೇ ಹುಟ್ಟುಹಬ್ಬ ಮತ್ತು ನಮ್ಮ ಸಂಸ್ಥೆಯ ಒಂಭತ್ತನೇ ವಾರ್ಷಿಕೋತ್ಸವ ತುಂಬಾ ಚೆನ್ನಾಗಿ ನಡೆಯಿತು. ಎಷ್ಟರ ಮಟ್ಟಿಗೆಂದರೆ ಇಲ್ಲಿತನಕ ನಡೆದಿರುವ ನಮ್ಮ ಇತರೆ ಸಭೆಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಅಂದು ಜನ ಸೇರಿದ್ದರು. ಅವತ್ತಿನ ವಿಶೇಷತೆಗಳಲ್ಲಿ ಮುಖ್ಯವಾದದ್ದು ರಾಯಚೂರು





ಮತ್ತು ಸುತ್ತಮುತ್ತಲಿನ ಊರುಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದ ಯುವಕ, ಯುವತಿಯರು ಕಾರ್ಯಕ್ರಮದಲ್ಲಿ ಉತ್ಸಾಹದಿಂದ ಭಾಗವಹಿಸಿದ್ದು. ಈ ಕಾರ್ಯಕ್ರಮದ ಯಶಸ್ಸು ಸಂಪೂರ್ಣವಾಗಿ ಕರ್ನಾಟಕ ಜನಶಕ್ತಿಯ ಕುಮಾರ್ ಸಮತಳ ಮತ್ತು ಅದನ್ನು ಆಯೋಜಿಸಿದ್ದ ಸಂಘಸಂಸ್ಥೆಗಳಿಗೆ ಮತ್ತು ಸಹಕರಿಸಿದ ಲಂಕೇಶ್ ಅಭಿಮಾನಿಗಳಿಗೆ ಸಲ್ಲುತ್ತದೆ.

ನಮ್ಮ ತಂಡ ಶುಕ್ರವಾರ ಮಧ್ಯರಾತ್ರಿ ರಾಯಚೂರು ತಲುಪಿದಾಗ ಆಗ ತಾನೇ ಸುರಿದಿದ್ದ ಮಳೆಯಿಂದಾಗಿ ಇಡೀ ಊರು ತಂಪಾಗಿತ್ತು. ಮಾರನೆ ದಿನ ಅಪ್ಪನ ಹುಟ್ಟುಹಬ್ಬ. ಬೆಳಗ್ಗೆ ಎದ್ದ ಕೂಡಲೆ ಅಪ್ಪನಿಗೆ ಒಂದು 'ಮಿಯಾಂವ್' ಹೇಳಿದೆ. ಅವತ್ತು ಹತ್ತು ಗಂಟೆಗೆ ಸ್ಥಳೀಯ ಪ್ರಥಮ ದರ್ಜೆ ಸರ್ಕಾರಿ ಕಾಲೇಜಿನಲ್ಲಿ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಸಂತೋಷದ ಸಂಗತಿ ಯಾವುದೆಂದರೆ ಆ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿನಿಯರಿದ್ದದ್ದು. ಅದರಲ್ಲೂ ಬುರ್ಖಾ ತೊಟ್ಟಿದ್ದ ಹಲವಾರು ಮುಸ್ಲಿಮ್ ಯುವತಿಯರನ್ನು ಕಂಡು ಸಂತೋಷವಾಯಿತು. ರಾಯಚೂರಿನಂತಹ ಊರಿನಲ್ಲೂ ಬಡ ಮುಸ್ಲಿಮರು ತಮ್ಮ ಪುತ್ರಿಯರನ್ನು ವಿದ್ಯಾಭ್ಯಾಸಕ್ಕೆ ಕಳುಹಿಸುತ್ತಿರುವುದು ನನ್ನಲ್ಲಿ ಭವಿಷ್ಯದ ಬಗ್ಗೆ ಭರವಸೆ ಮೂಡಿಸಿತು. ಮಹಿಳೆಯರ ಹಕ್ಕು, ಸಾಮರ್ಥ್ಯ, ವಾಸ್ತವ ಪರಿಸ್ಥಿತಿ ಇತ್ಯಾದಿಗಳನ್ನು ಕುರಿತು ನಾನು ಒಂದೆರಡು ಮಾತುಗಳನ್ನಾಡಿದ ನಂತರ ಅಲ್ಲಿದ್ದ ಯುವ ಸಮುದಾಯದ ಜೊತೆ ಒಂದಿಷ್ಟು ಪ್ರಶ್ನೋತ್ತರಗಳು.

ಅದಾದ ನಂತರ ಪತ್ರಕರ್ತರ ಸಂಘದಲ್ಲಿ ಸ್ಥಳೀಯ ಪತ್ರಕರ್ತರೊಂದಿಗೆ ಅನೌಪಚಾರಿಕ ಸಂವಾದ ಇತ್ತು. ಕಾರ್ಪೊರೇಟ್ ಬಂಡವಾಳ, ಕೋಮುವಾದ ಮತ್ತು ಭ್ರಷ್ಟಾಚಾರ ಜೊತೆಗೂಡಿ ಹೇಗೆ ಮಾಧ್ಯಮಗಳ ಮೇಲೆ ಪ್ರಭಾವ ಬೀರುತ್ತಿವೆ, ಮುಂದಿನ ದಿನಗಳಲ್ಲಿ 'ಪರ್ಯಾಯ ಮಾಧ್ಯಮ'ಕ್ಕೆ ಭವಿಷ್ಯವಿದೆಯೇ ಎಂದೆಲ್ಲ ಚರ್ಚಿಸಿದೆವು.

ಈ ಹಿಂದೆ ರಾಯಚೂರಿಗೆ ಹೋಗಿದ್ದಾಗ ಅಲ್ಲಿನ ಕೋಟೆಯಲ್ಲಿರುವ ಪುಟ್ಟ ಖಾನಾವಳಿಯಲ್ಲಿ ತುಂಬಾ ರುಚಿಕರವಾದ ಊಟ ಮಾಡಿದ್ದರ ನೆನಪಾಯಿತು. "ಅದು ಹೆಂಚಿನ ಮನೆ. ಹೊರಗೊಂದು ಚಿಕ್ಕ ಜಗುಲಿ ಇತ್ತು. ಒಳಗೆ ಮಂಚದ ಮೇಲಿನ ಹಾಸಿಗೆಯನ್ನು ಸುತ್ತಿಟ್ಟು ಮಂಚವನ್ನೇ ಟೇಬಲ್ ಆಗಿ ಉಪಯೋಗಿಸಿದ್ದರು" ಎಂದು ಆ ಖಾನಾವಳಿಯ ಬಗ್ಗೆ ಹೇಳಿದಾಗ ಸ್ಥಳೀಯ ಮಿತ್ರರು "ಅದು ಸ್ವಾಮಿ ಖಾನಾವಳಿ. ಇಲ್ಲೇ ಅವರದ್ದು ಇನ್ನೊಂದು ಖಾನಾವಳಿ ಪ್ರಾರಂಭವಾಗಿದೆ" ಎಂದು ಅಲ್ಲಿಗೆ ಮಧ್ಯಾಹ್ನದ ಊಟಕ್ಕೆ ಕರೆದುಕೊಂಡು ಹೋದರು. ಬಿಸಿಬಿಸಿ ಜೋಳದ ರೊಟ್ಟಿ, ರುಚಿಕರವಾದ ಸೊಪ್ಪಿನ ಪಲ್ಯ, ಕಾಳು, ಗಟ್ಟಿ ಮೊಸರು... ಆಹಾ... ಹೊಟ್ಟೆ ಬಿರಿಯುವಂತೆ ತಿಂದಿದ್ದಾಯಿತು.

ಶನಿವಾರ ಸಂಜೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಮಹಾಂತೇಶ ಮಸ್ಕಿ ಮತ್ತು ಲೋಹಿಯಾ ಪ್ರತಿಷ್ಠಾನದ ಭೀಮನಗೌಡ ಇಟಗಿ ಅವರು ಅಂಧಮಕ್ಕಳ ಶಾಲೆಯೊಂದರಲ್ಲಿ ಹಣ್ಣು ಮತ್ತು ಸಿಹಿ ಹಂಚುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಅದು ಅಪ್ಪನ ಹುಟ್ಟುಹಬ್ಬಕ್ಕೆಂದು ಅವರು ಹಾಕಿಕೊಂಡಿದ್ದ ಯೋಜನೆ ಎಂದು ಗೊತ್ತಾದಾಗ ನಾನೇ ಅದರ ವೆಚ್ಚವನ್ನು ಭರಿಸುತ್ತೇನೆ ಎಂದೆ. ಅಂಧಮಕ್ಕಳ ಶಾಲೆಗೆ ಹೋಗುವ ವಿಚಾರವನ್ನು ನನ್ನ ಮಗಳು ಇಶಾಳಿಗೆ ಹೇಳಿದಾಗ ಆಕೆ "ಆ ಶಾಲೆಯಲ್ಲಿರುವ ಮಕ್ಕಳ ವಯಸ್ಸು ಎಷ್ಟು? ಚಿಕ್ಕ ಮಕ್ಕಳಾಗಿದ್ದರೆ ಹಣ್ಣು ಮತ್ತು ಸ್ವೀಟ್ಸ್ ಜೊತೆ ಅವರಿಗೆ ಇನ್ನೂ ಏನನ್ನಾದರೂ ತೆಗೆದುಕೊಂಡು ಹೋಗು" ಎಂದು ಆದೇಶಿಸಿದಳು. ಆದರೆ ಶಾಲೆ ಎಂತಹದ್ದು ಎಂದು ನೋಡಿದ ಮೇಲೆ ಬೇರೆ ಏನನ್ನು ಕೊಡಬಹುದು ಎಂದು ನಿರ್ಧರಿಸಿದರಾಯಿತು ಎಂದು ಮಸ್ಕಿ ಮತ್ತು ಇಟಗಿ ಅವರೊಂದಿಗೆ ಹೊರಟೆ. ನಮ್ಮ ಜೊತೆ ಕವಿ ಚಿದಾನಂದ ಸಾಲಿ ಕೂಡ ಬಂದರು. ಶಾಲೆಗೆ ಹೋಗುತ್ತಿರುವಾಗ ಸಾಲಿ ಅವರು "ಪ್ರತಿವರ್ಷ ನನ್ನ ಮಗಳ ಹುಟ್ಟುಹಬ್ಬದಂದು ಇಲ್ಲಿನ ಮಕ್ಕಳಿಗೆ ಊಟ ಹಾಕಿಸುವ ವ್ಯವಸ್ಥೆ ಮಾಡುತ್ತೇನೆ. ಅದಕ್ಕೆ ಅವರು ಪಡೆಯುವುದು ಬರೀ ಮೂರು ಸಾವಿರ ರೂಪಾಯಿ" ಎಂದರು. ನಾನೂ ಹಾಗೆ ಮಾಡಬಹುದಲ್ಲ ಅನ್ನಿಸಿತು.

ಮಾಣಿಕ ಪ್ರಭು ಅಕಾಡೆಮಿ ಫಾರ್ ದಿ ಬ್ಲೈಂಡ್ ಒಂದು ಪುಟ್ಟ ಗುಡ್ಡದ ಮೇಲಿದೆ. ಅಲ್ಲಿ ಓದುತ್ತಿರುವ ಹುಡುಗ ಹುಡುಗಿಯರೆಲ್ಲರೂ ಬಡಕುಟುಂಬದವರೇ. ಹಾಗೆಯೇ ಅಲ್ಲಿ ಕೆಲಸ ಮಾಡುತ್ತಿರುವವರೆಲ್ಲರೂ - ಅಡುಗೆ ಮಾಡುವವರನ್ನು ಹೊರತುಪಡಿಸಿ - ಅಂಧರೇ. ಅಲ್ಲಿನ ಮುಖ್ಯೋಪಾಧ್ಯಾಯರಿಗೆ ನಮ್ಮ ಉದ್ದೇಶ ಹೇಳಿದಾಗ "ಲಂಕೇಶ್ ಅವರ ಹೆಸರಿನಲ್ಲಿ ನಮ್ಮ ಮಕ್ಕಳಿಗೆ ನೆರವಾದರೆ ತುಂಬಾ ಸಂತೋಷ" ಎಂದರು. ತನ್ನ ಕೊನೆಯ ವರ್ಷಗಳನ್ನು ಒಂದೇ ಕಣ್ಣಿನೊಂದಿಗೆ ಕಳೆದ, ಇದ್ದ ಒಂದು ಕಣ್ಣು ಕೂಡ ಹೊರಟುಹೋದರೆ ಏನು ಗತಿ ಎಂದು ಚಿಂತಿಸುತ್ತಿದ್ದ ಅಪ್ಪನ ನೆನಪಾಗಿ ನಾನು ಭಾವುಕಳಾದೆ.

ಬರುವ ಮೂರು ದಿನಗಳ ಕಾಲ ಇತರರು ಅಲ್ಲಿನ ಮಕ್ಕಳಿಗೆ ಊಟದ ವ್ಯವಸ್ಥೆ ಮಾಡಿದ್ದರಿಂದ ಮಾರನೆ ಬೆಳಗ್ಗೆ ಪಿ. ಲಂಕೇಶರ ನೆನಪಲ್ಲಿ ಅವರ ಮೊಮ್ಮಗಳು ಇಶಾಳ ಹೆಸರಲ್ಲಿ ತಿಂಡಿ ಕೊಡುವ ವ್ಯವಸ್ಥೆ ಮಾಡಲಾಯಿತು. ಅವತ್ತು ಸಂಜೆ ಇದರ ಬಗ್ಗೆ ಇಶಾಳಿಗೆ ಹೇಳಿ ಮುಂದಿನ ವರ್ಷದಿಂದ ಪ್ರತಿ ಮಾರ್ಚ್ 8ರಂದು ಅಲ್ಲಿನ ಮಕ್ಕಳಿಗೆ ಇಶಾಳ ಹೆಸರಲ್ಲಿ ಊಟ ಹಾಕುವ ವ್ಯವಸ್ಥೆ ಮಾಡುತ್ತೇನೆಂದು ಹೇಳಿದೆ. ಆಗ ಆ ಒಂಭತ್ತು ವರ್ಷದ ಬಾಲಕಿ ಏನಂದಳು ಗೊತ್ತಾ? "ಓಕೆ ಅವ್ವ. ಆದರೆ ಅದಕ್ಕೆ ನೀನು ದುಡ್ಡು ಕೊಡಬೇಡ. ನಾನೇ ಕೊಡುತ್ತೇನೆ" ಎಂದಳು. (ಆಕೆಗೆ ಪ್ರತಿ ವರ್ಷ ಉಡುಗೊರೆಯಾಗಿ ಸಾಕಷ್ಟು 'ಆದಾಯ' ಬರುತ್ತದೆ!) ಅಪ್ಪನ 79 ನೇ ಹುಟ್ಟುಹಬ್ಬಕ್ಕೆ ಇದಕ್ಕಿಂತ ಸೂಕ್ತವಾದ ಉಡುಗೊರೆ ಇನ್ನೊಂದಿರಲಾರದು ಅಲ್ಲವೇ?

ಇಷ್ಟು ಹೇಳಿದ ಇಶಾ ಇನ್ನೊಂದು ಕಂಡೀಷನ್ ಹಾಕಿದಳು. "ಬೆಳಗ್ಗೆ ಆ ಶಾಲೆಗೆ ಹೋಗಿ ಅಲ್ಲಿನ ಮಕ್ಕಳ ಫೋಟೋ ತೆಗೆದುಕೊಂಡು, ನನ್ನ ಹೆಸರನ್ನು ಬ್ರೈಲ್ ಲಿಪಿಯಲ್ಲಿ ಬರೆಸಿಕೊಂಡು ಬಾ. ಅದು ಹೇಗಿರುತ್ತೆ ಅಂತ ನಾನು ನೋಡಬೇಕು" ಎಂದಳು. ಪುಟ್ಟ ಬಾಸ್ ಹೇಳಿದಂತೆ ಮಾರನೆ ಬೆಳಗ್ಗೆ ಆಟೋ ಏರಿ ಮಾಣಿಕ ಪ್ರಭು ಶಾಲೆಯಲ್ಲಿ ಹಾಜರಾದೆ. ಆ ಶಾಲೆಯಲ್ಲಿ ಓದುತ್ತಿರುವ ನಾಗೇಂದ್ರ ಎಂಬ ಹುಡುಗ ಬ್ರೈಲ್ ಲಿಪಿಯಲ್ಲಿ ಶಾಲೆಯ ಹೆಸರನ್ನು, ಹಲವು ವಿದ್ಯಾರ್ಥಿಗಳ ಹೆಸರುಗಳನ್ನು ಮತ್ತು ಇಶಾಳ ಹೆಸರನ್ನು ಒಂದು ಹಾಳೆಯಲ್ಲಿ ಬರೆದು ಕೊಟ್ಟ.

ಹಲವು ವರ್ಷಗಳ ಹಿಂದೆ ರಾಯಚೂರಿಗೆ ಹೋಗಿದ್ದಾಗ ಹಿರಿಯ ಬಂಡಾಯ ಸಾಹಿತಿ ಜಂಬಣ್ಣ ಅಮರಚಿಂತ ಅವರನ್ನು ಭೇಟಿಯಾಗಿದ್ದೆ. ಅವತ್ತು ಅವರು ಬರೆದಿದ್ದ ಹಲವು ಪದ್ಯಗಳನ್ನು ಅವರಿಂದ ಪಡೆದು ಅವುಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಿದ್ದೆ. ಮಧ್ಯಾಹ್ನ ನಮ್ಮ ಬಳಗದ ಮಿತ್ರ ಪ್ರೊ. ಶಿವರಾಮಯ್ಯನವರು "ಜಂಬಣ್ಣ ಅವರ ಆರೋಗ್ಯ ಈಗ ಅಷ್ಟು ಚೆನ್ನಾಗಿಲ್ಲ. ಅವರನ್ನು ನೋಡಿಕೊಂಡು ಬರೋಣವೇ?" ಎಂದರು.


ಸರಿ, ಶಿವರಾಮಯ್ಯ, ಯೋಗೇಶ್ ಮಾಸ್ಟರ್ ಮತ್ತು ನಾನು ಒಂದು ಆಟೋ ಹತ್ತಿ ಜಂಬಣ್ಣ ಅವರ ಮನೆಗೆ ಹೋದೆವು. ಈಗ 69 ವರ್ಷ ಪ್ರಾಯದ ಜಂಬಣ್ಣನವರು ತುಂಬಾ ಸೊರಗಿದ್ದಾರೆ. ಹೆಚ್ಚು ಓಡಾಡಲು ಅವರಿಂದ ಆಗುವುದಿಲ್ಲ. ಆದರೂ ಅವರು ಪ್ರೀತಿಯಿಂದ ನಮ್ಮನ್ನೆಲ್ಲ ತಮ್ಮ ಮನೆಗೆ ಬರಮಾಡಿಕೊಂಡರು, ಆತ್ಮೀಯವಾಗಿ ಮಾತನಾಡಿಸಿದರು. ಜಂಬಲದಿನ್ನಿ ರಂಗಮಂದಿರದಲ್ಲಿ ನಮ್ಮ ಕಾರ್ಯಕ್ರಮ ಮುಂದುವರೆಯುತ್ತಿದ್ದರಿಂದ ನಾವು ಅವರ ಮನೆಯಲ್ಲಿ ಹೆಚ್ಚು ಕಾಲ ಕಳೆಯುವಂತಿರಲಿಲ್ಲ. ನಾವು ಹೊರಟುನಿಂತಾಗ ಜಂಬಣ್ಣನವರು ಒಂದು ಪದ್ಯವನ್ನು ರಚಿಸಿ ಹೇಳಿದರು. ಅದು ಹೀಗಿತ್ತು:

ನಿಮ್ಮ ಪ್ರೀತಿ ವಿಶ್ವಾಸದ ಬೆಳಕು
ಸದಾ ನಮ್ಮ ಜೊತೆಗಿರಲಿ
ಯಾರಿಗೆ ಗೊತ್ತು ಯಾವಾಗ ಎಲ್ಲಿ
ಸಂಜೆಯಾಗುವುದೋ
ಬಾಳೆಂಬ ಈ ಪಥದಲ್ಲಿ,

ಮುಂದಿನ ಬಾರಿ ರಾಯಚೂರಿಗೆ ಬಂದಾಗ ಅವರನ್ನು ಮತ್ತೆ ಭೇಟಿ ಆಗುವುದಾಗಿ ಹೇಳಿ ಹೊರಟೆವು. ನಾವು ರಂಗಮಂದಿರಕ್ಕೆ ವಾಪಸ್ ಆದಾಗ ಸಮಾರೋಪ ಸಭೆ ಪ್ರಾರಂಭವಾಗಿತ್ತು. ಕೊನೆಗೆ ಹತ್ತಾರು ಯುವಕರೊಂದಿಗೆ ನಾನೂ ದನಿಗೂಡಿಸಿ "ಕಟ್ಟುತ್ತೇವ ನಾವು ಕಟ್ಟುತ್ತೇವ" ಹಾಡನ್ನು ಹೇಳುವ ಮೂಲಕ ಸಮಾರಂಭ ಅಂತ್ಯಗೊಂಡಿತು.

ರಾಯಚೂರಿನ ವಿಶಾಲ ಹೃದಯದ, ಸ್ನೇಹಮಯಿ ಮಿತ್ರರ ಜೊತೆ ಎರಡು ದಿನಗಳನ್ನು ಕಳೆದಿದ್ದಾಯಿತು. ಅವತ್ತೇ ರಾತ್ರಿ ವಿವಿಧ ಊರುಗಳಿಂದ ಬಂದಿದ್ದ ಮಿತ್ರರೆಲ್ಲರೂ ಹೊರಡುತ್ತಿದ್ದರು. ಆದ್ದರಿಂದ ಕುಮಾರ್ ಬುರಡಿಕಟ್ಟಿ ಮತ್ತು ಮೃತ್ಯುಂಜಯ ಅವರು ಎಲ್ಲರಿಗೂ ಊಟದ ವ್ಯವಸ್ಥೆ ಮಾಡಿದ್ದರು. ಎ.ಕೆ.ಸುಬ್ಬಯ್ಯ, ನಗರಿ ಬಾಬಯ್ಯ, ರಹಮತ್ ತರೀಕೆರೆ, ಅವರ ಪತ್ನಿ ಬಾನು, ಕೆ.ಫಣಿರಾಜ್, ಶಶಿಧರ್ ಹೆಮ್ಮಾಡಿ, ಮಂದೀಪ್, ಶ್ರೀಶಾ, ಖಲಂದರ್, ಡಾ. ವಿ.ಎಸ್.ಶ್ರೀಧರ್, ಪ್ರೊ. ಶಿವರಾಮಯ್ಯ, ಯೋಗೇಶ್ ಮಾಸ್ಟರ್ ಮತ್ತು ಇತರರು ಸೇರಿ ಒಂದಿಷ್ಟು ಹರಟೆ ಹೊಡೆಯುತ್ತಾ, ಪಾನೀಯ ಸೇವಿಸುತ್ತಾ ಊಟ ಮುಗಿಸಿ ನಮ್ಮನಮ್ಮ ರೈಲು ಮತ್ತು ಬಸ್ ಹತ್ತಿ ರಾಯಚೂರಿಗೆ ವಿದಾಯ ಹೇಳಿದೆವು...


ರಾಯಚೂರಿನ ಕಾರ್ಯಕ್ರಮವನ್ನು ಯಶಸ್ವಿಯಾಗಿಸಿದ ಎಲ್ಲಾ ಮಿತ್ರರಿಗೂ ನನ್ನ ಕೃತಜ್ಞತೆಗಳು...







ಅನಿಲ ದರ ವಿವಾದ



ದೇಶದ ಸಂಪತ್ತಿಗೆ ಅಂಬಾನಿ ಮಾಲಿಕನೇ?

ದೇಶದ ಆರ್ಥಿಕತೆಯಲ್ಲಿ ಕೈಗಾರಿಕೆಗಳಿಗೆ ಮಹತ್ವದ ಪಾತ್ರವಿದೆ. ಯಾವುದೇ ಕೈಗಾರಿಕೋದ್ಯಮ ಲಾಭದ ಲೆಕ್ಕಾಚಾರವಿಲ್ಲದೆ ನಡೆಯಲಾರದು ಎಂಬುದು ಕೂಡ ಕಾಮನ್‌ಸೆನ್ಸ್‌ನ ವಿಚಾರವೇ. ಆದ್ದರಿಂದಲೇ ಉದ್ಯಮಿಗಳಿಗೆ ನಿರ್ದಿಷ್ಟ ಲಾಭವನ್ನು ಖಾತ್ರಿ ಮಾಡುತ್ತಲೇ ದೇಶದ ಸಾರ್ವಜನಿಕರ ಹಿತಾಸಕ್ತಿಯನ್ನು ಕಾಪಾಡಬೇಕಾದ್ದು ಸರ್ಕಾರಗಳ ಕರ್ತವ್ಯ. ಆದರೆ ಅಡಿಯಿಂದ ಮುಡಿಯವರೆಗೆ ಭ್ರಷ್ಟಾಚಾರದಲ್ಲಿ ಮುಳುಗಿಹೋಗಿರುವ ಇಂದಿನ ಸರ್ಕಾರಗಳು ಅನುಸರಿಸುತ್ತಿರುವ ನೀತಿಯಾದರೂ ಎಂಥದ್ದು? ರಿಲಯನ್ಸ್‌ನಂಥ ಖಾಸಗಿ ಕಂಪನಿಗಳೊಂದಿಗೆ ಶಾಮೀಲಾಗಿ ಸಾರ್ವಜನಿಕ ಹಿತಾಸಕ್ತಿಯನ್ನು ಬಲಿ ಕೊಡುತ್ತಿವೆ. ಕಳೆದ ಹಲವು ವಾರಗಳಿಂದ ಭಾರೀ ಸುದ್ದಿಯಲ್ಲಿರುವ ನೈಸರ್ಗಿಕ ಅನಿಲ ಬೆಲೆ ನಿಗದಿ ಹಗರಣ ಇದಕ್ಕೆ ಉತ್ತಮ ಉದಾಹರಣೆ.

ಈ ಹಗರಣದ ಆರೋಪಿಗಳು ಯಾರೋ ನಗಣ್ಯವಾದ ವ್ಯಕ್ತಿಗಳಲ್ಲ, ಇಡೀ ದೇಶದ ಕೈಗಾರಿಕಾ ನಕಾಶೆಯಲ್ಲಿ ಪ್ರಥಮ ಸ್ಥಾನದಲ್ಲಿರುವ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ (RIL) ಕಂಪನಿಯ ಒಡೆಯ ಮುಖೇಶ್ ಅಂಬಾನಿ ಹಾಗೂ ಪೆಟ್ರೋಲಿಯಂ ಖಾತೆಯ ಹಾಲಿ ಸಚಿವ ವೀರಪ್ಪ ಮೊಯ್ಲಿ ಮತ್ತು ಮಾಜಿ ಸಚಿವ ಮುರಳಿ ದೇವ್ರಾ ಮುಂತಾದವರೇ ಈ ಪ್ರಕರಣದ ಪ್ರಮುಖ ಆರೋಪಿಗಳು!

ಹೀಗಾಗುತ್ತದೆಂದು ಹಲವು ವಾರಗಳ ಹಿಂದೆ ಯಾರೂ ನಿರೀಕ್ಷಿಸಿರಲಿಲ್ಲ, ಭ್ರಷ್ಟಾಚಾರದ ವಿರುದ್ಧ ಸಮರ ಸಾರಿರುವ ಆಮ್ ಆದ್ಮಿ ಪಕ್ಷದ ನಾಯಕ ಹಾಗೂ ದೆಹಲಿಯ ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಈ ಮೇಲಿನ ಆರೋಪಿಗಳ ವಿರುದ್ಧ ಇಂಥಾ ಗಹನವಾದ ಕೇಸು ದಾಖಲಿಸಿದ್ದಾರೆ. ತಮ್ಮ 49 ದಿನಗಳ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡುವ ಮುನ್ನ ಇಂಥಾ ಒಂದು ಚಾರಿತ್ರಿಕ ಹೆಜ್ಜೆ ಇರಿಸಿ ಇಡೀ ದೇಶದ ಗಮನ ಸೆಳೆದಿದ್ದಾರೆ.

ದೆಹಲಿ ಸರ್ಕಾರ ಇಂಥಾ ಒಂದು ಕ್ರಮಕ್ಕೆ ಮುಂದಾಗಲು ಕಾರಣ ಕೆಲವು ನಾಗರಿಕರು ದಾಖಲಿಸಿದ ಮಹತ್ವದ ಒಂದು ದೂರು. ಇಂಥಾ ದೂರು ದಾಖಲಿಸಿದವರೂ ಕೂಡ ಯಾರೋ ಜನಸಾಮಾನ್ಯರಲ್ಲ, ಮಾಜಿ ಕ್ಯಾಬಿನೆಟ್ ಕಾರ್ಯದರ್ಶಿ ಟಿ.ಎಸ್.ಆರ್.ಸುಬ್ರಮಣ್ಯನ್, ನೌಕಾಪಡೆಯ ಮಾಜಿ ಮುಖ್ಯಸ್ಥ ಆರ್.ಎಚ್.ತಹಿಲ್ಯಾನಿ, ಹೆಸರಾಂತ ವಕೀಲರಾದ ಕಾಮಿನಿ ಜೈಸ್ವಾಲ್, ಕೇಂದ್ರದ ಮಾಜಿ ಕಾರ್ಯದರ್ಶಿ ಇ.ಎ.ಎಸ್.ಶರ್ಮ.

ರಿಲಯನ್ಸ್ ಕಂಪನಿಯ ಮುಖೇಶ್ ಅಂಬಾನಿ ಜೊತೆ ಕೇಂದ್ರದ ಸಚಿವರು ಮತ್ತು ಇತರರು ಶಾಮೀಲಾಗಿ ಕಂಪನಿ ಹೊರತೆಗೆಯುತ್ತಿರುವ ಗ್ಯಾಸ್‌ನ ಬೆಲೆಯನ್ನು ಯದ್ವಾತದ್ವಾ ಹೆಚ್ಚಿಸಿ ಸರ್ಕಾರಕ್ಕೆ ಭಾರೀ ನಷ್ಟ ಉಂಟುಮಾಡಿದ್ದಾರೆ ಎಂಬುದು ಈ ದೂರಿನ ಸಾರಾಂಶ.

ಸದರಿ ದೂರಿನ ಪ್ರಕಾರ "ಒಂದು ವೇಳೆ ನಿಗದಿ ಮಾಡಿರುವ ಈ ಹೊಸ ದರ ಜಾರಿಗೆ ಬಂದರೆ ಜನಸಾಮಾನ್ಯರ ಬದುಕು ದುರ್ಬರವಾಗಿ ಪರಿಣಮಿಸುತ್ತದೆ. ಏಕೆಂದರೆ ಇದು ಸಾರಿಗೆ ದರ, ಅಡುಗೆ ಅನಿಲ ದರ ಮತ್ತು ಎಲೆಕ್ಟ್ರಿಸಿಟಿ ದರಗಳ ಮೇಲೆ ಮಾರಕ ಪರಿಣಾಮ ಬೀರುತ್ತದೆ. ಅನಿಲ ದರ ಏರಿಕೆಯಿಂದ ದೇಶಕ್ಕೆ ಪ್ರತಿವರ್ಷ ಕನಿಷ್ಟ 54,500 ಕೋಟಿ ರೂಪಾಯಿಗಳ ನಷ್ಟವುಂಟಾಗುತ್ತದೆ. ಅದೇ ಸಂದರ್ಭದಲ್ಲಿ ರಿಲಯನ್ಸ್ ಕಂಪನಿ ಭವಿಷ್ಯದಲ್ಲಿ 1.2 ಲಕ್ಷ ಕೋಟಿಗಳಷ್ಟು ಭಾರೀ ಲಾಭ ಬಾಚಲು ಸರ್ಕಾರ ಅನುವು ಮಾಡಿಕೊಟ್ಟಿದೆ."

"2000ದ ಏಪ್ರಿಲ್ 12ರಂದು ಆರ್‌ಐಎಲ್ ಮತ್ತು ನಿಕೊ ರಿಸೋರ್ಸಸ್ ಲಿಮಿಟೆಡ್ ಎಂಬ ಎರಡು ಕಂಪನಿಗಳ ಜೊತೆ ಕೇಂದ್ರ ಸರ್ಕಾರ ಕೆಜಿ-ಡಿ6 ಎಂದು ಗುರುತಿಸಲಾಗುವ ಪ್ರದೇಶದ ನೈಸರ್ಗಿಕ ಅನಿಲ ಉತ್ಪಾದನೆ ಹಂಚಿಕೆ ಒಪ್ಪಂದ ಮಾಡಿಕೊಂಡಿದೆ. ...2004ರಲ್ಲಿ ಆರ್‌ಐಎಲ್ ಕಂಪನಿಯು ಸರ್ಕಾರಿ ಸ್ವಾಮ್ಯದ ಎನ್‌ಟಿಪಿಸಿ ಕಂಪನಿಗೆ ಮುಂದಿನ 17 ವರ್ಷಗಳ ಕಾಲ ಪ್ರತಿ ಯುನಿಟ್‌ಗೆ 2.34 ಡಾಲರ್ ದರದಲ್ಲಿ ಅನಿಲ ಸರಬರಾಜು ಮಾಡುವುದಾಗಿ ಒಪ್ಪಂದಕ್ಕೆ ಸಹಿ ಹಾಕಿದೆ... ಈ ಒಪ್ಪಂದ ಆರ್‌ಐಎಲ್ ಕಂಪನಿಗೆ ಬಹಳ ಲಾಭದಾಯಕವಾಗಿದ್ದಾಗ್ಯೂ, ಕಂಪನಿ ಈ ಒಪ್ಪಂದವನ್ನು ಮುರಿದು ಅನಿಲ ಸರಬರಾಜು ಮಾಡಲು ನಿರಾಕರಿಸಿತು. ಹೀಗೆ ಆರ್‌ಐಎಲ್‌ನ ಒತ್ತಡಕ್ಕೆ ಮಣಿದ ಕೇಂದ್ರದ ಅಂದಿನ ಪೆಟ್ರೋಲಿಯಂ ಸಚಿವ ಮುರಳಿ ದೇವ್ರಾ 2007ರಲ್ಲಿ ಅನಿಲ ದರವನ್ನು ಯುನಿಟ್‌ಗೆ 4.2 ಡಾಲರ್‌ಗಳಿಗೆ ಏರಿಕೆ ಮಾಡಿದ್ದರು."

ಮುಖೇಶ್ ಅಂಬಾನಿಯ ರಿಲಯನ್ಸ್ ಕಂಪನಿ ಇಷ್ಟಕ್ಕೆ ಸುಮ್ಮನಾಗಲಿಲ್ಲ, ಅನಿಲ ದರವನ್ನು ಪುನಃ ಏರಿಕೆ ಮಾಡುವಂತೆ ಸರ್ಕಾರದ ಮೇಲೆ ಮತ್ತೆ ಒತ್ತಡ ಶುರು ಮಾಡಿತು. ಸರ್ಕಾರ ಅದಕ್ಕೆ ಮಣಿಯದಿದ್ದಾಗ ಅನಿಲ ಉತ್ಪಾದನೆಯನ್ನು ಕಡಿತಗೊಳಿಸಿ ಕೃತಕ ಅನಿಲ ಅಭಾವವನ್ನು ಸೃಷ್ಟಿಸಿತು. ಪರಿಣಾಮವಾಗಿ ಅನಿಲಗಳ ಬೆಲೆ ಏರಿದ್ದು ಮಾತ್ರವಲ್ಲದೆ ಅನಿವಾರ್ಯವಾಗಿ ಅನಿಲವನ್ನು ಆಮದು ಮಾಡಿಕೊಳ್ಳಬೇಕಾಗಿ ಬಂತು. ಇದರಿಂದಾಗಿ ವಿದೇಶಿ ವಿನಿಮಯದ ಹೊರೆ ಮತ್ತಷ್ಟು ಹೆಚ್ಚಿತು. ರಿಲಯನ್ಸ್‌ನ 'ಒತ್ತಡ'ಕ್ಕೆ ಮಣಿದ ಸರ್ಕಾರ ಅಂತಿಮವಾಗಿ ಬರುವ ಏಪ್ರಿಲ್ 1ರಿಂದ ಅನ್ವಯವಾಗುವಂತೆ ಮತ್ತೊಮ್ಮೆ ದರ ಏರಿಕೆ ಮಾಡಿದೆ. ಅದು ಪ್ರತಿ ಯುನಿಟ್‌ಗೆ 8 ರಿಂದ 8.4 ಡಾಲರ್‌ಗಳು!

ಒಂದು ಡಾಲರ್ ವೆಚ್ಚದಲ್ಲಿ ಲಭ್ಯವಾದ ಸಾರ್ವಜನಿಕ ಸಂಪನ್ಮೂಲಕ್ಕೆ 8 ಡಾಲರ್ ದರ! ಇಂಥಾ ದರ ನಿಗದಿ ನೀತಿ ಇಡೀ ಜಗತ್ತಿನಲ್ಲಿ ಮತ್ತೊಂದಿಲ್ಲ, ಕೇಜ್ರಿವಾಲ್ ಪ್ರಕಾರ "ಸರ್ಕಾರದ ಈ ನಡವಳಿಕೆ ದುರುದ್ದೇಶಪೂರಿತ ಮಾತ್ರವಲ್ಲ, ಈ ವ್ಯವಹಾರದಲ್ಲಿ ಭಾರೀ ಭ್ರಷ್ಟಾಚಾರ ನಡೆದಿದೆ."

ಇದೇ ಸಂದರ್ಭದಲ್ಲಿ ಆರ್‌ಐಎಲ್‌ನ ಪಾಲುದಾರನಾಗಿರುವ ನಿಕೊ ಎಂಬ ಕಂಪನಿ ಪ್ರತಿ ಯುನಿಟ್ ಅನಿಲಕ್ಕೆ 2.34 ಡಾಲರ್ ದರದಲ್ಲಿ 25 ವರ್ಷಗಳ ಕಾಲ ಅನಿಲ ಸರಬರಾಜು ಮಾಡುವುದಾಗಿ ನೆರೆಯ ಬಾಂಗ್ಲಾ ದೇಶ ಸರ್ಕಾರದೊಂದಿಗೆ ಮಾಡಿಕೊಂಡಿರುವ ಒಪ್ಪಂದ ಇನ್ನೂ ಚಾಲ್ತಿಯಲ್ಲಿದೆ.

ಈ ಸಂದರ್ಭದಲ್ಲಿ ನಾವು ಬಗೆಹರಿಸಿಕೊಳ್ಳಬೇಕಾಗಿರುವ ಒಂದು ಪ್ರಮುಖ ಪ್ರಶ್ನೆಯಿದೆ. ಅದು ನಮ್ಮ ದೇಶದಲ್ಲಿ ಲಭ್ಯವಿರುವ ಅನಿಲ ಸಂಪನ್ಮೂಲದ ಒಡೆತನ ಯಾರಿಗೆ ಸೇರಬೇಕು ಎಂಬುದು? ನಮ್ಮಲ್ಲಿ ಲಭ್ಯವಿರುವ ಯಾವುದೇ ನೈಸರ್ಗಿಕ ಸಂಪತ್ತು ಸಾರ್ವಜನಿಕ ಸ್ವತ್ತು ಎಂದು ಪ್ರಜಾತಂತ್ರದ ಪ್ರಾಥಮಿಕ ಜ್ಞಾನವಿರುವ ಎಲ್ಲರಿಗೂ ತಿಳಿದಿರುವ ಸಂಗತಿ. ಹೀಗಿರುವಾಗ ಈ ದೇಶದ ಅತ್ಯಮೂಲ್ಯ ಅನಿಲ ಸಂಪನ್ಮೂಲವನ್ನು ಹೊರತೆಗೆದು ಸಂಸ್ಕರಣೆ ಮಾಡಿ ಸರ್ಕಾರಕ್ಕೆ ಪೂರೈಕೆ ಮಾಡುವುದಷ್ಟೆ ರಿಲಯನ್ಸ್ ಕಂಪನಿಯ ಕೆಲಸ. ಈ ಕೆಲಸಕ್ಕಾಗಿ ಸೂಕ್ತ ಲಾಭವನ್ನು ಕಂಪನಿ ನಿರೀಕ್ಷೆ ಮಾಡುವುದು, ಸರ್ಕಾರಗಳು ಅದಕ್ಕೆ ಅನುವು ಮಾಡಿಕೊಡುವುದು ಕೂಡ ಸಹಜವಾದುದು. ನಾವು ಅಳವಡಿಸಿಕೊಂಡಿರುವ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇದೊಂದು ಸಹಜ ಪ್ರಕ್ರಿಯೆ.

ಹಾಗಾದರೆ ಸಮಸ್ಯೆ ಇರುವುದು ಎಲ್ಲಿ? ಈ ದೇಶದ ತೈಲ ಸಂಪನ್ಮೂಲದ ಮೇಲೆ ಖಾಸಗಿ ಕಂಪನಿಯೊಂದಕ್ಕೆ ಪರಮಾಧಿಕಾರ ಕೊಟ್ಟು, ಶ್ರೀಸಾಮಾನ್ಯರ ಅಭಿವೃದ್ಧಿಗೆ ಬಳಸಬೇಕಾಗಿದ್ದ ಸಂಪನ್ಮೂಲವನ್ನು ಮುಖೇಶ್ ಅಂಬಾನಿಯ ದೈತ್ಯ ಒಡಲಿಗೆ ಹಾಕಿರುವ ಸರ್ಕಾರದ ನೀತಿಯಲ್ಲಿ, ಅಂಬಾನಿಗೆ ಲಾಭ ಮಾಡಿಕೊಡಲು ನಾನಾ ಅಡ್ಡದಾರಿಗಳನ್ನು ಅನುಸರಿಸಲಾಗಿದೆ, ತಪ್ಪು ಲೆಕ್ಕಾಚಾರಗಳನ್ನು ತೋರಿಸಲಾಗಿದೆ. ಇದರ ದುಷ್ಪರಿಣಾಮ ಬಳ್ಳಾರಿ ಗಣಿ ಹಗರಣಕ್ಕಿಂತಲೂ ಹತ್ತಾರು ಪಟ್ಟು ಘೋರವಾದುದು.


ಅನಿಲ ಬೆಲೆಯ ಹೆಚ್ಚಳದ ಪರಿಣಾಮವೇನು?

ಪ್ರಸ್ತುತದಲ್ಲಿ ನೈಸರ್ಗಿಕ ಅನಿಲವನ್ನು ಬಳಕೆ ಮಾಡುತ್ತಿರುವ ನಾಲ್ಕು ಪ್ರಮುಖ ಕ್ಷೇತ್ರಗಳೆಂದರೆ

1) ರಾಸಾಯನಿಕ ಗೊಬ್ಬರ ಕೈಗಾರಿಕೆ
2) ವಿದ್ಯುತ್‌ಶಕ್ತಿ ತಯಾರಿಕೆ
3) ವಾಹನಗಳ ಬಳಕೆಗೆ ಸಿಎನ್‌ಜಿ ಇಂಧನ
4) ಗೃಹ ಬಳಕೆಯ ಎಲ್‌ಪಿಜಿ ಅನಿಲ

ಪ್ರಸ್ತುತ ರಾಸಾಯನಿಕ ಗೊಬ್ಬರ ತಯಾರಿಕೆಗೆ ಸುಮಾರು 35% ಅನಿಲ ಬಳಕೆಯಾಗುತ್ತದೆ. ಈಗಾಗಲೇ ರಸಗೊಬ್ಬರದ ಬೆಲೆ ತಾರಕಕ್ಕೇರಿದ್ದು ಸರ್ಕಾರ ರೈತರಿಗೆ

ನರೇಂದ್ರ ಮೋದಿ-ಅಂಬಾನಿಗಳ ಏಜೆಂಟ್



ಪ್ರತಿನಿತ್ಯ ಕಾಂಗ್ರೆಸ್‌ನ ಭ್ರಷ್ಟಾಚಾರದ ಬಗ್ಗೆ ಭಾಷಣ ಬಿಗಿಯುವ ಬಿಜೆಪಿ ಮತ್ತು ನರೇಂದ್ರ ಮೋದಿ ಈ ವಿಷಯದಲ್ಲಿ ಯಾಕೆ ಬಾಯಿಬಿಚ್ಚುತ್ತಿಲ್ಲ ಎಂದು ಎಎಪಿ ಪದೆಪದೇ ಪ್ರಶ್ನಿಸುತ್ತಿದ್ದರೂ ಮೋದಿಯಾಗಲಿ, ಬಿಜೆಪಿಯಾಗಲಿ ಈವರೆಗೂ ಬಾಯಿ ಬಿಚ್ಚಿಲ್ಲ. ಯಾಕೆಂದರೆ ಗುಜರಾತ್‌ನ ಕರಾವಳಿ ತೀರದ ರಿಲಯನ್ಸ್‌ನ ಜಾಮ್‌ನಗರ್ ರಿಫೈನರಿ ವಿಷಯದಲ್ಲಿ ಮೋದಿ ಸರ್ಕಾರ ಅನುಸರಿಸಿರುವ ನೀತಿ ಯುಪಿಎ ಸರ್ಕಾರದ ನೀತಿಗಳನ್ನು ಮೀರಿಸುತ್ತದೆ. ಹಾಗೆ ನೋಡಿದರೆ ಅಂಬಾನಿಗಳಿಗೆ ಯುಪಿಎಗಿಂತಲೂ ನರೇಂದ್ರ ಮೋದಿಯೇ ನೆಚ್ಚಿನ ಆಯ್ಕೆ, ಆತನನ್ನು ಬಿಜೆಪಿ ಪ್ರಧಾನಿ ಅಭ್ಯರ್ಥಿಯಾಗಿಸುವಲ್ಲಿ ಅಂಬಾನಿಗಳ ಕೈವಾಡ ಬಹಳ ಕೆಲಸ ಮಾಡಿದೆ.


ಅದು ಹಾಗಿರಲಿ. ಅನಿಲ ವ್ಯವಹಾರದಲ್ಲಿ ಮೋದಿಯ ಗೋಲ್‌ಮಾಲ್‌ನ ಒಂದು ಸ್ಯಾಂಪಲ್ ನೋಡೋಣ.


ರಾಜ್ಯ ಸರ್ಕಾರಿ ಒಡೆತನದಲ್ಲಿರುವ ಗುಜರಾತ್ ರಾಜ್ಯ ಪೆಟ್ರೋಲಿಯಂ ಕಂಪನಿ(ಜಿಎಸ್‌ಪಿಸಿ)ಗೆ ಕೆಜಿ ಬೇಸಿನ್‌ನ ಅನಿಲ ಉದ್ಯಮದಲ್ಲಿ ಶೇಕಡ 10ರಷ್ಟು ಪಾಲು ಇತ್ತು, ಶೇ.10ರ ಈ ಸರ್ಕಾರಿ ಪಾಲನ್ನು ಮೋದಿ ಸರ್ಕಾರ 2003ರ ಮಾರ್ಚ್ 27ರಂದು ಅಸ್ತಿತ್ವದಲ್ಲೇ ಇಲ್ಲದ ಕೇವಲ ಕಾಗದದ ಮೇಲೆ ಅಸ್ತಿತ್ವದಲ್ಲಿರುವ ಒಂದು ಕಂಪನಿಗೆ ವರ್ಗಾಯಿಸಿಬಿಟ್ಟಿದ್ದಾನೆ. ಆ ಕಂಪನಿಯ ಹೆಸರು ಜಿಯೋ ಗ್ಲೋಬಲ್ ಮತ್ತು ಜುಬಿಲೆಂಟ್ ಎನ್ಪ್ರೊ ಪ್ರೈ ಲಿ.

ಈ ಕಂಪನಿಯ ಬಗ್ಗೆ ಕೆದಕಿದಂತೆ ಮತ್ತಷ್ಟು ನಿಗೂಢ ಸಂಗತಿಗಳು ಹೊರಬೀಳುತ್ತವೆ. ಸದರಿ ಕಂಪನಿ ಈ ಒಪ್ಪಂದ ಏರ್ಪಡುವುದಕ್ಕೆ ಕೇವಲ ಒಂದು ವಾರದ ಮೊದಲಷ್ಟೇ ನೋಂದಣಿಯಾಗಿದೆ! ಅದೂ ಕೂಡ ಭಾರತದಲ್ಲಲ್ಲ, ದೂರದ ಬಾರ್ಬಡಾಸ್ ಎಂಬ ಒಂದು ಪುಟ್ಟ ದ್ವೀಪದಲ್ಲಿ! ಅದರ ಮಾಲಿಕ ಎಂದು ಹೇಳಲಾಗುವ ಜೀನ್ ಪಾಲ್ ರಾಯ್ ಗ್ವಾಟೆಮಾಲಾ ದೇಶದ ಪ್ರಜೆ! ಹೋಗಲಿ ಅದರ ಬಂಡವಾಳವಾದರೂ ಎಷ್ಟು ಎಂದರೆ ಕೇವಲ 64 ಡಾಲರ್‌ಗಳು! ಅಂದರೆ ಸುಮಾರು 4,000 ರೂಪಾಯಿಗಳು ಮಾತ್ರ.

ಈ ಕಂಪನಿಗೆ ಒಡೆತನ ವರ್ಗಾಯಿಸುವಾಗ ಕೊಟ್ಟ ಕಾರಣ ಜಾಗತಿಕ ಮಟ್ಟದ ತಾಂತ್ರಿಕ ಪರಿಣತಿ ಸಹಾಯ ಪಡೆದುಕೊಳ್ಳಲಿಕ್ಕೆಂದು. ಆದರೆ ಈ ಕಂಪನಿಗೂ ತಾಂತ್ರಿಕತೆಗೂ ಏನೇನೂ ಸಂಬಂಧವಿಲ್ಲ, ಅದಿರಲಿ, ಈ ಕಂಪನಿ ಪಡೆದುಕೊಂಡ ಲಾಭದ ಪ್ರಮಾಣ ಎಷ್ಟು ಗೊತ್ತೆ? ಅದು ನಮ್ಮ ಊಹೆಗೆ ನಿಲುಕದ ಸಂಗತಿ.

ಮೋದಿ ಸರ್ಕಾರವೇ ಅಂದಾಜಿಸಿರುವಂತೆ ಆ ಅನಿಲ ನಿಕ್ಷೇಪದ ಒಟ್ಟು ಮೌಲ್ಯ 20 ಬಿಲಿಯನ್ ಡಾಲರ್‌ಗಳು ಅಂದರೆ ಇಂದಿನ ರೂಪಾಯಿ ಮೌಲ್ಯದಲ್ಲಿ 1,25,000 ಕೋಟಿಗಳು! ಅದರಲ್ಲಿ ಶೇಕಡ 10 ಅಂದರೆ 12,500 ಕೋಟಿ ಮೌಲ್ಯದ ಸಾರ್ವಜನಿಕ ಸ್ವತ್ತನ್ನು ಹೀಗೆ ನಿಗೂಢವಾಗಿ ಯಾರಿಗೆ ವರ್ಗಾಯಿಸಿದ್ದಾನೆಂಬುದು ಮೋದಿಗೆ ಮಾತ್ರ ಗೊತ್ತಿರುವ ಸತ್ಯ!





ಸಬ್ಸಿಡಿ ದರದಲ್ಲಿ ಗೊಬ್ಬರ ಒದಗಿಸುತ್ತಿದೆ. ಒಂದುವೇಳೆ ಅನಿಲದ ಬೆಲೆ ಹೆಚ್ಚಾದರೆ ಅದರ ಪರಿಣಾಮವಾಗಿ ಗೊಬ್ಬರದ ಬೆಲೆಯೂ ಏರಿ ಆಹಾರ ಉತ್ಪಾದನೆಯ ಮೇಲೆ ದುಷ್ಪರಿಣಾಮ ಬೀರುವುದು ಮಾತ್ರವಲ್ಲದೆ, ಸರ್ಕಾರದ ಸಬ್ಸಿಡಿ ವೆಚ್ಚವನ್ನು ದುಪ್ಪಟ್ಟಾಗಿಸುತ್ತದೆ. ಸಾರಾಂಶದಲ್ಲಿ ಗೊಬ್ಬರ ಸಬ್ಸಿಡಿ ಹೆಸರಿನಲ್ಲಿ ಸರ್ಕಾರದ ಬೊಕ್ಕಸದಿಂದ ರಿಲಯನ್ಸ್ ಕಂಪನಿಗೆ ಹಣ ಹರಿಸಿದಂತಾಗುತ್ತದೆ.

ಹಾಗೆಯೆ ವಿದ್ಯುತ್ ಉತ್ಪಾದನೆಯಲ್ಲಿ ಅನಿಲದ ಬೆಲೆಯೇರಿಕೆಯಿಂದ ವಿದ್ಯುತ್ ಸ್ವಾವಲಂಬನೆಯ ಕನಸು ಕನಸಾಗಿಯೇ ಉಳಿಯುತ್ತದೆ. ವಾಹನ ಬಳಕೆಯ ಸಿಎನ್‌ಜಿ ಅನಿಲದ ಬೆಲೆಯೇರಿಕೆಯಾದರೆ ಅನಿವಾರ್ಯವಾಗಿ ಡೀಸೆಲ್ ವಾಹನಗಳನ್ನೇ ಅವಲಂಬಿಸುವಂತಾಗಿ, ಡೀಸೆಲ್ ಆಮದು ಹೆಚ್ಚಿ ಆರ್ಥಿಕತೆಗೆ ಮತ್ತಷ್ಟು ಹೊರೆಯಾಗುತ್ತದೆ. ಮಾತ್ರವಲ್ಲ; ಪರಿಸರ ಮಾಲಿನ್ಯದ ಸಮಸ್ಯೆ ಬಿಗಡಾಯಿಸುತ್ತದೆ.

ಇನ್ನೂ ಎಲ್‌ಪಿಜಿ ಇಂಧನದ ವಿಷಯ ಈಗಾಗಲೇ ಸಾರ್ವಜನಿಕರಲ್ಲಿ ವ್ಯಾಪಕ ಆತಂಕ ಉಂಟುಮಾಡಿದ್ದು, ಮುಂದಿನ ದಿನಗಳಲ್ಲಿ ಸಾಮಾನ್ಯ ಜನರು ಅಡುಗೆ ಹಗರಣ ಎಂಬ ಅರವಿಂದ್ ಕೇಜ್ರಿವಾಲ್ ಮಾತುಗಳನ್ನು ಈ ಹಿನ್ನೆಲೆಯಲ್ಲಿ ನಾವು ಅರ್ಥಮಾಡಿಕೊಳ್ಳಬೇಕು.

ಸತ್ಯ ಸಂಗತಿಯನ್ನು ಬಹಳ ಕಾಲ ಮುಚ್ಚಿಡಲು ಸಾಧ್ಯವಿಲ್ಲ. ಈ ಪ್ರಕರಣದಲ್ಲೂ ಸತ್ಯಸಂಗತಿ ಹೇಗೆ ಬಯಲಾಗಿದೆ. ನೋಡಿ. 2009ರ ಮೇ 22ರಂದು ಆರ್‌ಐಎಲ್ ಕಂಪನಿಯು ಡೈರೆಕ್ಟೊರೇಟ್ ಜನರಲ್ ಆಫ್ ಹೈಡ್ರೋಕಾರ್ಬನ್ಸ್ ಅವರಿಗೆ ಸಲ್ಲಿಸಿದ ಪತ್ರದಲ್ಲಿ ಕೆಜಿ-ಡಿ6 ನಲ್ಲಿ ಪ್ರತಿ ಯುನಿಟ್‌ನ ಉತ್ಪಾದನಾ ವೆಚ್ಚ ಒಂದು ಡಾಲರ್‌ಗಿಂತಲೂ ಕಡಿಮೆ ಇರುವುದಾಗಿ ಸ್ವತಃ ಒಪ್ಪಿಕೊಂಡಿದೆ. ಅಂದರೆ 1 ಡಾಲರ್ ಬೆಲೆಗೆ ಉತ್ಪಾದನೆಯಾಗುವ ನಮ್ಮದೇ ನೈಸರ್ಗಿಕ ಅನಿಲವನ್ನು ನಮ್ಮ ಸರ್ಕಾರ 8.4 ಡಾಲರ್ ಬೆಲೆಗೆ ಕೊಳ್ಳುತ್ತದೆ. ಲಾಭದ ಪ್ರಮಾಣ ಶೇಕಡ 840. ಅಂದರೆ ಡಬಲ್ 420 ವ್ಯವಹಾರ!

ಅನಿಲ ದರ ನಿಗದಿಯ ಈ ಅಕ್ರಮಕ್ಕೆ ಸಂಬಂಧಿಸಿದಂತೆ ಕಮ್ಯುನಿಸ್ಟ್ ಪಕ್ಷದ ಮುಖಂಡ ಹಾಗೂ ರಾಜ್ಯಸಭಾ ಸದಸ್ಯ ಗುರುದಾಸ್ ದಾಸ್‌ಗುಪ್ತಾ ಈಗಾಗಲೇ ಹಲವು ಬಾರಿ ದನಿಯೆತ್ತಿದ್ದರೂ ಭಾರತದ ಮಾಧ್ಯಮಗಳು ಎಂದಿನಂತೆ ಜಾಣ ಕಿವುಡು ಪ್ರದರ್ಶಿಸಿರುವುದು ನಾಚಿಕೆಗೇಡಿನ ಸಂಗತಿ. ಗುರುದಾಸ್ ಈ ಬಗ್ಗೆ ಸುಪ್ರೀಂಕೋರ್ಟಿನಲ್ಲಿ ಒಂದು ಪಿಐಎಲ್ ಕೂಡ ದಾಖಲಿಸಿದ್ದು, ದೂರು ವಿಚಾರಣೆಯ ಹಂತದಲ್ಲಿದೆ.

ಮುಖೇಶ್ ಅಂಬಾನಿಗೆ ದರ ನಿಗದಿಯಿಂದ ಆಗಿರುವ ಲಾಭದ ಜೊತೆಗೆ ಈ ಸಾರ್ವಜನಿಕ ಸಂಪನ್ಮೂಲದ ಗುತ್ತಿಗೆಯನ್ನು ವಿದೇಶಿ ಕಂಪನಿಗಳಿಗೆ ಮಾರಾಟ ಮಾಡಿಯೂ ಭಾರೀ ಲಾಭ ಗಳಿಸಿದ್ದಾನೆ. ಕೆಜಿ-ಡಿ6 ಅನಿಲ ಕ್ಷೇತ್ರದಲ್ಲಿ ಶೇಕಡ 30ರಷ್ಟು ಷೇರುಗಳನ್ನು ಆರ್‌ಐಎಲ್ ಕಂಪನಿ ಇಂಗ್ಲೆಂಡ್ ಮೂಲದ ಬ್ರಿಟಿಷ್ ಪೆಟ್ರೋಲಿಯಂ(ಬಿ.ಪಿ) ಕಂಪನಿಗೆ ಮಾರಾಟ ಮಾಡಿದೆ. ಇದರ ಮೊತ್ತ 7.2 ಬಿಲಿಯನ್ ಡಾಲರ್‌ಗಳು. ಇಂದಿನ ರೂಪಾಯಿ ಮೌಲ್ಯದಲ್ಲಿ ಸುಮಾರು 44,600 ಕೋಟಿ ರೂಪಾಯಿಗಳು! 2011ರ ಜುಲೈನಲ್ಲಿ ಈ ವ್ಯವಹಾರವನ್ನು ಕೇಂದ್ರ ಸಂಪುಟ ಅನುಮೋದಿಸಿದೆ.

ಅಧಿಕಾರಿಗಳೋ? ಅಂಬಾನಿ ಏಜೆಂಟ್‌ಗಳೋ?

ಪೆಟ್ರೋಲಿಯಂ ಸಚಿವಾಲಯಕ್ಕೂ, ಆರ್‌ಐಎಲ್ ಕಂಪನಿಗೂ ನಡುವೆ ಬಿಡಿಸಲಾಗದ ನಂಟಿದೆ. ಇದಕ್ಕೆ ಸಾಕ್ಷಿಯೆಂಬಂತೆ ಪೆಟ್ರೋಲಿಯಂ ಇಲಾಖೆಯಲ್ಲಿ ಉನ್ನತ ಹುದ್ದೆಯಲ್ಲಿದ್ದ ಅಧಿಕಾರಿಗಳು ಸಾಲುಸಾಲಾಗಿ ರಿಲಯನ್ಸ್ ಕಂಪನಿ ಸೇರುತ್ತಿದ್ದಾರೆ.

ರಿಲಯನ್ಸ್ ಕಂಪನಿಗೆ ಇನ್ನೂ ಪೆಟ್ರೋಲಿಯಂ ಗುತ್ತಿಗೆ ಸಿಗುವ 6 ತಿಂಗಳು ಮೊದಲೇ ಒಎನ್‌ಜಿಸಿಯ ಉನ್ನತ ಅಧಿಕಾರಿಯಾಗಿದ್ದ ರವಿ ಬಸ್ತಿಯಾ ಇಲಾಖೆಯ ಕಾರ್ಯಾಚರಣೆಗೆ ಸಂಬಂಧಿಸಿದ ಎಲ್ಲ ರಹಸ್ಯ ದಾಖಲೆಗಳನ್ನು ರಿಲಯನ್ಸ್‌ಗೆ ಹಸ್ತಾಂತರಿಸಿಬಿಟ್ಟಿದ್ದರು ಎಂಬ ಗಂಭೀರ ಆರೋಪವಿದೆ. ಅಷ್ಟು ಮಾತ್ರವಲ್ಲ; ಆರ್‌ಐಎಲ್‌ಗೆ ಪೆಟ್ರೋಲಿಯಂ ಗುತ್ತಿಗೆ ದಕ್ಕುತ್ತಿದ್ದಂತೆ ಸರ್ಕಾರಿ ಕೆಲಸಕ್ಕೆ ರಾಜೀನಾಮೆ ಗೀಚಿ ರಿಲಯನ್ಸ್ ಸೇರಿಕೊಂಡುಬಿಟ್ಟರು.

ದೆಹಲಿಯ ಹಾಲಿ ಲೆಫ್ಟಿನೆಂಟ್ ಗವರ್ನರ್ ನಜೀಬ್ ಜಂಗ್ ಅವರನ್ನೇ ತೆಗೆದುಕೊಳ್ಳಿ. ಇವರು ಈ ಹಿಂದೆ ಪೆಟ್ರೋಲಿಯಂ ಇಲಾಖೆಯ ಜಾಯಿಂಟ್ ಸೆಕ್ರೆಟರಿಯಾಗಿದ್ದವರು. ಪನ್ನಾ-ಮುಕ್ತಾ ತೈಲ ಕ್ಷೇತ್ರದ ಗುತ್ತಿಗೆ ರಿಲಯನ್ಸ್ ಕಂಪನಿಯ ತೆಕ್ಕೆಗೆ ಸೇರುವ ಪ್ರಕ್ರಿಯೆಯಲ್ಲಿ ಬಹಳ ಕೀಲಕ ಪಾತ್ರ ನಿರ್ವಹಿಸಿದ್ದರು. ಕೆಲದಿನಗಳ ನಂತರ ಈ ಮಹಾನುಭಾವ ವಿಆರ್‌ಎಸ್ ಪಡೆದುಕೊಂಡು ರಿಲಯನ್ಸ್ ಕಂಪನಿಯ ಅಂಗ ಸಂಸ್ಥೆಯೊಂದನ್ನು ಸೇರಿಕೊಂಡಿದ್ದರು. ನಂತರ ವಿಶ್ವವಿದ್ಯಾಲಯವೊಂದರ ಕುಲಪತಿಯಾಗಿ ನಿವೃತ್ತಿಗೊಂಡರು.


ಎಸ್‌ಎಲ್ ಬೋಸ್ಲಾ ಎಂಬ ಅಧಿಕಾರಿ ನಿವೃತ್ತಿಯಾದ ಮರುದಿನವೇ ರಿಲಯನ್ಸ್ ಕಂಪನಿ ಸೇರಿಕೊಂಡರು. ಬಿಜೆಪಿ ಆಡಳಿತಾವಧಿಯಲ್ಲಿ ಅಂದಿನ ಹಣಕಾಸು ಸಚಿವ ಯಶವಂತ ಸಿನ್ಹಾರ ಆರ್ಥಿಕ ಸಲಹೆಗಾರನಾಗಿದ್ದ ಮೋಹನ್ ಗುರುಸ್ವಾಮಿ ಎಂಬ ಅಧಿಕಾರಿ ರಿಲಯನ್ಸ್ ಪೋಷಿತ ಆರ್‌ಡಿ ಸಂಸ್ಥೆಯೊಂದನ್ನು ಸೇರಿಕೊಂಡರು.

ರಿಲಯನ್ಸ್ ಕಂಪನಿಗೆ ರಹಸ್ಯ ಸರ್ಕಾರಿ ದಾಖಲೆಗಳನ್ನು ಹಸ್ತಾಂತರಿಸಿದ ಆರೋಪ ಎದುರಿಸುತ್ತಿರುವ ರವಿ ಬಸ್ತಿಯಾನ ಪ್ರತಿಭೆ ಹಾಗೂ ಸಾಧನೆಗಳನ್ನು ಮನಸಾರೆ ಮೆಚ್ಚಿ ಕೇಂದ್ರ ಸರ್ಕಾರ ಪದ್ಮಶ್ರೀ ಪ್ರಶಸ್ತಿ ಕೊಟ್ಟು ಗೌರವಿಸಿದೆ. ಹಾಗೆಯೆ ನಜೀಬ್ ಜಂಗ್‌ರನ್ನು ಸುಮಾರು 8 ತಿಂಗಳ ಹಿಂದೆ ದೆಹಲಿಯ ಲೆಫ್ಟಿನೆಂಟ್ ಗವರ್ನರ್ ಹುದ್ದೆಗೆ ನೇಮಿಸಲಾಗಿದೆ.


ಈ ವಿದ್ಯಮಾನಗಳನ್ನು ಹೇಗೆ ಅರ್ಥಮಾಡಿಕೊಳ್ಳಬೇಕೆಂಬುದು ಓದುಗರ ವಿವೇಚನೆಗೆ ಬಿಟ್ಟದ್ದು.

ಈ ವಿಷಯವನ್ನು ಚೆನ್ನಾಗಿ ಅರಿತಿರುವ ಮೊಯ್ಲಿ ಅವರು ದೇಶವೇ ಕೊಳ್ಳೆ ಹೋದರೂ ರಿಲಯನ್ಸ್ ವಿರುದ್ಧ ಕನಿಷ್ಠ ಒಂದು ಮಾತನ್ನೂ ಆಡುತ್ತಿಲ್ಲ.


ಹೀಗೆ ಇಡೀ ದೇಶದ ಆರ್ಥಿಕ ಪರಿಸ್ಥಿತಿಯನ್ನು ಬಲಿತೆಗೆದುಕೊಳ್ಳುತ್ತಿರುವ ಒಂದು ಮಹತ್ವದ ಸಂಗತಿಯನ್ನು ದೇಶಾದ್ಯಂತ ವಿಸ್ತೃತವಾಗಿ ಸಾರ್ವಜನಿಕ ಚರ್ಚೆಗೆ ತಂದ ಖ್ಯಾತಿ ಆಮ್‌ಆದ್ಮಿ ಪಕ್ಷಕ್ಕೆ ಸಲ್ಲಬೇಕು. ಈ ಬಗ್ಗೆ ತನಿಖೆಗೆ ಆದೇಶಿಸಿ, ಕೇಜ್ರಿವಾಲ್ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೋರಾಟಕ್ಕಿಳಿದಿರುವುದು ಈ ಸಂದರ್ಭದ ಮತ್ತೊಂದು ವಿಶೇಷ. ನಮ್ಮ ರಾಜಕೀಯ ಭಿನ್ನಾಭಿಪ್ರಾಯಗಳೇನೇ ಇದ್ದರೂ ನಾವು ಈ ಕಾರಣಕ್ಕೆ ಆಮ್ ಆದ್ಮಿ ಪಕ್ಷವನ್ನು ಅಭಿನಂದಿಸಲೇಬೇಕು.



ವೀರಪ್ಪ ಮೊಯ್ಲಿ



ಶಿಬಲ್



ಕೇಜ್ರಿವಾಲ್

ಮಾಡಿಕೊಳ್ಳುವುದೇ ದೊಡ್ಡ ಹೊರೆಯಾಗಿ ಪರಿಣಮಿಸುತ್ತದೆ.

ನೇರವಾಗಿ ಜೀವನಾವಶ್ಯಕ ವಸ್ತುಗಳನ್ನೇ ಗುರಿ ಮಾಡುವ ಇದರ ಒಟ್ಟಾರೆ ಪರಿಣಾಮದಿಂದ ಹಣದುಬ್ಬರ ತೀವ್ರಗೊಂಡು ಇತರ ಸರಕುಗಳ ಮಾರುಕಟ್ಟೆ ಮತ್ತಷ್ಟು ಕುಸಿಯುವುದರಲ್ಲಿ ಯಾರಿಗೂ ಅನುಮಾನ ಬೇಡ.

ಸರ್ಕಾರದ ಆಯಕಟ್ಟಿನಲ್ಲಿರುವವರು ಮುಖೇಶ್ ಅಂಬಾನಿ ಎಂಬ ಒಬ್ಬ ಬಂಡವಾಳಿಗನಿಗೆ ದುರ್ಲಾಭ ಮಾಡಿಕೊಡಲಿಕ್ಕಾಗಿ ಹೀಗೆ ಇಡೀ ಆರ್ಥಿಕತೆಯನ್ನು ಸಂಕಷ್ಟಕ್ಕೆ ಸಿಲುಕಿಸಿದ್ದಾರೆ. ಪರಿಣಾಮವಾಗಿ ಬಡಭಾರತೀಯರ ಅಡುಗೆ ಅನಿಲ, ವಿದ್ಯುತ್ ದರಗಳು ಆಕಾಶಕ್ಕೇರಿವೆ. ಸ್ವತಂತ್ರ ಭಾರತದ ಇತಿಹಾಸದಲ್ಲೇ ಇದು ಭಾರೀ ದೊಡ್ಡ ಹಾಗೂ ವಿಶಿಷ್ಟವಾದ

ಇಲ್ಲಿ ಮತ್ತೊಂದು ಕಠೋರ ಸತ್ಯವನ್ನು ನೆನಪು ಮಾಡುವುದು ಉಚಿತ. ಈ ಆರ್‌ಐಎಲ್-ಬಿಪಿ ಒಪ್ಪಂದಕ್ಕೆ 5 ವರ್ಷಗಳ ಮುಂಚೆಯೇ ಸರ್ಕಾರಿ ಸ್ವಾಮ್ಯದ ಒಎನ್‌ಜಿಸಿ ಸಂಸ್ಥೆ ಇದೇ ಬಿಪಿ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಳ್ಳಲು ಮುಂದಾಗಿ 2007ರ ಸೆಪ್ಟೆಂಬರ್‌ನಲ್ಲಿ ಒಂದು ಎಂಒಯು ಕೂಡ ಮಾಡಿಕೊಂಡಿತ್ತು. ಈ ಒಪ್ಪಂದವನ್ನು ಅನುಮೋದಿಸುವಂತೆ ಒಎನ್‌ಜಿಸಿ ಮತ್ತು ಬ್ರಿಟಿಷ್ ಸರ್ಕಾರ ಏನೇ ಒತ್ತಡ ಹೇರಿದ್ದಾಗ್ಯೂ ಕೇಂದ್ರ ಸಂಪುಟ ಈ ಪ್ರಸ್ತಾಪವನ್ನು ತಿರಸ್ಕರಿಸಿತ್ತು. ಅಂದರೆ ಪೆಟ್ರೋಲಿಯಂ ಸಚಿವಾಲಯದಲ್ಲಿ ಅಂಬಾನಿಯ ಆಣತಿಯಿಲ್ಲದೆ ಹುಲ್ಲುಕಡ್ಡಿಯೂ ಕದಲುವುದಿಲ್ಲ.

ಈ ಹಿಂದೆ ಅಂಬಾನಿ ಕಂಪನಿಯ ಬಗ್ಗೆ ಅಪಸ್ವರ ತೆಗೆದ ಕಾರಣಕ್ಕೆ ಇಬ್ಬರು ಪೆಟ್ರೋಲಿಯಂ ಸಚಿವರು ತಮ್ಮ ಮಂತ್ರಿ ಪದವಿ ಕಳೆದುಕೊಳ್ಳಬೇಕಾಗಿ ಬಂದಿತ್ತು. ಒಬ್ಬರು ಮಣಿಶಂಕರ್ ಅಯ್ಯರ್, ಮತ್ತೊಬ್ಬರು ಮುರಳಿ ದೇವ್ರಾ.

ಭಾರತದ ಪ್ರಸ್ತುತ ರಾಜಕೀಯದಲ್ಲಿ ಸಾಂಪ್ರದಾಯಿಕ ಎದುರಾಳಿಗಳಾಗಿರುವ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ಅಂಬಾನಿ ವಿಷಯದಲ್ಲಿ ಅಸೀಮ ಒಗ್ಗಟ್ಟು ಪ್ರದರ್ಶಿಸಿವೆ. ಎರಡೂ ಪಕ್ಷಗಳು 'ಆಮ್ ಆದ್ಮಿ'ಯ ವಿರುದ್ಧ ಕೆಂಡ ಕಾರುತ್ತಿವೆ. ಕೇಂದ್ರದ ಮಂತ್ರಿಗಳ ಮೇಲೆ ಕೇಸು ದಾಖಲಿಸಿದ್ದನ್ನು ಹಾಗೂ ಜನಲೋಕಪಾಲ ಮಸೂದೆಯನ್ನು ದೆಹಲಿ ವಿಧಾನಸಭೆಯಲ್ಲಿ ಮಂಡಿಸಿದ್ದನ್ನು ಸಂವಿಧಾನ ವಿರೋಧಿ ಕೃತ್ಯ ಎಂದು ಒಕ್ಕೊರಲಿನಲ್ಲಿ ಅರಚುತ್ತಿವೆ. ಕೆಲವರಂತೂ ಇದು ಬಾಬಾ ಸಾಹೇಬ ಅಂಬೇಡ್ಕರ್ ಅವರಿಗೆ ಮಾಡಿದ ಅವಮಾನವೆಂದು ವಿಷಯವನ್ನು ಭಾವನಾತ್ಮಕಗೊಳಿಸಲು ಯತ್ನಿಸಿದ್ದಾರೆ.

ಆಮ್ ಆದ್ಮಿ ಪಕ್ಷದ ಬಗ್ಗೆ ಯಾರಿಗೇ ಏನೇ ಭಿನ್ನಾಭಿಪ್ರಾಯವಿದ್ದರೂ ರಾಷ್ಟ್ರೀಯ ಹಿತಾಸಕ್ತಿಯನ್ನು ಮುನ್ನೆಲೆಗೆ ತಂದಿರುವ ಅವರ ಈ ಹೋರಾಟವನ್ನು ಬೆಂಬಲಿಸುವುದು ನಮ್ಮ ದೇಶದ ಆರ್ಥಿಕತೆಯ ಹಿತದೃಷ್ಟಿಯಿಂದ ಅನಿವಾರ್ಯ.

ಈ ಹಗರಣದ ನಿಷ್ಪಕ್ಷಪಾತ ತನಿಖೆ ಆಗಬೇಕು. ಅಲ್ಲಿಯವರೆಗೆ ಹೊಸ ದರಗಳನ್ನು ಜಾರಿ ಮಾಡಬಾರದು ಎಂಬುದು ನಮ್ಮೆಲ್ಲರ ಬೇಡಿಕೆಯಾಗಬೇಕು.

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಸೋದರನೇ ಸಾರಿದ ಸತ್ಯ

"ಆರ್‌ಐಎಲ್ ಎಂಬ ಖಾಸಗಿ ಕಂಪನಿಗೆ ಸಾವಿರಾರು ಕೋಟಿಗಳ ಲಾಭ ಮಾಡಿಕೊಟ್ಟಿರುವ ಸರ್ಕಾರ ಭ್ರಷ್ಟಾಚಾರದಲ್ಲಿ ಭಾಗಿಯಾಗಿದೆ... ಈ ದೇಶದ ಜನರಿಗೆ ಸೇರಬೇಕಾಗಿದ್ದ ಸಂಪತ್ತನ್ನು ಮುಖೇಶ್ ಅಂಬಾನಿಯ ಬಾಯಿಗೆ ಜನರಿಗೆ ದ್ರೋಹ ಬಗೆದಿದೆ. ಆದ್ದರಿಂದ ಈ ಅವ್ಯವಹಾರದ ಬಗ್ಗೆ ತನಿಖೆಯಾಗಬೇಕು ... ಈ ರಾಷ್ಟ್ರದ ಸಂಪತ್ತಿನ ರಕ್ಷಣೆ ಆಗಬೇಕು"

ಇವು ಯಾರೋ ಕಮ್ಯುನಿಸ್ಟ್ ನಾಯಕ ಆಡಿದ ಮಾತುಗಳಲ್ಲ; ಇದು ಸ್ವತಃ ಮುಖೇಶ್ ಅಂಬಾನಿಯ ತಮ್ಮ ಅನಿಲ್ ಆಡಿದ ಮಾತುಗಳು!

ಅಂಬಾನಿ ಮಕ್ಕಳು ಆಸ್ತಿ ಪಾಲು ಮಾಡಿಕೊಳ್ಳಲಿಕ್ಕಾಗಿ 2004-05ರಲ್ಲಿ ಕಚ್ಚಾಡಿದ್ದು ಇನ್ನೂ ನಮ್ಮ ನೆನಪಿನಲ್ಲಿದೆ ಅಲ್ಲವೆ? ಆಸ್ತಿ ಪಾಲಿನ ಕರಾರಿನ ಪ್ರಕಾರ ಅನಿಲ, ತೈಲ ನಿಕ್ಷೇಪಗಳನ್ನು ಒಳಗೊಂಡ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ (ಆರ್‌ಐಎಲ್) ಕಂಪನಿ ಹಿರಿಯನಾದ ಮುಖೇಶ್ ಪಾಲಿಗೆ ಬಂದಿತ್ತು. ಇದಾದ ಕೆಲವು ತಿಂಗಳ ಬಳಿಕ ತೈಲ ಹಾಗೂ ಅನಿಲ ನಿಕ್ಷೇಪಗಳ ಒಡೆತನ ಹೊಂದಿದ್ದ ಮುಖೇಶ್‌ನ ಆಸ್ತಿ ದ್ವಿಗುಣಗೊಳ್ಳುತ್ತಾ ಸಾಗಿತ್ತು, [illegible] ಇಂಡಸ್ಟ್ರಿಯಲ್ಲಿ ಪಾಲು ಸಿಗದೆ ಪಾಪರನಾಗಿದ್ದ [illegible] ಅಂಬಾನಿ ಅಣ್ಣನ ವಿರುದ್ಧ ಪತ್ರಿ ಮಾಧ್ಯಮಗಳ ಮೂಲಕ ದಾಳಿಗಿಳಿದಿದ್ದ.

ಕೂಡಲೇ ರಂಗ ಪ್ರವೇಶಿಸಿದ ತಾಯಿ ಕೋಕಿಲಾಬೆನ್ ಮತ್ತು ಹಲವು ಗಣ್ಯ ವ್ಯಕ್ತಿಗಳು ಅನಿಲ್‌ನಿಗೂ ಒಂದಷ್ಟು ಲಾಭ ಮಾಡಿಸಿಕೊಡುವ ಒಳಒಪ್ಪಂದ ಮಾಡಿಸಿ ಆತನ ಬಾಯಿ ಮುಚ್ಚಿಸಿದ್ದರು.


ಆದರೆ ಇವರಿಬ್ಬರ ನಡುವಿನ ಕದನ ಅಷ್ಟಕ್ಕೆ ನಿಲ್ಲಲಿಲ್ಲ. ಯಾಕೆಂದರೆ ಅನಿಲ್ ಅಂಬಾನಿ ಒಡೆತನದ ಆರ್‌ಎನ್‌ಆರ್‌ಎಲ್ ಕಂಪನಿ ವಿದ್ಯುತ್ ತಯಾರಿಕಾ ರಂಗದಲ್ಲಿ ತೊಡಗಿಸಿಕೊಂಡಿದ್ದು ಆರ್‌ಐಎಲ್‌ನಿಂದಲೇ ನೈಸರ್ಗಿಕ ಅನಿಲವನ್ನು ನಿಗದಿತ 2.34 ಡಾಲರ್/ಯುನಿಟ್‌ನಂತೆ ಖರೀದಿಸುತ್ತಿದೆ. ಆದರೆ ಈ ಹಿಂದೆ ಅನಿಲ ಬೆಲೆ 4.2 ಡಾಲರ್‌ಗೆ ಏರಿಸಿದ್ದನ್ನು ವಿರೋಧಿಸಿ ಅನಿಲ್ ಮತ್ತೊಮ್ಮೆ ರಾಷ್ಟ್ರದ ಹಿತಾಸಕ್ತಿ ಬಲಿಯಾಗುತ್ತಿದೆ ಎಂದು ಬಾಯಿ ತೆಗೆದಿದ್ದ. ಈ ವ್ಯವಹಾರದಲ್ಲಿ ಮುಖೇಶ್‌ಗೆ 50,000 ಕೋಟಿ ಲಾಭವಾಗುತ್ತಿದೆ, ಆದರೆ ಸರ್ಕಾರಕ್ಕೆ ಸಿಗುವುದು ಕೇವಲ 500 ಕೋಟಿ ಎಂದೂ ಆರೋಪಿಸಿದ್ದ. ಈ ಬೆಲೆಯೇರಿಕೆಯನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ದಾವೆಯನ್ನೂ ಹೂಡಿದ್ದ.

ಆದರೆ ಈ ಬಾರಿ ಮಾತ್ರ ಆತ ಬಾಯಿ ಬಿಚ್ಚಿಲ್ಲ. ಯಾಕೆಂದರೆ ಅನಿಲ್ ಅಂಬಾನಿಯ ಹಗರಣಗಳನ್ನೂ ಟಾರ್ಗೆಟ್ ಮಾಡಿರುವ ಕೇಜ್ರಿವಾಲ್ ವಿದ್ಯುತ್ ಸರಬರಾಜಿನಲ್ಲಿ ಆತನ ಅವ್ಯವಹಾರಗಳನ್ನು ಬಿಡಿಸಿಟ್ಟಿದ್ದಾರೆ.

ಉತ್ತರ ಕನ್ನಡ ಅಖಾಡ: ಹಿಂದೂತ್ವದ ಮಾಣಿಗೆ ಮುಸ್ಲಿಮರೇ ಬಂಡವಾಳ!!

ಅಂತೂ ಬಿಜೆಪಿಯ ಭಂಡ ಮಾಣಿ ಅನಂತ್ ಹೆಗಡೆ ನಿಟ್ಟುಸಿರು ಬಿಟ್ಟಿದ್ದಾನೆ. ಟಿಕೆಟ್ ತಪ್ಪಿಸುವ ಸ್ವಪಕ್ಷದ-ಸ್ವಜಾತಿಯ ಹಿತಶತ್ರುಗಳ ಹಿಕಮತ್ತಿನಿಂದ ಎರಡು ತಿಂಗಳು ನಿದ್ದೆಗೆಟ್ಟಿದ್ದ ಮಾಣಿ ಕೈಗೇ ಬಿಜೆಪಿ ಗತಿಯಿಲ್ಲದೆ ಟಿಕೆಟ್ ಕೊಟ್ಟಿದೆ. ಉತ್ತರ ಕನ್ನಡ ಲೋಕಸಭೆ ಚುನಾವಣೆ ರಣರಂಗದಲ್ಲಿ ತಾನೇ ಬಿಜೆಪಿ ಹುರಿಯಾಳೆಂದು ಸ್ವಯಂಘೋಷಿಸಿಕೊಂಡು ಕಮ್ಯುನಲ್ ಪ್ರಚಾರಕ್ಕೆ ತೊಡಗಿಕೊಂಡಿದ್ದ ಅನಂತ್ಮಾಣಿ ಕಳೆದ ಎರಡು ವಾರದಿಂದ ತನಗೆ ಟಿಕೆಟ್ ತಪ್ಪಿಯೇಹೋಯ್ತೆಂದು ಕಂಗಾಲಾಗಿಹೋಗಿದ್ದ.

ಅನಂತ್ಮಾಣಿ ವಿರೋಧಿ ಲಾಬಿ ಜಿಲ್ಲೆಯಿಂದ ದಿಲ್ಲಿವರೆಗೆ ತುಂಬ ಮಜಬೂತಾಗಿ ಬೆಳೆದಿತ್ತು. ಸಂಘ ಪರಿವಾರದ ಕಣ್ಣು ಕೆಂಪಾಗಿತ್ತು. ಜಿಲ್ಲೆಯ ಜನ ಮತ್ತೆ ಈತನಿಗೆ ಯಾವ ಕಾರಣಕ್ಕೂ ಮಣೆ ಹಾಕುವುದಿಲ್ಲ, ಮೋದಿ ಮಹಾತ್ಮನ ಹವೆಯೂ ಈತನನ್ನು ಬಚಾಯಿಸದೆಂಬ ರಹಸ್ಯ ಸರ್ವೆ ರಿಪೋರ್ಟೂ ಬಿಜೆಪಿ ಹೈಕಮಾಂಡ್ ಮುಂದಿತ್ತು. ಅನಂತ್ಮಾಣಿಯ ಒಂದು ಕಾಲು ಅನಂತಕುಮಾರ್ (ಶಾಸ್ತ್ರಿ)-ಕಾಗೇರಿ ಹೆಗಡೆ ಹಿಡಿದೆಳೆದರೆ, ಮತ್ತೊಂದು ಕಾಲು ಚೆಡ್ಡಿ ಪತ್ರಕರ್ತ ಸಚ್ಚಿದಾನಂದ ಹೆಗಡೆಯ ಆರೆಸ್ಸೆಸ್ ಗ್ಯಾಂಗ್ ಜಗ್ಗತೊಡಗಿತ್ತು. ಮಗದೊಂದು ಕಡೆ ಹೋದಲೆಲ್ಲ ಜನ ಕ್ಯಾಕರಿಸಿ ಉಗಿಯಲಾರಂಭಿಸಿದ್ದರು. ಜನ ಗೆಲ್ಲಿಸದಿದ್ದರೂ ಪರವಾಗಿಲ್ಲ, ಸ್ವಪಕ್ಷದ ವೈರಿಗಳೆದುರು ಸೋಲಬಾರದೆಂಬ ಒಣ ರುಬಾಬಿಗೆ ಬಿದ್ದು ಅನಂತ್ಮಾಣಿ ಒದ್ದಾಡುತ್ತಿದ್ದ. ಈ ಎಳೆದಾಟದಲ್ಲಿ ಹೈರಾಣಾಗಿದ್ದ ಅನಂತ್ಮಾಣಿ ಅತ್ತೂ ಕರೆದೂ ಸುಷ್ಮಾ ಆಂಟಿಯ ಹಿಡಿದ ಪಾದ ಬಿಡದೆ ಬಚಾವಾಗಿದ್ದಾನೆ.



ಒಲ್ಲದ ಮನಸ್ಸಿನಿಂದಲೇ ಬಿಜೆಪಿ ಈ ಕರ್ಮಗೇಡಿ ಸಂಸದನಿಗೆ ಮತ್ತೆ ಛಾನ್ಸ್ ಕೊಟ್ಟಿದೆ. ಖಾಲಿ ಬುರುಡೆಯ ಪೆದ್ದ ಅನಂತ್ಮಾಣಿ ತಲೆಯಲ್ಲಿ ಜನತಾಂತ್ರಿಕವಾಗಿ ಮತ ಪಡೆಯುವ ಜನಪರ ಈಶ್ಯೂಗಳ್ಯಾವುದೂ ಇಲ್ಲ. ಅಭಿವೃದ್ಧಿ ಯೋಚನೆಗಳಂತೂ ಈ ಬರಗೆಟ್ಟ ಮಾಣಿಯ ಮೆದುಳಲ್ಲಿ ಇಲ್ಲವೇ ಇಲ್ಲ. ಇರುವುದು ಒಂದೇ. ಮುಸ್ಲಿಮರ ಕೈ ಕಡಿಯಿರಿ; ಕ್ರಿಶ್ಚಿಯನ್ನರ ಕಾಲು ಕಡಿಯಿರಿ. ಹಿಂದೂ ರಾಷ್ಟ್ರಕ್ಕಾಗಿ ನನ್ನನ್ನೇ ಎಂಪಿ ಮಾಡಿರಿ. ಈ ಹಿಂದೂ ಹರಾಮಿಯ ಇಲೆಕ್ಷನ್ ಪ್ರಚಾರಕ್ಕೆ ಮುಸ್ಲಿಮ್ ದ್ವೇಷವೇ ಬಂಡವಾಳ!

ಸತತ ಹತ್ತು ವರ್ಷದಿಂದ ಉತ್ತರ ಕನ್ನಡದ ಸಂಸದನಾಗಿರುವ ಅನಂತ್ಮಾಣಿ ಜನರಿಗೆ ಕಾಣಿಸುವುದು ಚುನಾವಣೆ ಬಂದಾಗ ಮಾತ್ರ! ಜಿಲ್ಲೆಯ ಬಹುಸಂಖ್ಯಾತ ಬ್ರಾಹ್ಮಣರು ಈ ಅಧಿಕಪ್ರಸಂಗಿಗೆ ಕಣ್ಮುಚ್ಚಿ ಮತ ಹಾಕಿದರೆ, ಶೂದ್ರರು ಈತನ ಧರ್ಮೋನ್ಮಾದದ ಆವೇಷಕ್ಕೆ ಮರುಳಾಗಿ ಓಟು ಹಾಕಿದ್ದಾರೆ. ಆದರೆ ಈ ಬಾರಿ ಆತನ ಮೋಸದ ಆಟ ಅಷ್ಟು ಸಲೀಸಾಗಿ ಸಾಗುತ್ತಿಲ್ಲ. ಮಾಣಿ ದಗಲುಬಾಜಿ-ಭ್ರಷ್ಟ-ಆರಣ್ಯಕಳ್ಳ, ಜನದ್ರೋಹಿ ಎಂಬುದೆಲ್ಲ ಅರ್ಥವಾಗಿದೆ. ಹೀಗಾಗಿ ಆತ ವರಸೆ ಬದಲಿಸಿದ್ದಾನೆ. "ರಾಷ್ಟ್ರೀಯತೆ-ಅಭಿವೃದ್ಧಿ-ರಾಜಕೀಯ" ಎಂಬ ಸಂವಾದ ಶುರುಹಚ್ಚಿಕೊಂಡಿದ್ದಾನೆ. ಹೋದಲ್ಲೆಲ್ಲ ಜನ ಕೇಳುವ ಪ್ರಶ್ನೆಗಳಿಗೆ ಸರಿಯಾದ ಉತ್ತರ ಕೊಡುವ ಬದಲು "ಬೈಠಕ್"ನಲ್ಲಿ ಉರುಹಚ್ಚಿದ ಸಿದ್ಧ ಭಾಷಣ ಬಿಗಿದು ತನ್ನ ನಿದ್ದೆ ಬಡುಕತನ ಸಮರ್ಥಿಸಿಕೊಳ್ಳುತ್ತಿದ್ದಾನೆ.


ಇಡೀ ಉತ್ತರ ಕನ್ನಡ ಮತ್ತು ಈ ಪಾರ್ಲಿಮೆಂಟ್ ಕ್ಷೇತ್ರಕ್ಕೆ ಸೇರಿರುವ ಬೆಳಗಾವಿಯ ಖಾನಾಪುರ ಮತ್ತು ಕಿತ್ತೂರಲ್ಲಿ ತಾನು ಜನರ ಕಷ್ಟ-ಸುಖಕ್ಕೆ ಸ್ಪಂದಿಸದ ಪಿಟೀಲುವಾದಕ-ಸಂಸದನೆಂಬ ಅಭಿಪ್ರಾಯ ಮಡುಗಟ್ಟಿರುವುದು ಅನಂತ್ಮಾಣಿಗೆ ಖಾತ್ರಿಯಾಗಿದೆ. ಹೀಗಾಗಿ ಆತ ಸಂಸದನೆಂದರೆ "ವಿಶೇಷ ಜನಪ್ರತಿನಿಧಿ" ಎಂದು ನವ ವ್ಯಾಖ್ಯಾನ ಕಂಡುಹಿಡಿದಿದ್ದಾನೆ. ಎಂಪಿ ಕೆಲಸ ಬರೀ ಸಂಸತ್ತಿನಲ್ಲಿ ಕುಂತು ಪಾಲಿಸಿ ಡಿಸೈನ್ ಮಾಡೋದಂತೆ; ಕಾನೂನು ಮಾಡೋದಂತೆ. ಈತ ಮಾಡಿದ ಯೋಜನೆ-ಕಾನೂನು ಅನುಷ್ಠಾನಕ್ಕೆ ತರುವ ಕೆಲಸ ಎಮ್ಮೆಲ್ಲೆ, ಜಿ.ಪಂ. ಸದಸ್ಯ, ತಾಪಂ ಸದಸ್ಯ, ಗ್ರಾಪಂ ಮೆಂಬರರದಂತೆ. ಹೀಗಿದೆ ಮಾಣಿ ಸಿದ್ಧಾಂತ್ವ? ಕುಣಿಯಲಾಗದ "ಬೃಹನ್ನಳೆ" ಅಂಗಳೇ ಡೊಂಕು ಅಂದಂತೆಯಲ್ಲವಾ?

ಜನಪ್ರತಿನಿಧಿಯೊಬ್ಬ ಮೂಲಭೂತ ಸಮಸ್ಯೆ ಪರಿಹರಿಸೋದು ತನ್ನ ಜವಾಬ್ದಾರಿ ಅಲ್ಲ ಅನ್ನುವುದೇ ಅಪದ್ಧ! ಗ್ರಾಪಂ ಸದಸ್ಯನಿಂದ ಹಿಡಿದು ಪಾರ್ಲಿಮೆಂಟ್ ಮೆಂಬರ್ ತನಕದ ಚುನಾಯಿತ ಪ್ರತಿನಿಧಿಗಳು ಜನರ ಪ್ರತಿ ಸಮಸ್ಯೆ-ಪ್ರಶ್ನೆಗಳಿಗೂ ಉತ್ತರದಾಯಿಗಳು. ಇದು ಸರಳ ಸಂಸದೀಯ ನಿಯಮ. ಪ್ರಜಾಪ್ರಭುತ್ವದ ಈ ತಳಮಟ್ಟದ ಆಶಯವೇ ಗೊತ್ತಿಲ್ಲದ ಅನಂತ್ಮಾಣಿ ತಾನು ಸಂಸದನಾಗುವ ಯೋಗ್ಯತೆ ಇಲ್ಲದವನೆಂದು ಸ್ವಯಂ ಸಾಬೀತು ಪಡಿಸಿಕೊಳ್ಳುತ್ತಿದ್ದಾನೆ. ಸಂಸದರ ಕಾರ್ಯವ್ಯಾಪ್ತಿಯ ಅರಿವಿಲ್ಲದವರು ತನ್ನನ್ನು ಕೆಲಸಕ್ಕೆ ಬಾರದವನೆಂದು ಟೀಕಿಸುತ್ತಿದ್ದಾರೆನ್ನುವ ಅನಂತ್ಮಾಣಿ ಕಳೆದ 50 ವರ್ಷದಲ್ಲಿ ಯಾವ ಎಂಪಿ ಮಾಡದ ಪ್ರಗತಿ ತಾನು ಮಾಡಿದ್ದೇನೆನ್ನುತ್ತಿದ್ದಾನೆ. ಒಂದಂತೂ ನಿಜ. ಕಳೆದ ಐದು ದಶಕದಲ್ಲಿ ಉತ್ತರ ಕನ್ನಡ ಎಂಪಿಗಳಲ್ಲಿ ಸ್ವ-ಜೀರ್ಣೋದ್ಧಾರ ಅನಂತ್ಮಾಣಿಯಷ್ಟು ಜಬರ್ದಸ್ತಾಗಿ ಮಾಡಿಕೊಂಡು ಅದಕ್ಕೆ ದೇಶಭಕ್ತಿ-ಹಿಂದೂತ್ವದ ಗಿಲೀಟು ಕೊಟ್ಟವ ಮತ್ತೊಬ್ಬನಿಲ್ಲ!!

ಕೃಷಿ, ತೋಟಗಾರಿಕೆ, ಮೀನುಗಾರಿಕೆ, ರಸ್ತೆ ರೈಲ್ವೆ, ಪ್ರವಾಸೋದ್ಯಮದಲ್ಲಿ ಉತ್ತರ ಕನ್ನಡ ಅಭಿವೃದ್ಧಿ ಮಾಡಿದ್ದೇನೆ ಎನ್ನುತ್ತಾನೆ ಸುಳ್ಳುಗಾರ ಮಾಣಿ. ಕೃಷಿಕರಿಗೆ-ಮೀನುಗಾರರಿಗೆ ಮಾಣಿಯಿಂದ ಬಿಲ್ಲಿ ಪ್ರಯೋಜನವಾಗಿಲ್ಲ; ರಾಷ್ಟ್ರೀಯ ಹೆದ್ದಾರಿ 66 ರ ಅಗಲೀಕರಣ ಸಮಸ್ಯೆ ಬಂದಾಗ ಈ ಸಂಸದ ತಲೆ ಮರೆಸಿಕೊಂಡಿದ್ದ. ಅಂಕೋಲಾ-ಹುಬ್ಬಳ್ಳಿ ರೈಲುಮಾರ್ಗ ಹಾಗೇ ನೆನೆಗುದಿಗೆ ಬಿದ್ದಿದೆ! ಪ್ರವಾಸೋದ್ಯಮ ಎಂಬುದು ಜಿಲ್ಲೆಯಲ್ಲಿ ಕ್ಲೀಷೆಯಂತಾಗಿದೆ. ಸೀಬರ್ಡ್ ನೌಕಾನೆಲೆ ನಿರಾಶ್ರಿತರ ಸಮಸ್ಯೆ ನೇರವಾಗಿ ಸಂಸದನೇ ಪರಿಹರಿಸುವಂಥ ಕೇಂದ್ರದ ಯೋಜನೆ. ಇದು ಮಾಣಿಗೆ ಗೊತ್ತೇ ಇಲ್ಲ; ಆತ ತಂದಿರುವುದು ಸ್ವ-ಜಾತಿ ಬ್ರಾಹ್ಮಣರ ಮರುಳುಗೊಳಿಸುವ ತೋಟಗಾರಿಕೆ ಸ್ಕೀಮು. ಇದರಲ್ಲಿ ಆತನೇ ಪರೋಕ್ಷ ಫಲಾನುಭವಿ. ತೋಟಗರಿಗೆ ಆದ ಲಾಭ ಅಷ್ಟಕ್ಕಷ್ಟೇ! ಪಾರ್ಲಿಮೆಂಟ್‌ನ ಪಾಲಿಸಿ ಡಿಸೈನರ್‌ನ ಪರಾಕ್ರಮ ಇದು!!

ಅಡಿಕೆ ನಿಷೇಧದ ಗುಮ್ಮ ತೋರಿಸಿ ಬೇಳೆ ಬೇಯಿಸಿಕೊಳ್ಳಲು ಹವಣಿಸಿದ ಮಾಣಿಗೆ ಈಗ ಹವ್ಯಕರೇ ಹವಾ ತೆಗೆಯುತ್ತಿದ್ದಾರೆ! ಅಡಿಕೆ ನಿಷೇಧ ಎಂದು ಬೊಬ್ಬೆ ಹೊಡೆದ ಮಾಣಿ ಅದನ್ನು ಕಾನೂನುಬದ್ಧವಾಗಿ ತಡೆಯುವ ಅಥವಾ

ಉತ್ತರ ಕನ್ನಡ: ಬಿನ್ ಶೇತ್ಕಿ ಭಾನಗಡಿಯಲ್ಲಿ ದೇಶಪಾಂಡೆ ಡಬ್ಬಲ್ ಗೇಮ್!!



ಪತ್ರಿಕೆ ಎಫೆಕ್ಟ್

'ಪತ್ರಿಕೆ' ಬಡಿದ ಹುತ್ತದಿಂದ ಒಂದಲ್ಲ, ಎರಡಲ್ಲ, ಮೂರಲ್ಲ ಬರೋಬ್ಬರಿ ನಾಲ್ಕು ಸ್ವಾಹಾ ಸರ್ಪಗಳು ತಪ್ಪಿಸಿಕೊಂಡು ಓಡಿಹೋಗಿವೆ! ಇದರಲ್ಲಿ ಒಂದು ಮಹಾ ಚಾಲಾಕಿ ವಿಷಸರ್ಪ. ಈ ಸೋಗಲಾಡಿ ಸರ್ಪ- ಉಳಿದ ಮೂವರು ಭ್ರಷ್ಟರು-ದುಷ್ಟರು ತಾನು ಮಾತ್ರ ಸುಬಗನೆಂದು ಹೈಡ್ರಾಮಾ ಮಾಡುತ್ತ ಹೆಡೆಯಾಡಿಸುತ್ತ ವ್ಯಯಾರ ಮಾಡುತ್ತಿದೆ. ಈ ಲಂಚ ಬಡುಕರ ಪ್ರಹಸನದ ನಂಬರ್ ಒನ್ ನಾಗರಹಾವೆಂದರೆ, ಉತ್ತರ ಕನ್ನಡವನ್ನು ಮಹಾರಾಜನ ದರ್ಪದಿಂದ ಆಳುತ್ತಿರುವ ಆರ್.ವಿ. ದೇಶಪಾಂಡೆ; ಉಳಿದ ಮೂವರು ಐಎಎಸ್, ಕೆಎಎಸ್ ಮತ್ತು ಎಸ್‌ಡಿಎ ಗ್ರೇಡಿನ ಸರ್ಕಾರಿ ಕರ್ಮಚಾರಿಗಳು.

ಫೆಬ್ರವರಿ 19ರ ಸಂಚಿಕೆಯಲ್ಲಿ 'ದಗಲುಬಾಜಿ ದೇಶಪಾಂಡೆಯ ಬಿನ್ ಶೇತ್ಕಿ ಬಿಸ್ನೆಸ್' ಎಂಬ ತನಿಖಾ ವರದಿಯೊಂದನ್ನು 'ಪತ್ರಿಕೆ' ಪ್ರಕಟಿಸಿತ್ತು. ಈ ವರದಿ ನೋಡಿದ್ದೇ ತಡ, ದೇಶಪಾಂಡೆ ಕುಂಡೆ ಸುಟ್ಟ ಬೆಕ್ಕಿನಂತೆ ಚಡಪಡಿಸಲಾರಂಭಿಸಿದ್ದರು. ಉತ್ತರ ಕನ್ನಡ ಜಿಲ್ಲಾಧಿಕಾರಿ ಕಚೇರಿಯಲ್ಲಿ ಮಂತ್ರಿ ದೇಶಪಾಂಡೆಯ ಉಸ್ತುವಾರಿಯಲ್ಲೇ ಕೃಷಿ ಭೂಮಿಯನ್ನು ವಾಣಿಜ್ಯ ಉದ್ದೇಶಕ್ಕಾಗಿ ಬಿನ್ ಶೇತ್ಕಿ (ನಾನ್ ಅಗ್ರಿಕಲ್ಚರ್) ಭೂಮಿಯನ್ನಾಗಿ ಪರಿವರ್ತಿಸುವ ಕೋಟ್ಯಾಂತರ ರೂ. ದಂಧೆ ನಡೆಯುತ್ತಿರುವುದು ಪತ್ರಿಕೆ ಬಹಿರಂಗ ಮಾಡಿತ್ತು. ಸದ್ರಿ ವರದಿ ಬಂದ ಮರುದಿನವೇ ಕಾರವಾರಕ್ಕೆ ಬಂದಿದ್ದ ದೇಶಪಾಂಡೆ ಮುಖ ಗಂಟು ಹಾಕಿಕೊಂಡೇ ಇದ್ದರು. ಎಂದಿನ ದರ್ಪ-ದೌಲತ್ತು ಇದ್ದರೂ ಒಂಥರಾ ಅನ್ಯ ಮನಸ್ಕರಾಗಿದ್ದರು. ಸಂಜೆ ವೇಳೆಗೆ ಶುರು ಹಚ್ಚಿಕೊಂಡಿದ್ದ ಅಧಿಕಾರಿಗಳ ಮೀಟಿಂಗ್ ಮುಗಿದಾಗ ರಾತ್ರಿಯಾಗಿತ್ತು.

ಈ ಅಧಿಕಾರಿಗಳ ಸಭೆ ಮುಗಿಸಿದ ದೇಶಪಾಂಡೆ ಹೊರಹೋಗಲು ಅಣಿಯಾದರು. ಆದರೆ ಅದೇನೋ ಮರೆತಂತೆ ತಿರುಗಿ ಜಿಲ್ಲಾಧಿಕಾರಿ ಕೋಣೆ ಬಳಿ ಬಂದರು. ಡಿಸಿ ಚೇಂಬರಿನ ಪಕ್ಕದಲ್ಲೇ ಇರುವ ಬೀಗ ಜಡಿದ ರೂಮೊಂದರ ಬಳಿ ಬಂದುನಿಂತರು. "ಈ ಕೋಣೆ ಬೀಗ ತೆಗೀರಿ..." ಎಂದಬ್ಬರಿಸಿದರು. ಆ ಕೋಣೆಯಲ್ಲಿ ಬಿನ್ ಶೇತ್ಕಿ ಕಡತಗಳನ್ನು ಕಾರಕೂನ ವಿನೋದ ಬೊಂಗಾಳೆ ಪೇರಿಸಿಟ್ಟಿದ್ದು ದೇಶಪಾಂಡೆ ಸಾಹೇಬರಿಗೆ ಗೊತ್ತಿತ್ತು. ರೂಮಿನ ಬಾಗಿಲು ತೆರೆಯಲು ಬಂದ ವಿನೋದ್ ಬೊಂಗಾಳೆಗೆ "ಇದ್ರಲ್ಲಿ ಏನಿಟ್ಟಿದ್ದೀಯಪ್ಪಾ.. ಬಿನ್ ಶೇತ್ಕಿ ಫೈಲ್ ಅಲ್ವಾ...?" ಎಷ್ಟು ಲಂಚ ತಗೊಂಡ್ ಪ್ರಕರಣ ನಿಖಾಲಿ ಮಾಡ್ತಿದೀss...?!" ಎಂದು ದಬಾಯಿಸುತ್ತಾರೆ.

ಖದೀಮ ಕ್ಲರ್ಕ್ ಬೊಂಗಾಳೆ "ಬೆಬೆ... ಬೆಬೆ... ಬೆ... ಬೆ..." ಅನ್ನುತ್ತಾನೆ. "ಇವ ಮಾಡೋದು ನೋಡಿದ್ರೆ ಲಂಚಾ ಹೊಡೀತಾನೆ ಅಂತನ್ನಸ್ತದ... ಈ ರೂಮಿಗೆ ಮತ್ತೊಂದು ಬೀಗ ಹಾಕ್ರಿ... ಇವ್ನ ಮೇಲೆ ಲೋಕಾಯುಕ್ತಕ್ಕೆ ಕಂಪ್ಲೇಂಟು ಕೊಡ್ರಿ... ಲೋಕಾಯುಕ್ತದೋರೆ ಬಂದು ಬೀಗ ತೆಗೀ ಮಟ್ಟ ನೀವ್ಯಾರೂ ಬೀಗ ತೆಗೀಬ್ಯಾಡ್ರಿss..." ಎಂದು ದೇಶಪಾಂಡೆಜೀ ಜಿಲ್ಲಾಧಿಕಾರಿಣಿ ಇಂಕಾಂಗ್ಲೋ ಜಮೀರ್‌ಗೆ ಆರ್ಡರ್ ಮಾಡಿ ಹೋಗ್ತಾರೆ. ಇದಿಷ್ಟಾಗಿದ್ದು ಶನಿವಾರ ರಾತ್ರಿ (22-02-2014).

ಮರುದಿನ ರವಿವಾರದ ಸಂಜೆ. ಮಾರನೇ ದಿನ ಕೆಲಸದ ಸೋಮವಾರ. ವಿನೋದ್ ಬೊಂಗಾಳೆ ಮಾತ್ರ ಏನೂ ಆಗದಂತೆ ಆರಾಮಾಗೇ ಕಚೇರಿಗೆ ಬಂದಿದ್ದ. ಆತನಿಗೆ ಗೊತ್ತಿತ್ತು, ತನ್ನ ಮೇಲೇನಾದರೂ ಕ್ರಮ ಕೈಗೊಂಡರೆ ತನಗೆ ಬಿನ್ ಶೇತ್ಕಿ ಲಂಚಕ್ಕಾಗಿ ನಿರ್ದೇಶನ ನೀಡಿ ಪಾತಕ ಮಾಡಿಸುತ್ತಿದ್ದ ಜಿಲ್ಲಾಧಿಕಾರಿ ಇಂಕಾಂಗ್ಲೋ, ಎಡಿಷನಲ್ ಡಿಸಿ ವಿಜಯ ಮಹಾಂತೇಶ್ ದಾನಮ್ಮನವರ್ ಮತ್ತು ಇವರ 'ಬಾಸ್' ದೇಶಪಾಂಡೆ ಮಹಾರಾಜ್ ಸರಣಿಯಾಗಿ ಸಿಕ್ಕಿಬೀಳುತ್ತಾರೆಂದು. ಹಾಗಾಗಿ ಆತ ಭ್ರಷ್ಟಾಚಾರ ಬಿರುಸಾಗಿ ಮಾಡಿದರೂ ನಿರಾತಂಕವಾಗಿದ್ದ. ಸರಿ ಸೋಮವಾರ ಮುಂಜಾನೆ ಆಫೀಸಿಗೆ ಬಂದ ಡಿಸಿ, ಎಡಿಸಿ ಏನೇನೋ ಮಾತಾಡಿಕೊಂಡರು. ಬಿನ್ ಶೇತ್ಕಿ ಬೊಂಗಾಳೆಯನ್ನು ಆ ಕಂಪಾಲೇಷನ್‌ನಿಂದ ಬದಲಿಸಿದರು. ಹಾಗಂತ ವಿವರಣೆ ಕೇಳುವ ಸಣ್ಣ ನೋಟಿಸ್ ಸಹ ಕೊಡಲಿಲ್ಲ ಬೊಂಗಾಳಿಗೆ.

ಇದಕ್ಕಿಂತಲೂ ದೊಡ್ಡದಾದ ಅನ್ಯಾಯ-ಅಕ್ರಮ ಡಿಸಿ-ಎಡಿಸಿ ಮಾಡಿದ್ದರು. ಜಿಲ್ಲಾ ಮಂತ್ರಿ ಬೊಂಗಾಳೆ ಬಿನ್ ಶೇತ್ಕಿ ಕಡತ ತುಂಬಿಟ್ಟಿದ್ದ ಕೋಣೆಗೆ ಹಾಕಿದ್ದ ಬೀಗ ಈ ಐಎಎಸ್-ಕೆಎಎಸ್ ಖದೀಮರು ತೆಗೆದಿದ್ದರು. ತಾನು ಕೇಳಿದಷ್ಟು ಕಾಸು ಕೊಡದ ಬರೋಬ್ಬರಿ 1,800 ಬಿನ್ ಶೇತ್ಕಿ ಅರ್ಜಿಗಳು ಅಲ್ಲಿ ಕೊಳೆ ಹಾಕಿದ್ದ ಬೋಂಗಾಳೆ ತನ್ನ ನಿರ್ದೇಶಕರಾದ ಡಿಸಿ-ಎಡಿಸಿ ಆಜ್ಞೆಯಂತೆ. ಲೋಕಾಯುಕ್ತದವರೇ ಈ ಕೊಠಡಿಯ ಬಾಗಿಲು ತೆರೆಯಬೇಕೆಂತಲೂ; ಕ್ಲರ್ಕ್ ಬೋಂಗಾಳೆಯನ್ನ ಲೋಕಾಯುಕ್ತರ ಕೈಗೆ ಕೊಡಬೇಕೆಂತಲೂ ದೇಶಪಾಂಡೆ ಹಾರಾಡಿದ್ದರು. ಇದ್ಯಾವುದೂ ಕೇರ್ ಮಾಡದೆ ಬಿನ್ ಶೇತ್ಕಿ ಕೋಣೆಯ ಬಾಗಿಲು ತೆರೆಯುವ ಧೈರ್ಯ ಡಿಸಿ ಮತ್ತು ಎಡಿಸಿಗೆ ಹೇಗೆ ಬಂತು?! ಹಾಗಂತ ಜಿಲ್ಲೆಯ



ವಿಜಯ್ ಮಹಾಂತೇಶ್



ಇಂಕಾಂಗ್ಲೋ ಜಮೀರ್

ಆತಂಕಿತ ತೋಟಗರಿಗೆ ಸಾಂತ್ವನ ಹೇಳುವ ಯಾವ ಕೆಲಸವೂ ಮಾಡಲಿಲ್ಲ. ಸಂಸದನ ಕರ್ತವ್ಯದ ಶಿಕ್ಷಿತರಿಗೇ ಅರಿವಿಲ್ಲ ಎಂದು ಮೂದಲಿಸುವ ಈ ಅತೀ ಬುದ್ಧಿವಂತ ದ್ವೈತ-ಅದ್ವೈತ ಸಿದ್ಧಾಂತದ ಪ್ರವಚನದ ಮೂಲಕ ಎಂಪಿಗಿರಿ ಕರ್ತವ್ಯ ಸೀಮಿತಗೊಳಿಸಿಕೊಂಡು ಬಚಾವಾಗಲು ಹವಣಿಸುತ್ತಿದ್ದಾನೆ. ಮಜಾ ಎಂದರೆ, ಮಾಣಿ ದ್ವೈತ ಸಿದ್ಧಾಂತವೇ ಜಗಜ್ಜಾಹೀರಾಗುತ್ತಿದೆ. ಅನಂತ್ಮಾಣಿಯ ದ್ವೈತ ತತ್ವ ಎಂದರೆ ದ್ವಂದ್ವ. ಹೇಳೋದು ಬ್ರಹ್ಮಾಂಡ; ತಿನ್ನೋದು ಮಶಿ ಕೆಂಡ.

ಈ ಯಾವ ಎಡಬಿಡಂಗಿ ಸಮರ್ಥನೆಯೂ ತನಗೆ ಮತತರದೆಂಬುದು ಅನಂತ್ಮಾಣಿ ಪಕ್ಕಾ ಆಗಿದೆ. ಜನರೀಗ ತನ್ನನ್ನು ನಂಬುವ ಸ್ಥಿತಿಯಲ್ಲಿಲ್ಲ ಎಂಬುದು ಅರ್ಥವಾಗಿದೆ. ಹಾಗಾಗಿ ಆತ ಅದೆಂಥ ಇಂಟಲೆಕ್ಚುವಲ್ ತಿಪ್ಪರಲಾಗ ಹಾಕಿದರೂ ಕೊನೆಗೆ ಬಂದು ನಿಲ್ಲುವುದು ಮತ್ತದೇ ಪ್ರಚೋದನಾತ್ಮಕ-ಸ್ಯಾಡಿಸ್ಟ್ ಹಿಂದೂತ್ವಕ್ಕೇ! "ಹಿಂದೂಗಳು ಮಾತ್ರ ನಂಗೆ ಓಟು ಕೊಟ್ಟರೆ ಸಾಕು; ಸಾಬರ, ಕ್ರಿಶ್ಚಿಯನ್ನರ ಓಟು ನಂಗೆ ಬೇಡ... ಹಿಂದೂ ಸಿದ್ಧಾಂತಕ್ಕೆ ಬದ್ಧರಾದವರು ದೇಶಕ್ಕೋಸ್ಕರ ಬಿಜೆಪಿಗೆ ಮತ ಕೊಟ್ಟೇ ಕೊಡ್ತಾರೆ..." ಎಂದು ವೀರಾವೇಷ ಪ್ರದರ್ಶಿಸುತ್ತಿದ್ದಾನೆ ಮಾಣಿ. ಹೀಗೆ ನೇರಾನೇರ ಕೋಮು ಕಿತಾಪತಿಯ ಭಾಷಣ ಮಾಡೋದು ಮಾಣಿಗೆ ಚಟವಾಗಿ ಹೋಗಿದೆ.

ದುರಂತವೆಂದರೆ, ಈ ಕ್ರಿಮಿನಲ್ ಭಾಷಣ ಕೇಳಿಯೂ ಕೇಳದಂತೆ ಚುನಾವಣಾ ಆಯೋಗ ಆರಾಮಾಗಿದೆ. ಎದುರಾಳಿ ಕಾಂಗ್ರೆಸ್-ಜೆಡಿಎಸ್‌ನ ಜೋಭದ್ರಗೇಡಿಗಳಿಗೆ ಅನಂತ್ಮಾಣಿಯ ಮತಾಂಧ ಭಾವನೆ ಕೆರಳಿಸುವ ಮಾತುಗಾರಿಕೆ ಅರ್ಥವೇ ಆಗುತ್ತಿಲ್ಲ. ಇದು ಚುನಾವಣಾ ನೀತಿಸಂಹಿತೆ ಉಲ್ಲಂಘನೆಯ ಜೀವಂತ ಪ್ರಕರಣ. ಕಳೆದ ಬಾರಿ ಎಲೆಕ್ಷನ್ ಹೊತ್ತಲ್ಲಿ ಈ ಮಾಣಿ ವರುಣ್ ಗಾಂಧಿ ಸ್ಟೈಲಲ್ಲಿ ಮುಸ್ಲಿಮರ ಕೈ ಕಡಿಯುವ ಖತರ್‌ನಾಕ್ ಖದರು ಪ್ರದರ್ಶಿಸಿದ್ದ. ಆಗಲೂ ಏನೂ ಆಗಲಿಲ್ಲ; ಈಗಲಾದರೂ ಚುನಾವಣಾ ಆಯೋಗ ಮತ್ತು ಹೇತ್ಲಾಂಡಿ ಕಾಂಗ್ರೆಸ್ ಕಿಂಗ್‌ಗಳು-ಜೆಡಿಎಸ್ ಸರದಾರರು ಎಚ್ಚೆತ್ತುಕೊಳ್ಳಬಹುದಾ? ಮಾಣಿಗೆ ಮೂಗುದಾರ ಹಾಕೋರ್‍ಯಾರು?

● ನಹುಷ


ಜನರು ಮೂಗಿನ ಮೇಲೆ ಬೆರಳಿಟ್ಟುಕೊಂಡು ಚರ್ಚಿಸಿದರು.

ಆದರೆ ಇದರಲ್ಲಿ ಧೈರ್ಯ ಅಥವಾ ಅಧಿಕಾರಿಗಳ ಅಧಿಕ ಪ್ರಸಂಗದ ಪ್ರಶ್ನೆಯೇ ಇಲ್ಲ. "ನಾ ಹೊಡೆದಂತೆ ಮಾಡ್ತೇನೆ... ನೀ ಅತ್ತಂಗೆ ಮಾಡು" ಎಂಬ ನಾಟಕವನ್ನು ಅತ್ಯದ್ಭುತವಾಗಿ ಪ್ರದರ್ಶಿಸುವ ನಟ ಸಾರ್ವಭೌಮ ದೇಶಪಾಂಡೆಯ ರಹಸ್ಯ ಗೈಡ್ ಲೈನ್ಸ್ ಪ್ರಕಾರವೇ ಡಿಸಿ-ಎಡಿಸಿ ಬಿನ್ ಶೇತ್ಕಿ ಭಾನ್ಗಡಿಗೆ ಮೋಕ್ಷ ಕಾಣಿಸಲು ಸ್ಕೆಚ್ ಹಾಕಿದ್ದರು. ತಿಂಗಳಿಗೆ ಅರ್ಧ ಕೋಟಿ ಕಲೆಕ್ಷನ್ ವ್ಯವಹಾರವಾಗಿದ್ದ ಈ ಬಿನ್ ಶೇತ್ಕಿ ಪರಿವರ್ತನೆ ಪ್ರಕ್ರಿಯೆಯಲ್ಲಿ ದೊಡ್ಡವರಿಗೆಲ್ಲ ಅರ್ಹತೆಗೆ ತಕ್ಕಂತೆ ಪಾಲಿತ್ತು. ಅಕಸ್ಮಾತ್ ಲೋಕಾಯುಕ್ತ ತನಿಖೆಯಾದರೆ ಬೊಂಗಾಳಿ ಜತೆಗೆ ಆತನ ಗುರು ಎಡಿಸಿ ವಿಜಯ್ ಮಹಾಂತೇಶ್, ಆತನ ಮೇಲಾಧಿಕಾರಿಣಿ ಡಿಸಿಯಮ್ಮ ಇಂಕಾಂಗ್ಲೋ, ಇವರೆಲ್ಲರ ದೊರೆ ದೇಶಪಾಂಡೆ ಒಬ್ಬೊಬ್ಬರಾಗಿ ಬೆತ್ತಲಾಗಬೇಕಾಗುತ್ತಿತ್ತು. ಹಾಗಾಗಿ ಬಿನ್ ಶೇತ್ಕಿ ಕಾರಕೂನ ಬೊಂಗಾಳಿಗೆ ಜಾಗ ಬದಲಿಸಿದಂತೆ ಮಾಡಿ ಪ್ರಕರಣ ಅಲ್ಲಿಗೇ ಖತಮ್ ಮಾಡುವ ನಿರ್ಧಾರ ದೇಶಪಾಂಡೆ ರೇಡು ಹಾಕಿದ ಮರುಘಳಿಗೆಯೇ ನಡೆದ ಮಂತ್ರಿ-ಡಿಸಿ-ಎಡಿಸಿ ಸಭೆಯಲ್ಲಿ ಮಾಡಲಾಗಿತ್ತು.

ಬಿನ್ ಶೇತ್ಕಿ ಭಾನ್ಗಡಿ ಸಮಾಧಿಯಾಗಲು ದೇಶಪಾಂಡೆ ಮಗ- ಎಂಪಿಗಿರಿ ಆಕಾಂಕ್ಷಿ ಪ್ರಶಾಂತ ದೇಶಪಾಂಡೆ ಮತ್ತು ಅಪ್ಪ-ಮಗನ ದರ್ಬಾರಿನ ಆತ್ಮೀಯ ಏಜೆಂಟ್ ಕಂ ಎಮ್ಮೆಲ್ಸಿ ಶ್ರೀಕಾಂತ ಘೋಟನೇಕರ್ ಒತ್ತಡವೇ ಕಾರಣ ಎಂಬ ಚರ್ಚೆ ಜಿಲ್ಲೆಯಲ್ಲಿ ನಡೆದಿದೆ. ಆದರಿದು ದೇಶಪಾಂಡೆಯದೇ ತೀರ್ಮಾನ. ಜನರ ಮಂಗ ಮಾಡಿ ಬೆಣ್ಣೆ ತಿನ್ನುವ ಆತನ ಲಾಗಾಯ್ತಿನ ಕುತಂತ್ರಗಾರಿಕೆಯಿದು. ಈಗ ಡಿಸಿ ಇಂಕಾಂಗ್ಲೋ ಮತ್ತು ಎಡಿಸಿ ವಿಜಯ್ ದಾನಮ್ಮನರ್ ಇಬ್ಬರೂ ವರ್ಗವೂ ಆಗಿಹೋಗಿದ್ದಾರೆ. ಅಂದರೆ ಅಲ್ಲಿಗೆ ಬಿನ್ ಶೇತ್ಕಿ ಭಾನ್ಗಡಿಯ ಶವಪೆಟ್ಟಿಗೆಗೆ ಕೊನೆಯ ಮೊಳೆ ಜಡಿದಂತಾಗಿದೆ!

ದುರಂತ ಎಂದರೆ, ಈ ಬಿನ್ ಶೇತ್ಕಿ ಭಾನ್ಗಡಿಯ ಬೆಂಕಿಯಲ್ಲಿ ರಿಯಲ್ ಎಸ್ಟೇಟ್ ಕಳ್ಳ ಕುಳಗಳು ಮತ್ತು ಎನ್‌ಎ ಏಜೆಂಟರೂ ಬೇಳೆ ಬೇಯಿಸಿಕೊಂಡಿದ್ದಾರೆ. ಪೆಂಡಿಂಗ್ ಇದ್ದ ಸಾವಿರಾರು ಎನ್‌ಎ ಅರ್ಜಿಗಳು ಏಕ ಗಂಟಲ್ಲಿ ಇತ್ಯರ್ಥವಾಗಿದೆ. ಒಟ್ಟಿನಲ್ಲಿ ದೇಶಪಾಂಡೆಯ ಡಬ್ಬಲ್ ಗೇಮ್‌ನಲ್ಲಿ ಉತ್ತರ ಕನ್ನಡ ದಿಕ್ಕು ದಿವಾಳಿಯಾಗುತ್ತಿದೆ. ಸರ್ಕಾರಿ ಕಚೇರಿಗಳು ಲೇವಾದೇವಿ ಅಡ್ಡೆಗಳಾಗುತ್ತಿವೆ. ಉತ್ತರ ಕನ್ನಡದತ್ತ ಖುದ್ದು ಸಿಎಂ ಸಿದ್ದು ಸಾಹೇಬರೇ ಕೃಪಾ ದೃಷ್ಟಿ ಹರಿಸುವ ಜರೂರತ್ತಿದೆ...

● ನಹುಷ



ಯಶಸ್ವಿಯಾಗಿ ನಡೆದ ಲಂಕೇಶರ 79ನೇ ಜನ್ಮೋತ್ಸವ



ಮಾರ್ಚ್ 9ರಂದು ರಾಯಚೂರು ನಗರದಲ್ಲಿ ಪಿ.ಲಂಕೇಶರ 79ನೇ ಜನ್ಮೋತ್ಸವ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಜಂಬಲದಿನ್ನಿ ರಂಗಮಂದಿರ ಸಮಾನ ಮನಸ್ಕರಿಂದ ತುಂಬಿಹೋಗಿತ್ತು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಲಂಕೇಶ್ ಬಳಗ, ಲೋಹಿಯಾ ಪ್ರತಿಷ್ಠಾನ, ರಾಯಚೂರಿನ ದಲಿತ ಸಾಹಿತ್ಯ ಪರಿಷತ್, ಸಿಂಧನೂರಿನ ಮನುಜ ಮತ ಬಳಗ ಆಯೋಜಿಸಿದ್ದ ಈ ಕಾರ್ಯಕ್ರಮಕ್ಕೆ ಸುತ್ತಮುತ್ತಲ ಜಿಲ್ಲೆಗಳಿಂದ ಮಾತ್ರವಲ್ಲ, ರಾಜ್ಯದ ವಿವಿಧ ಭಾಗಗಳಿಂದಲೂ ಜನ ಬಂದಿದ್ದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಹಲವರ ಅಭಿಪ್ರಾಯಗಳನ್ನು ಸಿಂಧನೂರಿನ ಮನುಜ ಮತ ಬಳಗದ ಸಿದ್ದಲಿಂಗಪ್ಪ ಡಿ.ಎಚ್. ಸಂಗ್ರಹಿಸಿ ಇಲ್ಲಿ ಕೊಟ್ಟಿದ್ದಾರೆ.

****

"ಬಹುದಿನಗಳಿಂದ ಹೈದ್ರಾಬಾದ್ ಕರ್ನಾಟಕದಲ್ಲಿ ಜನಪರ ಚರ್ಚೆ, ಚಳವಳಿ, ಸಮಾವೇಶಗಳು ಕೇಳಿಬರುತ್ತಿರಲಿಲ್ಲ. ಅದು ಈಗ ನೆರವೇರಿದೆ ಎಂದು ಅನ್ನಿಸುತ್ತದೆ. ಈ ಕಾರ್ಯಕ್ರಮದಲ್ಲಿ ನಡೆದ ಚರ್ಚೆಗಳಿಂದ ಇಲ್ಲಿನ ಜನಕ್ಕೆ ತಮ್ಮಲ್ಲಿರುವ ದೇಶಾಭಿಮಾನವನ್ನು ಹೊರಸೂಸುವ ಹಾಗೂ ಕಗ್ಗತ್ತಲಿನಿಂದ ಹೊರಬರಲು ಬೆಳಕನ್ನು ಚೆಲ್ಲಿದಂತಾಗಿದೆ. ಇಂತಹ ಕಾರ್ಯಕ್ರಮಗಳು ಈ ಭಾಗದಲ್ಲಿ ಹೆಚ್ಚಿನ ರೀತಿಯಲ್ಲಿ ನಡೆದು ಹೊಸ ಕ್ರಾಂತಿಯನ್ನು ಸೃಷ್ಟಿಸಲಿ ಎಂದು ಆಶಿಸುತ್ತೇನೆ."

-ರಹಮತ್ ತರೀಕೆರೆ, ಕನ್ನಡ ಅಧ್ಯಯನ ವಿಭಾಗ, ಹಂಪಿ

"ನನ್ನ ಜಿಲ್ಲೆಯಲ್ಲಿ ಲಂಕೇಶರ ಆಶಯಗಳಿಗೆ ಈ ಜನವೇ ಸಾಕ್ಷಿ. ಆದ್ದರಿಂದ ಲಂಕೇಶರ ಆಶೋತ್ತರಗಳನ್ನು ನೆರವೇರಿಸಲು ಹಾಗೂ ಇಲ್ಲಿನ ಯುವಕರಲ್ಲಿ ಸಮಾಜಪ್ರಜ್ಞೆಯನ್ನು ಮೂಡಿಸಲು ಇಂತಹ ಕಾರ್ಯಕ್ರಮಗಳು ಜರುಗಿಸಲು ಇನ್ನಷ್ಟು ನಾವು ಅಣಿಗೊಳ್ಳಬೇಕೆಂದು ನನ್ನ ಆಶಯ."

-ಕಲಿಗಣನಾಥ ಗುಡದೂರು, ಪತ್ರಕರ್ತರು

"ಸತತ ಅಧ್ಯಯನ ಹಾಗೂ ಆತ್ಮವಿಮರ್ಶೆಯ ಮೂಲಕ ಭವಿಷ್ಯ ರೂಪಿಸಿಕೊಳ್ಳಬೇಕು. ಅಂತಹ ಅವಕಾಶವನ್ನು ಇಂತಹ ಕಾರ್ಯಕ್ರಮಗಳು ಹೆಚ್ಚು ಹೆಚ್ಚು ಆಯೋಜಿಸುವುದರಿಂದ ಸಾಧ್ಯವಾಗುತ್ತದೆ. ಇದರಿಂದ ಬದಲಾವಣೆಯ ಗಾಳಿ ದೇಶದಲ್ಲಿ ಪಸರಿಸುತ್ತದೆ ಎಂಬುದು ನನ್ನ ಆಶಯ."

-ವಿಠ್ಠಪ್ಪ ಗೋರಂಟ್ಲಿ, ಕೊಪ್ಪಳ

"ಲಂಕೇಶರ 79ನೇ ಜನ್ಮೋತ್ಸವ ಕಾರ್ಯಕ್ರಮ ರಾಯಚೂರಿನಲ್ಲಿ ಅರ್ಥಪೂರ್ಣವಾಗಿದೆ. ಈ ಕಾರ್ಯಕ್ರಮವು ಇಲ್ಲಿನ ಜನರಲ್ಲಿ ಪರಿಪೂರ್ಣ ದೇಶ ಕಟ್ಟುವತ್ತ ಸಾಧ್ಯವಾಗಲಿದೆ. ಪ್ರತಿಯೊಂದು ಜಿಲ್ಲೆಯಲ್ಲೂ ಇಂತಹ ಕಾರ್ಯಕ್ರಮ ನಡೆಯಲಿ ಎಂದು ಆಶಿಸುತ್ತೇನೆ."

-ಡಿ.ಹೆಚ್. ಕಂಬಳಿ, ಪತ್ರಕರ್ತರು, ಸಿಂಧನೂರು

"ಹೈದ್ರಾಬಾದ್ ಕರ್ನಾಟಕದ ಹುಡುಗನಾದ ನನಗೆ ಈ ನೆಲದಲ್ಲಿ ಇಂತಹದೊಂದು ಅರಿವಿನ ದೀಪವನ್ನು ಲಂಕೇಶರ 79ನೇ ಜನ್ಮೋತ್ಸವ ಕಾರ್ಯಕ್ರಮದ ಮೂಲಕ ಉಣಬಡಿಸಿದ್ದಕ್ಕೆ ಆಯೋಜಕರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ನನ್ನಂತಹ ಯುವಕ ಯುವತಿಯರು, ಪ್ರಜ್ಞಾಪೂರ್ವಕ ವ್ಯಕ್ತಿಗಳು ಹೆಚ್ಚಿನ ಸಂಖ್ಯೆಯಲ್ಲಿ ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಮಾಡಿ ಅವರಲ್ಲಿ ಅರಿವಿನ ಪ್ರಜ್ಞೆಯನ್ನು ಮೂಡಿಸಿದ್ದಕ್ಕೆ ನನ್ನ ಮನಃಪೂರ್ವಕ ಅಭಿನಂದನೆಗಳು."

-ಎಂ. ಭೀಮೇಶ ಯದ್ದೊಡ್ಡಿ, ಶಿಕ್ಷಕರು

"ಆಂತರಿಕ ಹಾಗೂ ಬಾಹ್ಯ ಹೋರಾಟಗಳಿಂದ ಮನುಷ್ಯ ವಿಮರ್ಶೆ ಹಾಗೂ ಸಮಾನತೆ ಪಡೆಯಬಹುದು. ಅಂತಹ ಕಾರ್ಯಕ್ರಮಗಳಲ್ಲಿ ಈ ಕಾರ್ಯಕ್ರಮ ಒಂದೆಂದರೆ ತಪ್ಪಾಗಲಿಕ್ಕಿಲ್ಲ."

-ಅಲ್ಲಮಪ್ರಭು ಬೆಟ್ಟದೂರು, ಬರಹಗಾರರು

"ಸಮಾಜವನ್ನು ಶುದ್ಧೀಕರಿಸುವ ಇಂತಹ ಕಾರ್ಯಕ್ರಮಗಳು ಮುಖ್ಯ. ಇನ್ನೂ ಹೆಚ್ಚಿನ ರೀತಿಯಲ್ಲಿ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸಬೇಕಿದೆ. ಈ ಭಾಗದಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಿದ ಎಲ್ಲಾ ಸಹೃದಯ ಬಾಂಧವರಿಗೂ ಹಾಗೂ ಪರಿವರ್ತನೆಯನ್ನು ಬೆಂಬಲಿಸುವಂತಹ ಯುವಕ-ಯುವತಿಯರಿಗೂ ನನ್ನಂತಹ ಸಾಮಾನ್ಯ ಮಹಿಳೆಯ ನಮನಗಳು."

-ಲಕ್ಷ್ಮೀ ನಾಯಕ, ಎಂ.ಎ., ಕನ್ನಡ ಅಧ್ಯಯನ ವಿಭಾಗ, ಪಿ.ಜಿ.ಸೆಂಟರ್, ರಾಯಚೂರು

"ಅರಿವಿನ ಜ್ಞಾನ ನನ್ನಲ್ಲಿ ಸಂಚಲಿಸುವಂತೆ ಮಾಡಿದ ಈ ಕಾರ್ಯಕ್ರಮದ ಮುಖ್ಯ ಭಾಷಣಕಾರರಿಗೂ ಹಾಗೂ ಆಯೋಜಕರಿಗೂ ನನ್ನ ಧನ್ಯವಾದಗಳು.


-ಗಂಗಮ್ಮ ಡಿ.ಹೆಚ್, ಎಂ.ಎ. ಕನ್ನಡ ಅಧ್ಯಯನ ವಿಭಾಗ ಪಿ.ಜಿ.ಸೆಂಟರ್, ರಾಯಚೂರು





ಮೈಸೂರು ಪೊಲೀಸರ ಮಹಾ'ರಾಬರಿ'

2 ಕೋಟಿ ಕದ್ದ ಖಾಕಿ ಖದೀಮರು ನಾಪತ್ತೆ!



ಮೈಸೂರಿನ ಮಾನವಂತ ನಾಗರಿಕರು ಹೀಗೂ ಉಂಟಾ ಅಂತ ಬೇಸ್ತುಬಿದ್ದಿದ್ದಾರೆ. ಬೇಲಿಯೇ ಎದ್ದು ಹೊಲ ಮೇಯುವ ಗಾದೆ ಮಾತನ್ನು ಅಕ್ಷರಶಃ ನಿಜಮಾಡಿರುವ ಮೈಸೂರು ಪೊಲೀಸರೆ ಇಡೀ ಭಾನಗಡಿಯ ಹೈಲೈಟು. ಕೇರಳ ಮೂಲದ ಉದ್ಯಮಿ ಅಬ್ದುಲ್‌ರಹೀಂ ಎಂಬಾತನ 2.05 ಕೋಟಿ ಹಣವನ್ನು ಕಳವು ಮಾಡಿ ಪರಾರಿಯಾಗಿರೊ ಕಳ್ಳರು ಬೇರಾರು ಅಲ್ಲ; ಖುದ್ದು ಮುಖ್ಯಮಂತ್ರಿ ಸಿದ್ದರಾಮಯ್ಯನವರ ತವರೂರು ಮೈಸೂರಿನ ಪೊಲೀಸರು! ಮೈಸೂರು ದಕ್ಷಿಣ ಗ್ರಾಮಾಂತರ ಠಾಣೆಯ ಎಸ್‌ಐ ಜಗದೀಶ್ ತನ್ನೊಂದಿಗೆ ಸತೀಶ್, ಅಬ್ದುಲ್ ಲತೀಫ್, ಅಶೋಕ್, ರವಿ ಮೊದಲಾದವರ ಖಾಕಿ ಟೀಮ್ ಅಧಿಕಾರ ದುರುಪಯೋಗಪಡಿಸಿಕೊಂಡು ಅಜಮಾಸು 2 ಕೋಟಿ ರೊಕ್ಕಕ್ಕೆ ಉಂಡೆನಾಮ ತೀಡಲು ಹೋಗಿ ಇಡೀ ಇಲಾಖೆಯ ಮಾನವನ್ನು ಬೀದಿಯಲ್ಲಿ ಬಿಕರಿಗಿಟ್ಟಿದ್ದಾರೆ.

ಅಷ್ಟಕ್ಕೂ ನಡೆದಿದ್ದು ಏನು?

2014ರ ಜನವರಿ 4ರಂದು ಮಡಿಕೇರಿಯ ಸಲೀಂ ಮತ್ತು ಷರೀಫ್ ಎಂಬ ಪೊಲೀಸ್ ಮಾಹಿತಿದಾರರಿಗೆ ಬೆಂಗಳೂರಿನಿಂದ ಕೇರಳಕ್ಕೆ ಹೊರಟ 'ಕಲ್ಪಕ' ಕೆಎ-01-ಎಎ-2793 ಎಂಬ ಖಾಸಗಿ ಬಸ್ಸಿನಲ್ಲಿ 2.25 ಕೋಟಿ ಹಣ ಸಾಗಿಸಲಾಗುತ್ತಿದೆ ಎಂಬ ಮಾಹಿತಿ ಬಂದಿತ್ತು. ಬಸ್‌ನ್ನು ಹಿಂಬಾಲಿಸಿಕೊಂಡು ಬಂದ ಅವರಿಬ್ಬರು ಮೈಸೂರು ದಕ್ಷಿಣ ಪೊಲೀಸ್ ಠಾಣೆಯ ಮುಖ್ಯ ಪೇದೆ ಸತೀಶ್‌ಗೆ ಮಾಹಿತಿ ನೀಡಿದ್ದರು. ಬಸ್ ಮೈಸೂರಿನ ಮೂಲಕ ಹುಣಸೂರು ಮಾರ್ಗವಾಗಿ ಬರುವ ಬಗ್ಗೆ ಎಸ್‌ಐ ಜಗದೀಶ್‌ಗೆ ಮಾಹಿತಿ ಸಿಕ್ಕೊಡನೆ ಆತ ಈ ಬಗ್ಗೆ ತನ್ನ ಸ್ಕ್ವಾಡ್‌ನ ಡಿವೈಎಸ್ಪಿ ಶ್ರೀಹರಿ ಬರಗೂರು ಅವರಿಗೂ ತಿಳಿಸದೆ ತನ್ನ ರಾಬರಿ ಗ್ಯಾಂಗ್‌ನ ಸದಸ್ಯರಾದ ಅಬ್ದುಲ್ ಲತೀಫ್, ಸತೀಶ್, ಅಶೋಕ್, ರವಿರವರನ್ನು ಕರೆದುಕೊಂಡು ಇಲವಾಲದ ಬಳಿ ಬಸ್‌ನ್ನು ತಡೆದು ಬಸ್‌ನ್ನು ಜಾಲಾಡಿದ್ದ. ಭಯಂಕರ ರಣಹಸಿವಿನ ಮನುಷ್ಯ ಜಗದೀಶ್‌ಗೆ ಬಸ್‌ನಲ್ಲಿ ಹಣ ಸಿಗಲಿಲ್ಲ, ಆದರೆ ಟೂಲ್ಸ್ ಬಾಕ್ಸ್ ಪರಿಶೀಲಿಸಿದಾಗ ಅಲ್ಲಿ 2.25 ಕೋಟಿ ಹಣ ಸಿಕ್ಕಿತ್ತು. ಈ ಹಣ ತಮ್ಮದು ಎಂದು ಯಾವುದೇ ಪ್ರಯಾಣಿಕರು ಒಪ್ಪಿಕೊಳ್ಳದೆ ಇದ್ದರಿಂದ ಎಸ್‌ಐ ಜಗದೀಶ್ ಬಸ್ ಚಾಲಕ ಹುಸೇನ್ ಹಾಗೂ ಮುನೀರ್‌ನ್ನು ಬಂಧಿಸಿ, ಬಸ್‌ನ್ನು ಜಪ್ತಿ ಮಾಡಿ ಸೆಕ್ಷನ್ 41 ಡಿ ಹಾಗೂ 102ರಡಿ ಇಲವಾಳ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ಒಂದನ್ನು ದಾಖಲಿಸಿದ್ದ. ಅಸಲಿಗೆ ಹೈಡ್ರಾಮಾ ನಡೆದಿರೋದೆ ಇಲ್ಲಿ. ಹೇಗೂ ಹಣ ತನ್ನದೆಂದು ಯಾರು ಮುಂದೆ ಬಾರದಿದ್ದರಿಂದ ಇದು ಬೇನಾಮಿ ಗಂಟೆ ಇರಬೇಕು. ಸ್ವಾಹಾ ಮಾಡಿದರೂ ಕೇಳಲು ಯಾರು ಬರೋದಿಲ್ಲ ಎಂಬ ಭ್ರಮೆಯಲ್ಲಿ ಎಸ್‌ಐ ಜಗದೀಶ್ ಬಸ್‌ನಲ್ಲಿ ಸಿಕ್ಕಿದ್ದು ಕೇವಲ 20 ಲಕ್ಷ ಹಣವಷ್ಟೇ ಎಂದು ಎಫ್‌ಐಆರ್ ಗೀಚಿಬಿಟ್ಟಿದ್ದ. ಉಳಿದ 2.05 ಕೋಟಿ ಹಣವನ್ನು ತನ್ನ ರಾಬರಿ ಗ್ಯಾಂಗ್ ಜೊತೆ ಸೇರಿ ಲಪಟಾಯಿಸುವ ಹುನ್ನಾರ ಆತನದಾಗಿತ್ತು.

ಬಾಯಿ ಬಡಿದುಕೊಂಡ ರಹೀಂ

ಆ ಹಣ ಬೆಂಗಳೂರಿನಲ್ಲಿರುವ ಕೇರಳ ಮೂಲದ ಉದ್ಯಮಿ ಅಬ್ದುಲ್ ರಹೀಮ್ ಎಂಬುವನದಾಗಿತ್ತು. ಅಷ್ಟಕ್ಕೂ ಖಾಕಿ ಖದೀಮರು ಎಣಿಸಿದಂತೆ ಅದು ಬೇನಾಮಿ ರೊಕ್ಕವಾಗದೆ ಫ್ಲಾಟ್ ಖರೀದಿಗೆಂದು ಕ್ರಮಬದ್ಧವಾಗೆ ಬ್ಯಾಂಕ್‌ನಿಂದ ಡ್ರಾ ಮಾಡಿ ತಂದ ಗಂಟಾಗಿತ್ತು. ಇತ್ತ ಎಸ್‌ಐ ಜಗದೀಶ್ ತನ್ನ 2.25 ಕೋಟಿ ಹಣದ ಬದಲಿಗೆ ಕೇವಲ 20 ಲಕ್ಷ ಹಣವನ್ನು ಎಫ್‌ಐಆರ್ ನಲ್ಲಿ ದಾಖಲಿಸಿದ್ದು ತಿಳಿಯುತ್ತಿದ್ದಂತೆ ತಡಬಡಾಯಿಸಿ ಮೈಸೂರಿಗೆ ಬಂದ ಅಬ್ದುಲ್ ರಹೀಂ 2.25 ಕೋಟಿ ಹಣವನ್ನು ತನ್ನ ಸಹೋದರನಿಗೆ ಫ್ಲಾಟ್ ಖರೀದಿಸಲು ಕಳುಹಿಸಿದ್ದಾಗಿ ಇಲವಾಲ ಠಾಣೆಯ ಎಸ್‌ಐ ಟಿ.ಎಂ.ಪುನೀತ್ ಎದುರು ಅಲವತ್ತುಕೊಂಡಿದ್ದ. ಆದರೆ ಎಸ್‌ಐ ಪುನೀತ್‌ಗೆ ಸಹಜವಾಗೆ ತನ್ನ ಇಲಾಖೆಯ ಸಹ ಸಿಬ್ಬಂದಿಗಳ ಮೇಲೆ ಅನುಮಾನ ಪಡುವುದು ಸಾಧ್ಯವಿರಲಿಲ್ಲ. ಹಾಗಾಗಿ ಎಫ್‌ಐಆರ್‌ನಲ್ಲಿರುವ 20 ಲಕ್ಷ ಹಣದ ಪಾಠವನ್ನೆ ಉರುಳು ಹೊಡೆದು ರಹೀಂ ಮುಂದೆ ಒಪ್ಪಿಸಿದ್ದ. ಅಬ್ದುಲ್ ರಹೀಂನ ಗೋಳಾಟ ಹೆಚ್ಚಾಗುತ್ತಿದ್ದಂತೆ ಎಸ್‌ಐ ಜಗದೀಶ್‌ನನ್ನೆ ಕರೆದು ವಿಚಾರಿಸಿದಾಗ ಗತ್ತಿನಲ್ಲೆ ತಮಗೆ ಸಿಕ್ಕಿದ್ದು 20 ಲಕ್ಷ ಮಾತ್ರ ಎಂದು ಬೊಗಳಿದ್ದ.

ಸ್ವತಃ ಎಸ್‌ಐ ಜಗದೀಶ್‌ನೆ ಹೀಗೆ ಹೇಳುತ್ತಿದ್ದಂತೆ ಸೀದಾ ಮೈಸೂರು ಎಸ್ಪಿ ಅಭಿನವ ಖರೆ ಬಳಿ ಹೋದ ರಹೀಂ ಸೋದರರಾದ ಜಮ್‌ಶೆಡ್, ಬಾಬು, ಜಮೀಲ್, ಜೈನುಲ್ಲಾವುದ್ದೀನ್‌ರು ಫ್ಲಾಟ್ ಖರೀದಿಗೆಂದು ನಮ್ಮ ಸಹೋದರ ರಹೀಂ ಬೆಂಗಳೂರಿನ ಫೆಡರಲ್ ಬ್ಯಾಂಕ್‌ನಿಂದ 2.25 ಕೋಟಿ ರೂ.ವನ್ನು ಡ್ರಾ ಮಾಡಿ ಖಾಸಗಿ ಬಸ್‌ನಲ್ಲಿ ಕಳುಹಿಸಿದ್ದ ಪ್ರತಿಯೊಂದು ದಾಖಲೆಗಳನ್ನೂ ಹಾಜರುಪಡಿಸಿ ಉಳಿಕೆ 2.05 ಕೋಟಿ ರೂ.ಗಳನ್ನು ಕೊಡಿಸಿಕೊಡಿ ಎಂದು ಕೇಳಿಕೊಂಡಿದ್ದಲ್ಲದೆ ಈ ಬಗ್ಗೆ ದೂರನ್ನೂ ನೀಡಿದ್ದರು. ಎಸ್ಪಿ ಅಭಿನವ್ ಖರೆ, ಎಸ್‌ಐ ಜಗದೀಶ್ ಮತ್ತವನ ರಾಬರಿ ಗ್ಯಾಂಗ್ ಸದಸ್ಯರನ್ನು ಕರೆಸಿ ವಿಚಾರಿಸಿದಾಗಲೂ ಮತ್ತದೇ ಚಂದಮಾಮನ ಕಥೆ ರಿಪೀಟ್ ಮಾಡಿ ತಾವು ಸಾಚಾ ಎನ್ನುವಂತೆ ಬಿಂಬಿಸಿಕೊಂಡಿದ್ದರು. ಯಾವಾಗ 2.05 ಕೋಟಿ ಹಣಕ್ಕೆ ಮೈಸೂರು ಪೊಲೀಸರು ಉಂಡೆನಾಮ ತಿಕ್ಕುವುದು ಗ್ಯಾರಂಟಿ ಎಂಬ ಅನುಮಾನ ಬಂತೋ ಅಬ್ದುಲ್ ರಹೀಂ ಮತ್ತು ಆತನ ಸಹೋದರರು ಸಂಪರ್ಕಿಸಿದ್ದು ಕೇರಳ ಗೃಹಮಂತ್ರಿಯನ್ನು.


ಕೇರಳ ಗೃಹಮಂತ್ರಿ ಎಂಟ್ರಿ

ಕೇರಳ ಗೃಹಮಂತ್ರಿ ರಮೇಶ್ ಚೆನ್ನಿತ್ತಾಲ ಬಳಿಗೆ ಬಂದ ಅಬ್ದುಲ್ ರಹೀಂ ಮತ್ತು ಸಹೋದರರು 'ಕರ್ನಾಟಕ ಪೊಲೀಸರು ತಮಗೆ ಸೇರಿದ 2.25 ಕೋಟಿ ಹಣವನ್ನು ವಶಪಡಿಸಿಕೊಂಡಿದ್ದು, 20 ಲಕ್ಷವನ್ನಷ್ಟೆ ಎಫ್‌ಐಆರ್‌ನಲ್ಲಿ ತೋರಿಸಿ ಉಳಿದ 2.05 ಕೋಟಿ ಹಣವನ್ನು ವಂಚಿಸಿದ್ದಾರೆ' ಎಂದು ಗೋಳಾಡಿದ್ದರು. ಕೂಡಲೇ ಕೇರಳ ಗೃಹಮಂತ್ರಿ ರಮೇಶ್ ಚೆನ್ನಿತ್ತಾಲ ಕರ್ನಾಟಕ ಗೃಹ ಸಚಿವ ಕೆ.ಜೆ.ಜಾರ್ಜ್‌ಗೆ ಫೋನಾಯಿಸಿ 'ಏನಿದೆಲ್ಲಾ ರಾದ್ಧಾಂತ, ಪೊಲೀಸರೆ ಹೀಗೆ ಮಾಡಿದರೆ ಹೇಗೆ? ಕೂಡಲೇ ಸರಿಯಾದ ವಿಚಾರಣೆ ನಡೆಸಿ' ಅಂತ ಮೆಲೊಡಿ ಕ್ಲಾಸ್ ತೆಗೆದುಕೊಂಡಿದ್ದರು.



ತಕ್ಷಣವೆ ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಲಾಲ್‌ರುಕುಮ್ ಪಚಾವ್ರೋ ಅವರನ್ನು ಕರೆಸಿಕೊಂಡ ಕೆ.ಜೆ.ಜಾರ್ಜ್ ಪೊಲೀಸ್ ವಂಚನೆಯ ಕುರಿತು ತನಿಖೆ ನಡೆಸುವಂತೆ ತಿಳಿಸಿದ್ದರು. ಕಡೆಗೂ ಪಚಾವ್ರೋ ಸಾಹೇಬರ ಆದೇಶದಂತೆ ಸ್ವತಃ ಎಸ್ಪಿ ಅಭಿನವ ಖರೆ ಅವರೇ ಇಲವಾಲ ಪೊಲೀಸ್ ಠಾಣೆಗೆ ತೆರಳಿ ಎಸ್‌ಐ ಪುನೀತ್‌ರಿಂದ ಎಫ್‌ಐಆರ್ ಪಡೆದು ಪರಿಶೀಲನೆಗೆ ಇಳಿದಿದ್ದರು. ಈಗಾಗಲೇ 2.25 ಕೋಟಿ ಹಣಕ್ಕೆ ಅಬ್ದುಲ್ ರಹೀಂ ಹಾಜರುಪಡಿಸಿದ್ದ ದಾಖಲೆಗಳನ್ನೆಲ್ಲ ಗಮನಿಸಿದ್ದ ಎಸ್ಪಿ ಅಭಿನವ್ ಖರೆಯವರಿಗೆ ತನಿಖೆಯ ಆರಂಭದಲ್ಲೆ ಎಸ್‌ಐ ಜಗದೀಶ್ ಮತ್ತವನ ರಾಬರಿಗ್ಯಾಂಗ್ 2.05 ಕೋಟಿ ಹಣವನ್ನು ಲಪಟಾಯಿಸಿರುವ ಬಗ್ಗೆ ಸ್ಪಷ್ಟವಾಗಿ ಅರ್ಥವಾಗಿತ್ತು. ಕೂಡಲೇ ಆ 6 ಮಂದಿ ಪೊಲೀಸರ ಮೇಲೆ ಕೇಸ್ ದಾಖಲಿಸುವಂತೆ ಸೂಚಿಸಿದ್ದರು. ಇತ್ತ ಪ್ರಕರಣ ದಾಖಲಾಗುತ್ತಿದ್ದಂತೆ ಎಸ್‌ಐ ಜಗದೀಶನ ಖಾಕಿ ರಾಬರಿ ಟೀಮು ತಲೆಮರೆಸಿಕೊಂಡಿದೆ.

ಅಷ್ಟಕ್ಕೇ ತನಿಖೆಯನ್ನು ನಿಲ್ಲಿಸುವಂತಿರಲಿಲ್ಲ. ಹಾಗಾಗಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹಣ ಸಾಗಿಸುತ್ತಿರುವ ಬಗ್ಗೆ ಮಾಹಿತಿಕೊಟ್ಟಿದ್ದ ಮಾಹಿತಿದಾರರಾದ ಮಡಿಕೇರಿಯ ಸಲೀಂ ಮತ್ತು ಷರೀಫ್‌ನನ್ನು ಬಂಧಿಸಿದ ಎಸ್ಪಿ ಅಭಿನವ್ ಖರೆ ಟ್ರೀಟ್‌ಮೆಂಟ್ ಶುರು ಮಾಡುತ್ತಿದ್ದಂತೆ ಸಲೀಂ ಹಾಗೂ ಷರೀಫ್ ಇಬ್ಬರೂ ತಮಗೆ ಎಸ್‌ಐ ಜಗದೀಶ್ 15 ಲಕ್ಷ ರೂ.ಗಳನ್ನು ನೀಡಿರುವುದಾಗಿ ಬಾಯ್ಬಿಟ್ಟಿದ್ದರು. ಅಲ್ಲದೆ ಇದರಲ್ಲಿ ಭಾಗಿಯಾಗಿದ್ದ ಮತ್ತಿಬ್ಬರು ಮಾಹಿತಿದಾರರಿಗೂ ಇಷ್ಟೇ ಮೊತ್ತವನ್ನು ಕೊಟ್ಟಿರುವುದಾಗಿಯೂ ಹೇಳಿದ್ದರು. ತಮಗೆ ಬಂದಿದ್ದ 15 ಲಕ್ಷದಲ್ಲಿ 7 ಲಕ್ಷವನ್ನು ಆದಾಗಲೆ ಅವರು ಖರ್ಚು



ಮಾಡಿದ್ದರಿಂದ ಉಳಿದ 8 ಲಕ್ಷವನ್ನು ಅಭಿನವ್ ಖರೆ ವಶಪಡಿಸಿಕೊಂಡಿದ್ದಾರೆ. ಉಳಿದ ಇನ್ನಿಬ್ಬರು ಮಾಹಿತಿದಾರರಿಗೂ ಬಲೆ ಬೀಸಲಾಗಿದೆ.


ಹಿರಿಯ ಅಧಿಕಾರಿ ಭಾಗಿ?

ಎಸ್‌ಐ ಜಗದೀಶ್ ಮತ್ತವನ ರಾಬರಿ ಗ್ಯಾಂಗ್ ದೋಚಿದ್ದ ಹಣದಲ್ಲಿ ಸಿಂಹಪಾಲು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರ ಕೈ ಸೇರಿದೆ ಎಂಬ ಮಾಹಿತಿ ಪೊಲೀಸ್ ಇಲಾಖೆಯ ತುಂಬೆಲ್ಲಾ ಹರಿದಾಡುತ್ತಿದೆ. ಜ.4 ರಂದು ದಸ್ತಗೀರ್ ಮಾಡಿದ 2.25 ಕೋಟಿ ಹಣದ ಬಗ್ಗೆ ಎಸ್‌ಐ ಜಗದೀಶ್ ತನ್ನಂತೆಯೇ ಭ್ರಷ್ಟ ಅಧಿಕಾರಿಯಾದ ಹಿರಿಯ ಪೊಲೀಸ್ ಅಧಿಕಾರಿಗೆ ತಿಳಿಸಿದ್ದು ಹಣವನ್ನು ತರಿಸಿಕೊಂಡ ಹಿರಿಯ ಅಧಿಕಾರಿ ಆದರಲ್ಲಿ ತನ್ನ ಪಾಲು 70 ಲಕ್ಷವನ್ನು ಪಡೆದು ಉಳಿದ ಹಣವನ್ನು ಹೇಗೆ ಹಂಚಿಕೊಳ್ಳಬೇಕು, ಎಫ್‌ಐಆರ್‌ನಲ್ಲಿ ಎಷ್ಟು ಹಣ ತೋರಿಸಬೇಕು, ವೀಡಿಯೋ ರೆಕಾರ್ಡ್ ಹೇಗೆ ಮಾಡಬೇಕು ಎಂದೆಲ್ಲಾ ಎಸ್‌ಐ ಜಗದೀಶ್ ಮತ್ತವನ ದರೋಡೆ ಗ್ಯಾಂಗ್‌ಗೆ ದಾರಿ ತೋರಿಸಿದ್ದಾನೆಂದು ಹೇಳಲಾಗುತ್ತಿದೆ.

ಎರಡೂ ರಾಜ್ಯಗಳ ಗೃಹ ಮಂತ್ರಿಗಳ ಗಮನಕ್ಕೆ ಬಂದು ವಿಷಯ ದೊಡ್ಡದಾಗುತ್ತಿದ್ದಂತೆಯೇ ಗಾಬರಿಬಿದ್ದ ಆ ಭ್ರಷ್ಟ ಹಿರಿಯ ಪೊಲೀಸ್ ಅಧಿಕಾರಿ ತಾನು ಕಬಳಿಸಿದ್ದ 70 ಲಕ್ಷವನ್ನು ಕೇರಳದ ದೂರುದಾರನಿಗೆ (ಅಬ್ದುಲ್ ರಹೀಮ್‌ಗೆ) ಹಿಂದಿರುಗಿಸಿ ದೂರು ವಾಪಸ್ ಪಡೆಯುವಂತೆ ಮನವಿ ಮಾಡಿಕೊಂಡಿದ್ದಾರೆ ಎಂಬ ಮಾತುಗಳೂ ಕೇಳಿಬರುತ್ತಿವೆ. ಸರಿಯಾದ ತನಿಖೆಯಿಂದ ಮಾತ್ರ ಈ ಪ್ರಕರಣದಲ್ಲಿ ಭಾಗಿಯಾದ ಭ್ರಷ್ಟ ಹಿರಿಯ ಪೊಲೀಸ್ ಅಧಿಕಾರಿ ಯಾರು ಎಂಬುದು ಗೊತ್ತಾಗಲಿದೆ. ಆದರೆ ಪೊಲೀಸ್ ಮೂಲಗಳ ಪ್ರಕಾರ ಪ್ರಭಾವ, ಒಳ ಒಪ್ಪಂದಗಳಿಂದಾಗಿ ಭ್ರಷ್ಟ ಅಧಿಕಾರಿಯ ಹೆಸರು ಹೊರಬರುವುದು ಅನುಮಾನವಿದೆ.

ಜಗದೀಶನೇ ಸೂತ್ರಧಾರಿ

ಮೈಸೂರು ಜಿಲ್ಲೆ ಕೆ.ಆರ್.ನಗರ ತಾಲ್ಲೂಕಿನ ಮಾರಗೌಡನಹಳ್ಳಿಯ ಸಿ.ಡಿ.ಜಗದೀಶ್ 2005ರ ಬ್ಯಾಚ್‌ನಲ್ಲಿ ಸಬ್‌ಇನ್ಸ್‌ಪೆಕ್ಟರ್ ಆಗಿ ಆಯ್ಕೆಯಾದವನು. ಮೈಸೂರು, ಟಿ.ನರಸೀಪುರ, ಕೆ.ಎಂ.ದೊಡ್ಡಿ ಠಾಣೆಗಳಲ್ಲಿ ಕೆಲಸ ಮಾಡಿದ ಈತ ಭಯಂಕರ ರಣಹಸಿವಿನ ಮನುಷ್ಯನೆಂದೇ ಕುಖ್ಯಾತಿ.



ಕೆ.ಎಂ.ದೊಡ್ಡಿ (ಭಾರತೀನಗರ) ಠಾಣೆಯಲ್ಲಿದ್ದಾಗ ತನ್ನ ಜನವಿರೋಧಿ ಧೋರಣೆಗಳ ಕಾರಣಕ್ಕೆ ಸಾಕಷ್ಟು ಸುದ್ದಿಯಲ್ಲಿದ್ದ ಜಗದೀಶ ಮರಳು ಮಾಫಿಯಾದೊಂದಿಗೆ ಕೈಜೋಡಿಸಿ ಸಾಕಷ್ಟು ಕಮಾಯಿಗೆ ದಾರಿ ಮಾಡಿಕೊಂಡಿದ್ದ.

ಮದ್ದೂರು- ಚನ್ನಪಟ್ಟಣ ಗಡಿಯಲ್ಲಿರುವ ಇಗ್ಗಲೂರು ಡ್ಯಾಂನಿಂದ ಮರಳು ದರೋಡೆಗೆ 'ಪ್ರಸಾದ' ಸ್ವೀಕರಿಸಿ ಅನುಮತಿ ನೀಡಿದ್ದ ಎಂಬ ಪುಕಾರುಗಳೂ ಇವೆ. ಚಂದೂಪುರ, ಕೊಳಗೆರೆ, ಭಾರತೀನಗರ ಸೇರಿದಂತೆ ಹಲವು ಕಡೆ ಇಸ್ಪೀಟು ಕ್ಲಬ್‌ಗಳು ರಾಜಾರೋಷವಾಗಿ ತಲೆಯೆತ್ತಲು ಬಿಟ್ಟ ಎಸ್‌ಐ ಜಗದೀಶ್ ತಿಂಗಳಿಗೆ ಈ ಅಡ್ಡೆಗಳಿಂದ 5 ಸಾವಿರ ಮಾಮೂಲಿ ಫಿಕ್ಸ್ ಮಾಡಿಕೊಂಡಿದ್ದ. ಪೇದೆ ಸಿದ್ದರಾಜು ಮೂಲಕ ಕಲೆಕ್ಷನ್ ಮಾಡಿಸುತ್ತಿದ್ದ ಎಸ್‌ಐ ಜಗದೀಶ್‌ನ ಸಾರಥ್ಯದ ಕ್ಲಬ್‌ಗಳಿಗೆ ಸಿಪಿಐ ಗಂಗಾಧರ ಸ್ವಾಮಿ ಕಡಿವಾಣ ಹಾಕಬೇಕಾಗಿತ್ತು.

ಭಾರತೀನಗರದ ಚಾಂಷುಗರ್ ಸಕ್ಕರೆ ಕಾರ್ಖಾನೆ ಮುಂದೆ ಬಾಕಿ ಪಾವತಿಸುವಂತೆ ರೈತರು ಅನಿರ್ದಿಷ್ಟ ಧರಣಿ ನಡೆಸುತ್ತಿದ್ದ ಸಂದರ್ಭದಲ್ಲಿ ಕಾರ್ಖಾನೆ ಮಾಲೀಕರ ಎಂಜಲು ಕಾಸಿಗೆ ಕೈಯೊಡ್ಡಿ ಅವರ ಋಣ ತೀರಿಸುವ ಸಲುವಾಗಿ ಹಿಟ್ಲರ್‌ನಂತೆ ರೈತರ ಮೇಲೆ ಬಿದ್ದ ಎಸ್‌ಐ ಜಗದೀಶ್ ಎಲ್ಲರನ್ನೂ ಬಂಧಿಸಿ ಜೈಲಿಗೆ ಅಟ್ಟುವ ಬೆದರಿಕೆ ಹಾಕಿ, ರೈತರಿಂದ ಛೀಮಾರಿ ಹಾಕಿಸಿಕೊಂಡಿದ್ದ. ಕೊನೆಗೆ ಸಿಪಿಐ ಗಂಗಾಧರ ಸ್ವಾಮಿ ರೈತರ ಬಳಿ ಈತನ ಪರವಾಗಿ ಕ್ಷಮೆಯಾಚಿಸಬೇಕಾಗಿತ್ತು. ಈ ಬಗ್ಗೆ ವರದಿ ಮಾಡಿದ ಪತ್ರಕರ್ತ ಅಣ್ಣೂರು ಸತೀಶ್ ಮೇಲೂ ಸುಳ್ಳು ಮೊಕದ್ದಮೆ ಹೂಡಿದ್ದ. ಈತನ ರಂಕಲುಗಳ ಬಗ್ಗೆ ಎಷ್ಟು ಹೇಳಿದರೂ ಮುಗಿಯುವುದೇ ಇಲ್ಲ.

ಕೆ.ಎಂ.ದೊಡ್ಡಿ ಠಾಣೆಯಲ್ಲಿ ಆಮದನಿ ಕಮ್ಮಿ ಎನ್ನುವ ಕಾರಣಕ್ಕೆ ಭರ್ತಿ ತಾಂಬೂಲ ಕೊಟ್ಟು ಮೈಸೂರು ದಕ್ಷಿಣ ಗ್ರಾಮಾಂತರ ಠಾಣೆಗೆ ಬಂದ ಜಗದೀಶ್ ಅಲ್ಲಿಯೂ ಭರ್ತಿಯಾಗೇ ಮೇಯುತ್ತಿದ್ದ. ಸಾಕಷ್ಟು ಭ್ರಷ್ಟ ಎಂದೇ ಹೆಸರು ಮಾಡಿರುವ ಜಗದೀಶ್ ಗ್ರಾಮಾಂತರ ಠಾಣೆಯಲ್ಲಿದ್ದರೂ ಸಿಟಿ ಠಾಣೆಗಳಿಗಿಂತಲೂ ಭರ್ಜರಿ ಆದಾಯದ ಮೂಲಗಳನ್ನು ಸೃಷ್ಟಿಮಾಡಿಕೊಂಡಿದ್ದ. ಹೊರವಲಯದ ರೆಸಾರ್ಟ್‌ಗಳಲ್ಲಿ ನಡೆಯುವ ಮಾಂಸದ ವ್ಯಾಪಾರ, ಕೇರಳಕ್ಕೆ ಸಾಗಿಸುವ ಮರಳು ಮೊದಲಾದವುಗಳಿಂದ ಸಾಕಷ್ಟು ರೊಕ್ಕ ಬಾಚುತ್ತಿದ್ದ. ಇಷ್ಟೆಲ್ಲಾ ಇದ್ದರೂ ಹಣದ ದಾಹ ಎಸ್‌ಐ ಜಗದೀಶ್‌ನಿಗೆ ತೀರಿರಲಿಲ್ಲ. ಲಕ್ಷ ಲಕ್ಷ ಹೊಡೆಯುವ ಬದಲು ಕೋಟಿ ಕೋಟಿಯನ್ನೇ ಹೊಡೆದರೆ ಹೆಂಗೆ ಅಂತ ತೀರ್ಮಾನಿಸಿ 2.05 ಕೋಟಿ ರಾಬರಿ ನಡೆಸಿ ರಾಬರಿ ಕೇಸು ಹೆಟ್ಟಿಸಿಕೊಂಡು ನಾಪತ್ತೆಯಾಗಿದ್ದಾನೆ. ಕಳ್ಳರನ್ನು ಹುಡುಕಬೇಕಾದ ಮೈಸೂರು ಪೊಲೀಸರೇ ಎಸ್‌ಐ ಜಗದೀಶ್ ಸೇರಿದಂತೆ 6 ಮಂದಿ ಖದೀಮ ಪೊಲೀಸರನ್ನು ಹುಡುಕುವಂತಾಗಿದೆ.

ಮೈಸೂರು ಪೊಲೀಸ್ ವರಿಷ್ಠಾಧಿಕಾರಿಯಾಗಿರುವ ಅಭಿನವ್ ಖರೆಯವರು ತಮ್ಮ ಖಡಕ್ ಪೊಲೀಸಿಂಗ್ ಮೂಲಕ ಉತ್ತಮರೆಂಬ ಹೆಸರು ಗಳಿಸಿದವರು. ಇದೇ ಪ್ರಕರಣದಲ್ಲಿ ಇಲಾಖೆಯ ಪ್ರಭಾವಗಳನ್ನೂ ಲೆಕ್ಕಿಸದೆ ಈಗಾಗಲೆ ಇಬ್ಬರನ್ನು ಬಂಧಿಸಿ ಅರ್ಧಸತ್ಯ ಹೊರಗೆಡವಿರುವುದೇ ಅವರ ಸಾಮರ್ಥ್ಯಕ್ಕೆ ಸಾಕ್ಷಿ. ಪ್ರಮುಖ ಸೂತ್ರಧಾರ ಜಗದೀಶನ ಹೆಡೆಮುರಿ ಕಟ್ಟಿ ಜೈಲಿಗೆ ಕಳುಹಿಸುವ ದಿಟ್ಟತನವನ್ನೂ ಅವರು ಮೆರೆಯಬೇಕಿದೆ. ಅಲ್ಲದೆ ಈ ಪ್ರಕರಣದಲ್ಲಿ ಕೇಳಿಬರುತ್ತಿರುವ ಭ್ರಷ್ಟ ಹಿರಿಯ ಅಧಿಕಾರಿಯ ಹೆಸರನ್ನು ಯಾವ ಮರ್ಜಿಗೂ ಒಳಗಾಗದೆ ಬಯಲು ಮಾಡಿ, ಜನ ಕೆಲವು ಪೊಲೀಸರ ಮೇಲಾದರು ನಂಬಿಕೆ ಇಡಬಲ್ಲಂತ ವಾತಾವರಣ ಸೃಷ್ಟಿಸುವ ಜವಾಬ್ದಾರಿ ಅವರ ಮೇಲಿದೆ. ಇಲ್ಲವಾದಲ್ಲಿ ಈಗಾಗಲೇ ಪೊಲೀಸರ ಕಳ್ಳಾಟ ಕಂಡು ಹೌಹಾರಿರುವ ಜನ ಪೊಲೀಸರ ಸುಳ್ಳಾಟವನ್ನೂ ನೋಡಿ ಇಲಾಖೆ ಮೇಲೆ ಸಂಪೂರ್ಣ ನಂಬಿಕೆಯನ್ನೆ ಕಳೆದುಕೊಳ್ಳಬೇಕಾದೀತು.

● ಮಂಡ್ಯ ನಾಗೇಶ್

ಮಂಡ್ಯ 'ಲೋಕ' ಕದನ

ಕಾಂಗ್ರೆಸ್ ಬಣಬಣ! ಜೆಡಿಎಸ್ ಗೊಣಗೊಣ!! ಬಿಜೆಪಿ ಝುಣಝುಣ!!!



ಮಂಡ್ಯ ಲೋಕಸಭಾ ಕದನ ದಿನದಿಂದ ದಿನಕ್ಕೆ ಸಾಕಷ್ಟು ಆಚ್ಚರಿಯ ಅಂಗಣವಾಗುತ್ತಿದೆ. ನೆಲೆಯೇ ಇಲ್ಲದೆ ಪರದಾಡುತ್ತಿದ್ದ ಬಿಜೆಪಿ ಪಾಳಯದಲ್ಲಿ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಮಾಜಿ ಅಧ್ಯಕ್ಷ ಹಾಲಿ ಒಕ್ಕಲಿಗ ಸಂಘದ ಉಪಾಧ್ಯಕ್ಷ, ರೊಕ್ಕಸ್ಥ ಕುಳ ಬಿ.ಶಿವಲಿಂಗಯ್ಯನ ಹೆಸರು ಕಾಣಿಸಿಕೊಳ್ಳುತ್ತಿದ್ದಂತೆ ಮಂಡ್ಯ ಲೋಕಸಭಾ ಅಖಾಡ ಭರ್ಜರಿ ರಂಗೇರಿದೆ. ಕಾಂಗ್ರೆಸ್‌ನಿಂದ ಹಾಲಿ ಸಂಸದೆ ರಮ್ಯಾ ಕಣಕ್ಕಿಳಿದಿದ್ದರೆ ಜೆಡಿಎಸ್ ಪಕ್ಷ ಕೊನೆಗೂ ಮೀನಾಮೇಷ ಎಣಿಸಿ ಮಾಜಿ ಶಾಸಕ ಸಿ.ಎಸ್.ಪುಟ್ಟರಾಜುರವರನ್ನೇ ಕಣಕ್ಕಿಳಿಸಲು ಸಜ್ಜಾಗಿದೆ. ರಮ್ಯಾ-ಸಿ.ಎಸ್.ಪುಟ್ಟರಾಜು ನಡುವೆಯೇ ನೇರ ಹಣಾಹಣಿ ಎಂದು ಲೆಕ್ಕಾಚಾರ ಹಾಕಿದ್ದ ಮತದಾರರು ದುಡ್ಡಿನ ಕುಳ ಬಿ.ಶಿವಲಿಂಗಯ್ಯನಿಗೆ ಬಿಜೆಪಿ ಗಾಳ ಹಾಕಿರೋದನ್ನು 'ಫ್ರೈಜ್ ಕ್ಯಾಚ್' ಅಂತಲೇ ಬಣ್ಣಿಸುತ್ತಿದ್ದಾರೆ.

ಎಡಬಿಡಂಗಿ ರಮ್ಯಾ

ಕಳೆದ ಲೋಕಸಭಾ ಉಪಚುನಾವಣೆಯಲ್ಲಿ ಗೆದ್ದು ಸಂಸದೆಯಾದ ಗ್ಲಾಮರ್ ಗೊಂಬೆ ರಮ್ಯಾರ ರಾಜಕೀಯ ನಸೀಬೆ ನೆಟ್ಟಗಿದ್ದಂತಿಲ್ಲ. ಕಳೆದ ಚುನಾವಣೆಯಲ್ಲಿ ಎಸ್.ಎಂ.ಕೃಷ್ಣ ಅಂಬರೀಶ್ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯನವರ ರಾಜಕೀಯ ತಂತ್ರಗಾರಿಕೆಯಿಂದ ಜೆಡಿಎಸ್ ಭದ್ರಕೋಟೆಯಲ್ಲೇ ಸಿ.ಎಸ್.ಪುಟ್ಟರಾಜುರನ್ನು ಸೋಲಿಸಿದ ರಮ್ಯಾ ಆಮೇಲೆ ಮಾಡಿಕೊಂಡಿದ್ದೆಲ್ಲ ಬರೀ ಯಡವಟ್ಟುಗಳು. ಮಂಡ್ಯದಲ್ಲಿರುವ ಅಂಬಿ-ಕೃಷ್ಣ ಬಣರಾಜಕೀಯವನ್ನು ನಾಜೂಕಾಗಿ ನಿಭಾಯಿಸುವುದು ಗೊತ್ತಿಲ್ಲದ ರಮ್ಯಾ ಅಂಬರೀಶ್ ಬೆಂಬಲಿಗರ ಕೆಂಗಣ್ಣಿಗೆ ಗುರಿಯಾಗಿ ಈ ಸಲದ ಗೆಲುವನ್ನು ಕಷ್ಟಮಾಡಿಟ್ಟುಕೊಂಡಿದ್ದಾರೆ. ರಮ್ಯಾರನ್ನು ಈ ಬಾರಿ ಹೇಗಾದರೂ ಮಾಡಿ ಸೋಲಿಸಲೇಬೇಕು ಇಲ್ಲದಿದ್ದರೆ ಕೃಷ್ಣ ಬಣದ ಕಾಟ ಸಹಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂಬ ನಿರ್ಧಾರಕ್ಕೆ ಬಂದಿರುವ ಅಂಬಿ ಬೆಂಬಲಿಗರು ಈಗಾಗಲೇ ಹಲವಾರು ಬಾರಿ ಸಭೆಗಳನ್ನು ನಡೆಸಿ ಮಂಡ್ಯದಿಂದ ರಮ್ಯಾ ಕಣಕ್ಕಿಳಿಯುವುದನ್ನು ವಿರೋಧಿಸಿ ಆಗಿದೆ. ರಾಜ್ಯ ನಾಯಕರು, ಹೈಕಮಾಂಡ್‌ವರೆಗೆ ತಮ್ಮ ಆಕ್ರೋಶವನ್ನು ಹೊರಹಾಕಿದರೂ ಕ್ಯಾರೆ ಎನ್ನದೆ ಕಾಂಗ್ರೆಸ್ ಹೈಕಮಾಂಡ್ ರಮ್ಯಾರನ್ನೇ ಅಭ್ಯರ್ಥಿಯಾಗಿಸಿರೋದು ಅಂಬಿ ಬೆಂಬಲಿಗರನ್ನು ಮತ್ತಷ್ಟು ಕೆರಳಿಸಿದೆ.

ಈ ನಡುವೆ ತನ್ನ ಸಿನಿಮಾರಂಗದ ಎಡೆಬಿಡಂಗಿತನವನ್ನು ರಾಜಕೀಯದಲ್ಲೂ ಮುಂದುವರೆಸಿರುವ ರಮ್ಯಾ ಸಲ್ಲದ ಹೇಳಿಕೆಗಳಿಂದ ಕಿರಿಕ್ ಮಾಡಿಕೊಳ್ಳುತ್ತಿದ್ದಾರೆ. ಇತ್ತೀಚೆಗಷ್ಟೇ ಅಂಬಿ ಅನಾರೋಗ್ಯದಿಂದ ವಿಕ್ರಂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ರಮ್ಯಾ ಮಾಧ್ಯಮಗಳ ಎದುರು ಅಂಬಿ ಅಂಕಲ್ ಶ್ವಾಸಕೋಶದಲ್ಲಿ 12 ಲೀಟರ್ ನೀರಿದ್ದು ಅದನ್ನು ಹೊರಗೆ ತೆಗೆಯಬೇಕಿದೆ ಎಂಬ ಹೇಳಿಕೆ ನೀಡಿ ವಿವಾದಕ್ಕೀಡಾಗಿದ್ದರು. ವಿಕ್ರಂ ಆಸ್ಪತ್ರೆಯ ವೈದ್ಯರೇ ಶ್ವಾಸಕೋಶದಲ್ಲಿ ಅಷ್ಟೊಂದು ನೀರಿರಲು ಸಾಧ್ಯವೇ ಇಲ್ಲ, ಪಾಪ, ರಮ್ಯಾ ಪುಟ್ಟಿಗೆ ವೈದ್ಯಕೀಯ ಭಾಷೆ ತಿಳಿಯುವುದಿಲ್ಲ ಎಂದು ಸಮಜಾಯಿಷಿ ನೀಡಿದರೂ ಅವಕಾಶಕ್ಕಾಗಿ ಕಾದಿದ್ದ ಅಂಬಿ ಭಕ್ತರು 'ಅಂಬರೀಶಣ್ಣನ ಮೇಲೆ ರಮ್ಯಾ ಅಪಪ್ರಚಾರ ಮಾಡುತ್ತಿದ್ದಾರೆ' ಎಂದು ಒಂದು ಸುತ್ತು ಉರಿದು ಬಿದ್ದಿದ್ದರು. ಈ ಬಿಸಿ ತಣ್ಣಗಾಗುವ ಮುನ್ನವೇ ಕೆ.ಆರ್.ಪೇಟೆ ಸಭೆಯೊಂದರಲ್ಲಿ 'ಅಂಬರೀಶರನ್ನು ರಾಜಕೀಯಕ್ಕೆ ನನ್ನಪ್ಪ ಆರ್.ಟಿ.ನಾರಾಯಣ್‌ರವರೇ ಕರೆತಂದಿದ್ದು' ಎಂಬ ಹೇಳಿಕೆ ಬಿಸಾಡಿದ್ದ ರಮ್ಯಾ ಆಗಲೂ ಅಂಬಿ ಬೆಂಬಲಿಗರಿಂದ ಛೀಮಾರಿ ಹಾಕಿಸಿಕೊಂಡಿದ್ದರು. ಇದೆಲ್ಲದರ ಪರಿಣಾಮವಾಗಿ ವಾರದ ಹಿಂದೆ ಶ್ರೀರಂಗಪಟ್ಟಣದ ಮೊಗರಹಳ್ಳಿಯಲ್ಲಿ ಸಭೆ ಸೇರಿದ ಅಂಬಿ ಭಂಟರಾದ ಎಲ್.ಆರ್.ಶಿವರಾಮೇಗೌಡ, ಅಮರಾವತಿ ಚಂದ್ರಶೇಖರ್, ಸಚ್ಚಿದಾನಂದ, ಲಿಂಗರಾಜು, ಬಿ.ಸಿ.ಶಿವಾನಂದ, ಬೇಲೂರು ಸೋಮಶೇಖರ್, ಜಿ.ಸಿ.ಆನಂದ್ ಮೊದಲಾದವರು 'ರಮ್ಯಾ ಇನ್ನಾದರೂ ತನ್ನ ವರ್ತನೆಯನ್ನು ಬದಲಿಸಿಕೊಳ್ಳಬೇಕು. ಅಂಬರೀಶ್ ವಿರುದ್ಧ ಮಾತನಾಡಿರುವುದಕ್ಕೆ ಕ್ಷಮೆ ಕೇಳಬೇಕು. ಇಲ್ಲದಿದ್ದರೆ ತಕ್ಕ ಪರಿಣಾಮವನ್ನು ಎದುರಿಸಬೇಕಾಗುತ್ತದೆ' ಎಂದೆಲ್ಲ ಎಚ್ಚರಿಕೆ ನೀಡಿದ್ದಾರೆ.

ಅಂಬಿ ಬೆಂಬಲಿಗರ ಮಾತಿಗೆ ಕ್ಯಾರೇ ಎನ್ನದ ರಮ್ಯಾ "ಅಂಬಿ ಬೆಂಬಲಿಗರು ಏನಾದರೂ ಹೇಳುವುದಿದ್ದರೆ ಹೈಕಮಾಂಡ್ ನಾಯಕರಿಗೆ ಹೇಳಲಿ. ರಾಹುಲ್ ಗಾಂಧಿ, ಎಸ್.ಎಂ.ಕೃಷ್ಣ, ಡಿ.ಕೆ.ಶಿವಕುಮಾರ್ ಆಶೀರ್ವಾದವಿರುವ ನನಗೆ ಅಂಬಿ ಬೆಂಬಲಿಗರು ಏನೂ ಮಾಡಲು ಸಾಧ್ಯವಿಲ್ಲ, ನಾನು ಕ್ಷಮೆ ಕೇಳುವ ಪ್ರಶ್ನೆಯೇ ಇಲ್ಲ" ಅಂತ ತನ್ನನ್ನು ಸಮರ್ಥಿಸಿಕೊಂಡಿದ್ದನ್ನು ಕಂಡ ಅಂಬಿ ಬೆಂಬಲಿಗರು ಉರಿದುರಿದು ಬೀಳುತ್ತಿದ್ದಾರೆ.

ಕಾಂಗ್ರೆಸ್ ಬಣಬಣ

ಮಂಡ್ಯ ಕಾಂಗ್ರೆಸ್ ಎಸ್.ಎಂ.ಕೃಷ್ಣ ಹಾಗೂ ಅಂಬಿ ಬಣಗಳಾಗಿ ಇಬ್ಭಾಗವಾಗಿ ಕೂತಿದೆ. ಈ ಬಣ ರಾಜಕಾರಣದ ಆಂತರಿಕ ಕಚ್ಚಾಟಗಳು ದಿನಕ್ಕೊಂದರಂತೆ ಬೀದಿಗೆ ಬೀಳುತ್ತಲೇ ಇವೆ. ಜಿಲ್ಲಾಧ್ಯಕ್ಷ ಆತ್ಮಾನಂದ ಕರೆಯುವ ಸಭೆಗೆ ಅಂಬಿ ಪಾಳಯ ಗೈರಾದರೆ ಅಂಬಿ ಬಣ ನಡೆಸುವ ಸಭೆಗೆ ಕೃಷ್ಣ ಬಣದವರ್ಯಾರೂ ಬರುವುದೇ ಇಲ್ಲ. ಅತ್ತ ಅಂಬರೀಶ್ ಬಣದ ಇಂಡುವಾಳು ಸಚ್ಚಿದಾನಂದ ರಮ್ಯಾ ಕ್ಷಮೆ ಕೇಳಬೇಕೆಂದು ಹೇಳಿದರೆ, ಇತ್ತ ಎಸ್.ಎಂ.ಕೃಷ್ಣ ಆಪ್ತ ರವೀಂದ್ರ ಶ್ರೀಕಂಠಯ್ಯನ ಬೆಂಬಲಿಗರು ಸಚ್ಚಿದಾನಂದ ನಕಲಿ ಕೆಪಿಸಿಸಿ ಸದಸ್ಯ ಎಂದು ಹೀಯಾಳಿಸುತ್ತಾರೆ. ದಿನನಿತ್ಯ ಅಂಬಿ ಹಾಗು ಎಸ್.ಎಂ.ಕೃಷ್ಣ ಬಣಗಳ ಕಾದಾಟ ಜನರಿಗೆ ಮನರಂಜನೆ ಒದಗಿಸುತ್ತಾ ಪಕ್ಷದ ಮಾನವನ್ನು ಗಲ್ಲಿಗಲ್ಲಿಗಳಲ್ಲಿ ಹರಾಜು ಹಾಕುತ್ತಿದೆ.

ಏತನ್ಮಧ್ಯೆ ಅಂಬಿ ಅನಾರೋಗ್ಯ ಅಂಬಿ ಬೆಂಬಲಿಗರಿಗೆ ದೊಡ್ಡ ಹೊಡೆತವನ್ನೇ ನೀಡಿದೆ. ಸಿಂಗಾಪುರದ ಮೌಂಟ್ ಎಲಿಜಬೆತ್ ಆಸ್ಪತ್ರೆಯಲ್ಲಿರುವ ಅಂಬಿ ಚೇತರಿಸಿಕೊಂಡರೂ ವಿಶ್ರಾಂತಿ ಅಗತ್ಯವಿರುವುದರಿಂದ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ನೇರವಾಗಿ ಭಾಗಿಯಾಗೋದು ಸಾಧ್ಯವಿಲ್ಲ. ಅಂಬಿ ಇಲ್ಲದ ಈ ಸಂದರ್ಭದಲ್ಲಿ ಅವರ ಬೆಂಬಲಿಗರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದು ರಮ್ಯಾಗೂ ಕಷ್ಟ. ಇಂತಹ ಕಠಿಣ ಸಂದರ್ಭದಲ್ಲಿ ಹೊಂದಾಣಿಕೆ ಮಾಡಿಕೊಳ್ಳುವ ಜಾಯಮಾನ ಇಲ್ಲದ ರಮ್ಯಾ ಹೇಗೆ ಚುನಾವಣೆ ಎದುರಿಸುವರೋ ಎಂಬುದನ್ನು ಕಾದು ನೋಡಬೇಕಿದೆ. ಯಾಕೆಂದರೆ ಉಪ ಚುನಾವಣೆಗೆ ಬಂದಷ್ಟು ನಾಯಕರು, ಸಿಕ್ಕಷ್ಟು ಬೆಂಬಲ ಈ ಬಾರಿ ಸಿಗುವುದು ಕಷ್ಟವಿದೆ.

ಜೆಡಿಎಸ್‌ನಲ್ಲಿ ಗೊಣಗೊಣ

ಕಾಂಗ್ರೆಸ್ ಗುಂಪುಗಾರಿಕೆ ಬೀದಿಗೆ ಬಿದ್ದು ಬಹಿರಂಗವಾದರೆ, ಜೆಡಿಎಸ್‌ನಲ್ಲಿ ಭಿನ್ನಮತ ಅಂತರಂಗದಲ್ಲೇ ಗೊಣಗಾಡುತ್ತಿದೆ. ದೇವೇಗೌಡ ಹಾಗೂ ಕುಮಾರಸ್ವಾಮಿ ಮುಂದೆ ಉಸಿರೆತ್ತದ ಜೆಡಿಎಸ್ ನಾಯಕರು ಒಳಗೊಳಗೆ ಕೈಕೊಡುವುದರಲ್ಲಿ ನಿಸ್ಸೀಮರು. ಪುಟ್ರಾಜಣ್ಣಾ ಅಂತ ಮೇಲೆ ಕರೆಯುತ್ತಾ ಒಳಗೆ ಸೈಲೆಂಟಾಗಿಯೇ ಸೋಲಿಸಲು ಸ್ಕೆಚ್ ಹಾಕುವ ಗಳಿಗೆಸಿದ್ಧ ನಾಯಕರು ಜೆಡಿಎಸ್‌ನಲ್ಲಿದ್ದಾರೆ. ಕಳೆದ ಉಪಚುನಾವಣೆಯಲ್ಲಿ ಈ ಗಳಿಗೆಸಿದ್ಧರೇ ಪುಟ್ಟರಾಜು ಸೋಲಿಗೆ ಕಾರಣ ಎಂಬುದು ದೊಡ್ಡಗೌಡರಾದಿಯಾಗಿ ಎಲ್ಲರಿಗೂ ಗೊತ್ತಿದ್ದರೂ ಯಾರೂ ಬಹಿರಂಗವಾಗಿ ಬಿಟ್ಟುಕೊಡುತ್ತಿಲ್ಲ ಅಷ್ಟೆ.

ಮಂಡ್ಯ ಕ್ಷೇತ್ರದ ಅಭ್ಯರ್ಥಿಯನ್ನು ಸಂಕ್ರಾಂತಿ ವೇಳೆಗೆ ಪ್ರಕಟಿಸುವುದಾಗಿ ದೇವೇಗೌಡರು ಹೇಳಿದ್ದರು. ಸಂಕ್ರಾಂತಿ ಮುಗಿದು ಶಿವರಾತ್ರಿ ಕಳೆದರೂ ಅಭ್ಯರ್ಥಿಯನ್ನು ಘೋಷಿಸಲು ದೊಡ್ಡಗೌಡರಿಗೆ ಸಾಧ್ಯವಾಗಲಿಲ್ಲ. ಕಾರಣ ಬೀಗರಾದ ಮದ್ದೂರು ಶಾಸಕ ಡಿ.ಸಿ.ತಮ್ಮಣ್ಣನ ಒತ್ತಡ. ಮಂಡ್ಯ ಲೋಕಸಭಾ ಕ್ಷೇತ್ರದ ಜೆಡಿಎಸ್ ಟಿಕೆಟ್ ಅನ್ನು ತನ್ನ ಮಗ ಸಂತೋಷ್‌ಗೆ ಕೊಡಿಸಬೇಕೆಂಬುದು ತಮ್ಮಣ್ಣನ ಮಹದಾಸೆಯಾಗಿತ್ತು. ಎಲ್ಲೋ ಒಂದು ಕಡೆ ದೇವೇಗೌಡರಿಗೂ ಬೀಗರ ಋಣ ತೀರಿಸಲು ಈ ಬಾರಿ ಸಂತೋಷ್‌ಗೆ ಟಿಕೆಟ್ ಕೊಡಬೇಕೆಂಬ ಆಸೆಯೂ ಇತ್ತು. ಹಾಗಾಗಿಯೇ ಇದುವರೆಗೂ ಕ್ಷೇತ್ರದ ಅಭ್ಯರ್ಥಿ ಯಾರೆಂದು ಪ್ರಕಟಿಸಿರಲಿಲ್ಲ. ಆದರೆ ಇತ್ತೀಚೆಗೆ ನಡೆದ ಜೆಡಿಎಸ್ ಸಭೆಯಲ್ಲಿ 'ಡಿ.ಟಿ.ಸಂತೋಷ್ ಯಾರೆಂಬುದೇ ಕ್ಷೇತ್ರಕ್ಕೆ ತಿಳಿದಿಲ್ಲ. ಪುಟ್ಟರಾಜು ಕ್ಷೇತ್ರಕ್ಕೆ ಪರಿಚಿತ ವ್ಯಕ್ತಿ. ಅದೂ ಅಲ್ಲದೆ 2 ಬಾರಿ ಸೋತಿರುವ ಪುಟ್ಟರಾಜು ಪರ ಜನರಲ್ಲಿ ಅನುಕಂಪವಿದೆ' ಎಂದು ಜೆಡಿಎಸ್ ನಾಯಕರೇ ಹೇಳಿದ್ದರಿಂದ ಪುಟ್ಟರಾಜು ಹೆಸರು ಗ್ಯಾರಂಟಿಯಾಗಿದೆ.

ಅಂಬರೀಶ್‌ರೊಂದಿಗೆ ಉತ್ತಮ ಬಾಂಧವ್ಯ ಹೊಂದಿರುವ ಡಿ.ಸಿ. ತಮ್ಮಣ್ಣ ಕಳೆದ ಉಪಚುನಾವಣೆಯಲ್ಲಿ ಪುಟ್ಟರಾಜುಗೆ ಕೈಕೊಟ್ಟಿದ್ದರು. ಈ ಬಾರಿಯೂ ತನ್ನ ಪುತ್ರ ಸಂತೋಷನಿಗೆ ಟಿಕೆಟ್ ಕೈತಪ್ಪಿರುವುದರಿಂದ ಪುಟ್ಟರಾಜು ಪರ ಕೆಲಸ ಮಾಡುವುದು ಸ್ವಲ್ಪ ಡೌಟೆ! ಶಾಸಕರಾದ ಚಲುವರಾಯಸ್ವಾಮಿ, ರಮೇಶ್ ಬಾಬು ಬಂಡಿಸಿದ್ದೇಗೌಡ, ನಾರಾಯಣಗೌಡರಿದ್ದರೂ ಕಳೆದ ಉಪಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಲೀಡ್ ಸಿಗಲು ಕೈ ನಾಯಕರ ಒಗ್ಗಟ್ಟು ಕಾರಣವಾಗಿತ್ತು. ಈ ಬಾರಿ ಕಾಂಗ್ರೆಸ್‌ಗೆ ಅಂತ ಅನುಕೂಲ ವಾತಾವರಣ ಇಲ್ಲವೆನ್ನುವುದಂತೂ ಖಾತ್ರಿ. ಇದನ್ನು ಅರಿತು ಜೆಡಿಎಸ್ ನಾಯಕರೆಲ್ಲ ಒಗ್ಗೂಡಿ ಚುನಾವಣೆ ಎದುರಿಸಿದರೆ ಪುಟ್ಟರಾಜು ಗೆಲ್ಲುವ ಛಾನ್ಸ್ ಹೆಚ್ಚಿದೆ. ಆದರೆ ಮುಸುಕಿನ ಗುದ್ದಾಟ ಚುನಾವಣೆ ವೇಳೆಗೆ ಯಾವ ರೂಪ ಪಡೆಯಲಿದೆ ಎಂಬುದರ ಮೇಲೆ ಜೆಡಿಎಸ್ ಸೋಲು, ಗೆಲುವು ನಿರ್ಧಾರವಾಗಲಿದೆ.

ಬಿಜೆಪಿಯಲ್ಲಿ ಝುಣಝುಣ

ಮಂಡ್ಯ ಜಿಲ್ಲೆಯಲ್ಲಿ ನೆಲೆ-ಬೆಲೆ ಎರಡೂ ಇಲ್ಲದ ಬಿಜೆಪಿ ಅವಕಾಶವಾದಿ ರಾಜಕಾರಣಕ್ಕೆ ಮುಂದಾಗಿದೆ. ಬಲಾಢ್ಯರ್ಯಾರೂ ಸಿಗದಿದ್ದರೆ ಜಿಲ್ಲಾಧ್ಯಕ್ಷ ವೃದ್ಧ ಹೆಚ್. ಹೊನ್ನಪ್ಪರನ್ನು ಕಣಕ್ಕಿಳಿಸಬೇಕೆಂದಿದ್ದ ಬಿಜೆಪಿ ಈಗ ದುಡ್ಡಿನಧಣಿ ಒಕ್ಕಲಿಗರ ಸಂಘದ ನಿರ್ದೇಶಕ ಬಿ.ಶಿವಲಿಂಗಯ್ಯನನ್ನು ಕಣಕ್ಕಿಳಿಸಲು ಮುಂದಾಗಿದೆ.

ಪಕ್ಕಾ ಅವಕಾಶವಾದಿಯಾದ ಬಿ.ಶಿವಲಿಂಗಯ್ಯನ ಹೆಸರು ಈಗಾಗಲೇ ಅಧಿಕೃತವಾಗಿ ಘೋಷಣೆಯಾಗಿದೆ. ಮಂಡ್ಯದ ನಾಜೂಕಮ್ಮ ಎಂದೇ ಹೆಸರಾಗಿರುವ ಮೀರಾಶಿವಲಿಂಗಯ್ಯ ಕಸಾಪ ಜಿಲ್ಲಾಧ್ಯಕ್ಷೆಯಾಗಿ ಆಯ್ಕೆಯಾದ ಸಂದರ್ಭದಲ್ಲಿ ನಮ್ಮ ಕುಟುಂಬಕ್ಕೆ ರಾಜಕೀಯ ಇಷ್ಟವಿಲ್ಲ ಎಂದು ಹೇಳಿದ್ದರು. ಹೀಗೆಂದು ಹೇಳಿ ವರ್ಷ ಕಳೆಯುವುದರೊಳಗೇ ಒಕ್ಕಲಿಗರ ಸಂಘದ ಚುನಾವಣೆಯಲ್ಲಿ ಮೀರಾ ಮೇಡಂ ತನ್ನ ಪತಿ ಶಿವಲಿಂಗಯ್ಯನವರನ್ನು ನಿಲ್ಲಿಸಿ ಹಣ-ಹೆಂಡದ ಹೊಳೆ ಹರಿಸಿ ನಿರ್ದೇಶಕರಾಗಿ ಆಯ್ಕೆಯಾಗುವಂತೆ ನೋಡಿಕೊಂಡಿದ್ದರು. ಒಕ್ಕಲಿಗ ಚುನಾವಣೆಯಲ್ಲಿ ಗೆದ್ದ ಸಂದರ್ಭದಲ್ಲಿ ಮಾತನಾಡಿದ್ದ ಶಿವಲಿಂಗಯ್ಯ ಅವಕಾಶ ಸಿಕ್ಕರೆ ಸಕ್ರಿಯ ರಾಜಕಾರಣಕ್ಕೂ ಧುಮುಕುವುದಾಗಿ ಘೋಷಿಸಿದ್ದರು. 'ನಾನು ಯಾವುದರಲ್ಲಿ ಕಡಿಮೆ, ಅನುಭವ-ಹಣ ಇಲ್ಲವೇ' ಎಂದು ಜನರನ್ನೇ ಪ್ರಶ್ನಿಸಿ ದಂಗು ಬಡಿಸಿದ್ದ ಶಿವಲಿಂಗಯ್ಯ ಅಂತೂ ಕೋಮುವಾದಿ ಬಿಜೆಪಿ ಅಂಗಳದಲ್ಲಿ ಥಕ..ಥೈ ಎನ್ನಲು ಸಜ್ಜಾಗಿದ್ದಾನೆ. ತತ್ವ, ಸಿದ್ಧಾಂತ, ಬದ್ಧತೆ ಒಂದೂ ಇಲ್ಲದ ಬಿ.ಶಿವಲಿಂಗಯ್ಯ ದುಡ್ಡಿನ ಬಲದಿಂದಲೇ ಗೆದ್ದು ಎಂಪಿಯಾಗುವ ಭ್ರಮೆಯಲ್ಲಿದ್ದಾನೆ.


ಶಿವಲಿಂಗಯ್ಯನ ಹೆಸರು ನಿಕ್ಕಿಯಾಗುವುದಕ್ಕೂ ಮುನ್ನ ಇತ್ತೀಚೆಗಷ್ಟೆ ಬಿಜೆಪಿ ಸೇರಿದ ಮಾಜಿ ಸಂಸದೆ ತೇಜಸ್ವಿನಿಗೌಡ ಸ್ಪರ್ಧಿಸುತ್ತಾರೆಂಬ ಪುಕಾರೂ ಇತ್ತು. ಮೋದಿ ಅಲೆಯಲ್ಲಿ ನಾನು ಗೆದ್ದು ಬರುತ್ತೇನೆಂದು ಬೂಸಿ ಬಿಡುತ್ತಿದ್ದ ಕಾಡೇನಹಳ್ಳಿ ನಾಗಣ್ಣಗೌಡನೂ ಟಿಕೆಟ್‌ಗಾಗಿ ಬಿಜೆಪಿ ನಾಯಕರ ಸುತ್ತ ಗಿರಕಿ ಹೊಡೆದಿದ್ದ. ಧ್ವನಿ ಗ್ರಾಮೀಣಾಭಿವೃದ್ಧಿ ಎಂಬ ಎನ್‌ಜಿಓ ಮಾಡಿಕೊಂಡು ಸಾಕಷ್ಟು ಗೆಬರಿ ನುಂಗಣ್ಣಗೌಡನಾಗಿರುವ ಈತ ಜಿ.ಪಂ. ಚುನಾವಣೆಯಲ್ಲೇ ಮಕಾಡೆ ಮಲಗಿದ್ದ ಆಸಾಮಿ. ಮೋದಿ ಜೊತೆಗೆ ತನ್ನ ಫೋಟೋ ಇರುವ ಪೋಸ್ಟರ್‌ನ್ನು ಕ್ಷೇತ್ರದಾದ್ಯಂತ ಅಂಟಿಸಿ, ಅದೇ ಹವಾದಲ್ಲಿ ಬೆಚ್ಚಗಾಗುವ ಕನಸು ಕಂಡಿದ್ದ ನಾಗಣ್ಣಗೌಡನನ್ನು ಟಿಕೆಟ್ ಇಲ್ಲದೆ ಕಮಂಗಿಯಂತಾಗಿರುವುದನ್ನು ಕಂಡು ಕ್ಷೇತ್ರದ ಮತದಾರರು ಬಿದ್ದು ಬಿದ್ದು ನಗುತ್ತಿದ್ದಾರೆ.

ಅಂತೂಇಂತೂ ಮಂಡ್ಯ ಲೋಕಸಭಾ ಕ್ಷೇತ್ರ ಈ ಬಾರಿ ಸಾಕಷ್ಟು ಬಿರುಸು ಪಡೆಯಲಿರುವುದಂತು ನೂರಕ್ಕೆ ನೂರರಷ್ಟು ಸತ್ಯ. ಪ್ರತಿಯೊಂದು ಪಕ್ಷಕ್ಕೂ ತಮ್ಮದೇ ಆದ ಆಂತರಿಕ ಲೆಕ್ಕಾಚಾರಗಳು ಇರುವಂತೆಯೇ ಆಂತರಿಕ ಕಚ್ಚಾಟಗಳೂ ಇವೆ. ಮತದಾನದ ವೇಳೆಗೆ ಯಾವ ಭಿನ್ನಮತ ಹೇಗೆ ರೂಪಾಂತರವಾಗುತ್ತೆ ಎನ್ನುವುದರ ಮೇಲೆ ಸೋಲು ಗೆಲುವು ನಿಂತಿದೆ. ಈ ಮಧ್ಯೆ ಶಿವಲಿಂಗಯ್ಯ ಎನ್ನುವ ಮಂಡ್ಯದ 'ಗಂಟು' ಅದ್ಯಾವ ಮಟ್ಟಕ್ಕೆ ಜೇಬು ತೂತು ಮಾಡಿಕೊಳ್ಳುತ್ತೋ ಎಂಬ ಲೆಕ್ಕಾಚಾರವೂ ಮತದಾರರ ಮನಸ್ಸು ಕೊರೆಯುತ್ತಿದೆ.

● ಮಂಡ್ಯ ನಾಗೇಶ್

ಮೋದಿ ಅಲೆಗೆ ಕೇಜ್ರಿವಾಲ್ ಕಂಟಕ!

ಕರ್ನಾಟಕ ಎತ್ತ ಸಾಗಿದೆ?



ದೇವೇಗೌಡರಿಗೆ ಮತ್ತೆ ಪ್ರಧಾನಿಯಾದಂತೆ ಕನಸು. ಮುಖ್ಯಮಂತ್ರಿ ಸಿದ್ದು ತಲೆಯಲ್ಲಿ ಪರಮೇಶ್ವರ್ ಭೂತದ ಹುಳುಕು. ಬಿ.ಕೆ. ಹರಿಪ್ರಸಾದ್‌ಗೆ ಇಳಿಯಲಾ ಉಳಿಯಲಾ ಎಂಬ ಅರೆ ಮನಸ್ಸು. ಬಿಜೆಪಿ ಪುಂಗವರಿಗೆಲ್ಲ ಕೇಜ್ರಿವಾಲ್ ಹೆಸರೇ ಅಲರ್ಜಿ. ಅನಂತ್ ಎಂಬ ಚಿಡ್ಡಿ ಸಾಮ್ರಾಜ್ಯದ ಸೇನಾನಿಗೆ ಹಡಗು ಮುಳುಗಿದ ಅಪಶಕುನವಾದರೆ ಖರ್ಗೆ, ಧರ್ಮಸಿಂಗ್, ಕುಮಾರಸ್ವಾಮಿ, ಷರೀಫ್, ಸದಾನಂದಗೌಡ, ಪೂಜಾರಿ, ಆಸ್ಕರ್, ಮೊಯ್ಲಿ ಇತ್ಯಾದಿಗಳಿಗೆಲ್ಲ ಗೆದ್ದರೂ ಬರಕತ್ತಾಗದ ಸೋತು ಸತ್ತಂತಾಗದ ಹೊಟ್ಟೆ ಸಂಕಟ!

ಏಪ್ರಿಲ್ ಚುನಾವಣೆಯೇನೋ ಘೋಷಣೆಯಾಗಿದೆ. ಕನಿಷ್ಠ ಹದಿನೈದನ್ನಾದರೂ ಹೊಡೆದೇ ತೀರುತ್ತೇನೆಂಬ ಅನಿವಾರ್ಯ ಕರ್ಮಕ್ಕೆ ಮುಖ್ಯಮಂತ್ರಿ ಸಿದ್ದು ತಲೆಕೊಟ್ಟಿದ್ದೂ ನಿಜ. ಹಾಗಂತ ದಾರಿ ಸಲೀಸಾಗಿದೆಯಾ? ಕಾಂಗ್ರೆಸ್ಸಿನ ಒಬ್ಬೊಬ್ಬರದೂ ಒಂದೊಂದು ದಾರಿ. ತುಮಕೂರಿನಲ್ಲಿ ಯಾರೇ ಕಾಂಗ್ರೆಸ್ಸಿನಿಂದ ನಿಂತರು ಕಾಲೆಳೆಯಲು ಪರಮೇಶ್ವರ್ ಪಟಾಲಂ ಕತ್ತಿ ಮಸೆಯುತ್ತಿದೆ. ಅಷ್ಟೇ ಅಲ್ಲ ಪಕ್ಕದ ಚಿತ್ರದುರ್ಗ, ದಾವಣಗೆರೆ, ರಾಯಚೂರುಗಳಲ್ಲೂ ಕಾಂಗ್ರೆಸ್ ಅಭ್ಯರ್ಥಿಯ ಪಿಕ್ ಪಾಕೆಟ್ಟಿಗೆ ಕೈಯಿಟ್ಟ ಪರಮೇಶಿ ಕೂಟಕ್ಕೆ ಕ್ರುದ್ಧ ವಯೋವೃದ್ಧ ಕೃಷ್ಣರ ಕರಿ ನೆರಳಿದೆ. ಕನಿಷ್ಠ ಹದಿನೈದಾದರೂ ಗಿಟ್ಟದೆ ಹೋದರೆ ಮುಖ್ಯಮಂತ್ರಿ ಸಿದ್ದು ತಲೆ ದಂಡ ಕಟ್ಟಲೇಬೇಕಾ?

ಇದೆಲ್ಲವನ್ನೂ ಬದಿಗಿಟ್ಟು ಕರ್ನಾಟಕದ ಒಟ್ಟಾರೆ ಪರಿಸ್ಥಿತಿಯನ್ನೇ ಲೆಕ್ಕ ಹಾಕುವುದಾದರೆ ಇಲ್ಲಿಗೆ ಮೂರು ತಿಂಗಳ ಹಿಂದಿದ್ದ ಪರಿಸ್ಥಿತಿಯೇ ಬೇರೆ, ಈಗಿರುವ ಸ್ಥಿತಿಗತಿಯೇ ಬೇರೆ. ದೇಶಾದ್ಯಂತ ನರೇಂದ್ರ ಮೋದಿಯ ಅಲೆಯೆದ್ದಿದೆ, ಗಾಳಿ ಜೋರಾಗಿದೆ ಎಂದೆಲ್ಲ ಪಂಪ್ ಹೊಡೆಯುತ್ತಿದ್ದ ಕೇಸರಿ ಮಾಧ್ಯಮಗಳೇ ಈಗ ಕೇಜ್ರಿವಾಲ್ ಕೈಚಳಕದೆದುರು ಥಂಡಾ ಹೊಡೆದಿವೆ. ಆಮ್ ಆದ್ಮಿ ಪಾರ್ಟಿಯತ್ತ ದಿನೇದಿನೇ ಸುಶಿಕ್ಷಿತ ವರ್ಗ ಸಾಲುಗಟ್ಟಿರುವುದು 'ಮೋದಿ ಅಲೆ'ಗಾದ ದೊಡ್ಡ ಆತಂಕ. ಬಹುಶಃ ಆಮ್ ಆದ್ಮಿ ಪಾರ್ಟಿಗೆ ಈ ಮಟ್ಟದ ಬೆಂಬಲ ವ್ಯಕ್ತವಾಗುತ್ತದೆಯೆಂಬ ಲೆಕ್ಕಾಚಾರ ಬಿಜೆಪಿಗಿರಲಿಲ್ಲ.

ಕೇಜ್ರಿವಾಲ್ ಹವಾ

ಕೆಜೆಪಿಯನ್ನು ಅನಾಥವಾಗಿಸಿ, ನಂಬಿದವರನ್ನೆಲ್ಲ ನಡು ನೀರಿನಲ್ಲಿ ಕೈಬಿಟ್ಟು ರಣಹೇಡಿಯಂತೆ ಬಿಜೆಪಿಯ ಬಸ್ಸನ್ನೇರಿದ ಯಡಿಯೂರಪ್ಪ ಇಷ್ಟೊಂದು ಹತಾಶ ಸ್ಥಿತಿಗಿಳಿಯುತ್ತಾರೆಂಬ ನಿರೀಕ್ಷೆ ಖುದ್ದು ಅವರ ಅನುಯಾಯಿಗಳಿಗೇ ಇರಲಿಲ್ಲ. ಬಿಜೆಪಿ-ಕೆಜೆಪಿಗಳ ವಿಲೀನದಿಂದಾಗಿ ಮತ್ತೆ ಕೇಸರಿ ಕೂಟದ ತಾಕತ್ತು ದುಪ್ಪಟ್ಟಾಗಿರಲೂಬಹುದು. ಅದಕ್ಕೆ ಗಣಿಕಳ್ಳರ ಬೆಂಬಲವೂ ಸೇರಿಬಿಟ್ಟರೆ ಹಿಂದಿನ ವೈಭವವೂ ಮರುಕಳಿಸಿಬಿಡುತ್ತದೆ ಎಂಬುದರಲ್ಲೂ ಹುರುಳಿಲ್ಲದಿಲ್ಲ, ಹಾಗಂತ ಕಾಂಗ್ರೆಸ್ ಕೋಟೆ ಕ್ಷೀಣಿಸುತ್ತಾ? ಈಗಿರುವ ಒಂದು ಡಜನ್ ಸಂಸದರ ಪೈಕಿ ಗೆಲ್ಲುವವರ ಸಂಖ್ಯೆ ಹತ್ತಕ್ಕಿಂತ ಕಮ್ಮಿಯಾಗುತ್ತಾ?

ದೆಹಲಿ ಚುನಾವಣೆಯ ಮೂಲಕ ತಲೆಎತ್ತಿದ ಆಮ್ ಆದ್ಮಿಯ ಪರ್ವ ಹೇಗೆ ಕಾಂಗ್ರೆಸ್ಸಿಗೆ ಮುಳುವಾಯಿತೋ ಹಾಗೇ ಮೋದಿ ಅಲೆಗೂ ತೊಡರುಗಾಲಾಯಿತು. ದೇಶಾದ್ಯಂತ ಆ ಹೊತ್ತಿಗಾಗಲೇ ಮೋದಿಯ ಮಂತ್ರ ಜಪಿಸತೊಡಗಿದ್ದ ಕೇಸರಿ ಮೀಡಿಯಾಗಳೆಲ್ಲ ಕಾಂಗ್ರೆಸ್ಸಿಗೆ ಬಿಜೆಪಿಯ ಹೊರತಾಗಿ ಬೇರೆ ಪರ್ಯಾಯವೇ ಇಲ್ಲ ಎಂಬಂತೆ ಭ್ರಮೆಯೊಂದನ್ನು ಹುಟ್ಟಿಸುವಲ್ಲಿ ಯಶಸ್ವಿಯಾಗಿದ್ದವು. ದೆಹಲಿ ಚುನಾವಣೆಯಲ್ಲಿ ಇನ್ನಿಲ್ಲದಂತೆ ನೆಲ ಕಚ್ಚಿದ ಕಾಂಗ್ರೆಸ್ ಮಾಡಿದ ಏಕೈಕ ಸಾರ್ಥಕ ನಡೆಯೆಂದರೆ ಅದು ಆಮ್ ಆದ್ಮಿ ಪಕ್ಷವನ್ನು ಅಧಿಕಾರಕ್ಕೆ ತಂದದ್ದು!

ಆ ಮೂಲಕ ಬಿಜೆಪಿ-ಕಾಂಗ್ರೆಸ್ ಮಾತ್ರವಲ್ಲದೆ ದೇಶದ ಸುಶಿಕ್ಷಿತ ಮತ್ತು ಪ್ರಜ್ಞಾವಂತ ಸಮೂಹಕ್ಕೆ ಮೂರನೇ ಆಯ್ಕೆಯೂ ಇದೆ ಎಂಬುದು ಸಾಬೀತಾಗಿತ್ತು, ಇದರ ಬೆನ್ನಲ್ಲೇ ಆಮ್ ಆದ್ಮಿ ಪಕ್ಷದತ್ತ ದೇಶದ ಅನೇಕ ಗಣ್ಯರು, ಮೇಧಾ ಪಾಟ್ಕರ್ ಥರದ ಹೋರಾಟಗಾರ್ತಿಯರು ಮಾತ್ರವಲ್ಲದೆ ಆ ತನಕ ತಟಸ್ಥರಾಗಿದ್ದ ಅನೇಕ ಪ್ರಜ್ಞಾವಂತರ ಮೆರವಣಿಗೆಯೇ ಶುರುವಾಯಿತು. 70ರ ದಶಕದಲ್ಲಿ ತುರ್ತುಸ್ಥಿತಿ ವಿರುದ್ಧ ಜೆ.ಪಿ. ಚಳವಳಿ ಭುಗಿಲೆದ್ದ ಮಟ್ಟಕ್ಕಲ್ಲದೆ ಹೋದರೂ ಅಂಥಾದ್ದೊಂದು ವಾತಾವರಣ ಹುಟ್ಟು ಹಾಕುವಲ್ಲಿ ಆಪ್ ಯಶಸ್ವಿಯಾಗಿದ್ದಂತೂ ಸತ್ಯ.

ಅಲ್ಲಿಯತನಕ ಕರ್ನಾಟಕದಲ್ಲಿ ಮೋದಿ ಅಲೆಗೆ ಯಾವುದೇ ಅಡೆತಡೆಯಿರಲಿಲ್ಲ. ಮೋದಿ ಪ್ರಧಾನಿಯಾಗಲೇಬೇಕು ಎಂಬ ನೆಪವೊಡ್ಡೇ ಯಡ್ಡಿ ಕೆಜೆಪಿಗೆ ಕೈಕೊಟ್ಟಾಗಿತ್ತು, ಇನ್ನೇನು ಮೋದಿ ಅಲೆ ರಾಜ್ಯದಲ್ಲಿ ಸರ್ವವ್ಯಾಪಿಯಾಗಿ ಬಿಡುತ್ತದೆ ಎಂದೇ ಎಲ್ಲರೂ ಲೆಕ್ಕ ಹಾಕಿದ್ದು ಆಮ್ ಆದ್ಮಿಯ ಪ್ರವೇಶದಿಂದಾಗಿ ಬೇರೆಯದೇ ತಿರುವು ಪಡೆದಿತ್ತು, ವಿಶೇಷವಾಗಿ ಐಟಿ-ಬಿಟಿ ಪ್ರಭಾವಿತರು, ಸುಶಿಕ್ಷಿತರು; ಇತ್ಯಾದಿ ಪ್ರಜ್ಞಾವಂತ ಸಮೂಹದೆದುರು ಮೋದಿಯೇ ಅನಿವಾರ್ಯ ಆಯ್ಕೆ ಎಂಬಂತಿದ್ದದ್ದು ಕೇಜ್ರಿವಾಲ್ ಎಂಬ ಹೊಸ ಗಾಳಿಯತ್ತ ಕದಲಲಾರಂಭಿಸಿತ್ತು.

ಜಾತಿ ಸಮಾವೇಶಗಳು

ಇದು ಮೋದಿಗಾದ ಅತೀ ದೊಡ್ಡ ಪೆಟ್ಟು. ಪ್ರತಿ ಲೋಕಸಭಾ ಕ್ಷೇತ್ರದ ಮಟ್ಟಿಗೆ ಈ ರೀತಿ ಅನಾಯಾಸವಾಗಿ ದಕ್ಕುತ್ತಿದ್ದ ಕನಿಷ್ಠ ಹತ್ತೋ, ಇಪ್ಪತ್ತೋ ಸಾವಿರದಷ್ಟು ಅದೃಶ್ಯ ಮತಗಳು ಬಿಜೆಪಿ ಪಾಲಿಗೆ ಕಮ್ಮಿಯಾದರೂ ಅದು ಕಾಂಗ್ರೆಸ್ಸಿಗೆ ವರದಾನವಾಗುತ್ತದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕೆಜೆಪಿ ಹುಟ್ಟಿಸಿದ್ದ ಭ್ರಮೆಯಿಂದಾಗಿ ಸಾಕಷ್ಟು ಜೆಡಿಎಸ್, ಕಾಂಗ್ರೆಸ್ ಮತಗಳೂ ಕೆಜೆಪಿ ಬುಟ್ಟಿಗೆ ಬಿದ್ದಿತ್ತು ನಿಜ. ಆದರೆ ಈಗಿನ ಪರಿಸ್ಥಿತಿಯೇ ಬೇರೆ.



ಈಗಿರುವುದು ಅಹಿಂದ ಕಾಲ.

ಯಾರೆಷ್ಟೇ ಕಾಲೆಳೆದರೂ ಬಲಾಢ್ಯ ಜಾತಿಗಳಿಗೆ ವ್ಯತಿರಿಕ್ತವಾಗಿ ಸಣ್ಣಪುಟ್ಟ ಜಾತಿಗಳ ಧ್ರುವೀಕರಣಕ್ಕೆ ಸಿದ್ದು ಚಾಲನೆ ಕೊಟ್ಟಿದ್ದಂತೂ ಸತ್ಯವೇ. ಸಣ್ಣಪುಟ್ಟ ಜಾತಿ ಮಠಗಳಿಗೆ ಸರ್ಕಾರ ಅನುದಾನ ಘೋಷಿಸುವ ಮೂಲಕ ಶುರುವಾದ ಈ ಪ್ರಕ್ರಿಯೆ ಅಹಿಂದ ಸಮಾವೇಶ, ಗೊಲ್ಲರ ಸಮಾವೇಶ, ಅಲ್ಪಸಂಖ್ಯಾತರ ಸಮಾವೇಶ, ಪರಿಶಿಷ್ಟ ಜಾತಿ-ವರ್ಗಗಳ ಸಮಾವೇಶ, ಛಲವಾದಿ ಮಹಾಸಭಾ ಸಮ್ಮೇಳನಗಳ ಮೂಲಕ ಸುಪ್ತ ಸಂಚಲನೆಯೊಂದನ್ನು ಹುಟ್ಟು ಹಾಕಿತ್ತು, ಇದರ ವಿರುದ್ಧ ಕೇಸರಿ ಮೀಡಿಯಾಗಳು ಪರಮೇಶ್ವರ್ ಭಿನ್ನಮತದ ಪುಕಾರೆಬ್ಬಿಸಲು ಯತ್ನಿಸಿದವು. ಪರಮೇಶ್ವರ್ ಕೊಂಕು ಮಾತಿಗೆ ವಿಶೇಷ ಪ್ರಚಾರ ಕೊಟ್ಟವು. ಆದರೆ ವಾಸ್ತವವೇ ಬೇರೆಯಿತ್ತು, ಪರಮೇಶ್ವರ್ ಏನೇ ಲಗಾಟಿ ಹೊಡೆದರೂ ಕಾಂಗ್ರೆಸ್ ಮಟ್ಟಿಗೆ ಆತ ಓರ್ವ ಪರೋಪಜೀವಿಯೇ ಹೊರತು ವರ್ಚಸ್ಸಾಗಲಿ, ಸಮೂಹ ಶಕ್ತಿಯುಳ್ಳವನಾಗಲಿ ಅಲ್ಲವೇ ಅಲ್ಲ.

ಹೀಗಾಗಿ ಸಿದ್ದು ಜನಪ್ರಿಯತೆಗೆ ಪರಮೇಶ್ವರ್ ಕ್ಯಾತೆ ಸಮಸ್ಯೆಯಾಗಲೇ ಇಲ್ಲ. ಸಮಸ್ಯೆ ಅಂತ ಇದ್ದದ್ದು ಬಿಜೆಪಿ+ಕೆಜೆಪಿ+ಬಿಎಸ್‌ಆರ್ ಕೂಟಗಳ ಪುನರ್ಮಿಲನದ ಮೂಲಕವೆ. ಈ ಮಧ್ಯೆ ಜೆಡಿಎಸ್ ಮತ್ತು ಬಿಜೆಪಿಗಳ ಮಧ್ಯೆ ರಹಸ್ಯ ಹೊಂದಾಣಿಕೆಯ ಕಸರತ್ತೂ ನಡೆಯಿತು. ಅಂದರೆ ಎಲ್ಲೆಲ್ಲಿ ಜೆಡಿಎಸ್ ಪ್ರಾಬಲ್ಯವಿದೆಯೋ ಅಂಥಲ್ಲಿ ಬಿಜೆಪಿ ಡಮ್ಮಿಗಳನ್ನು ಹಾಕುವುದು ಮತ್ತು ಬಿಜೆಪಿ ಪ್ರಾಬಲ್ಯವಿರುವೆಡೆ ಜೆಡಿಎಸ್ ಸಹಕರಿಸುವುದು!

ಇಂಥ ಸಾಧ್ಯತೆಯನ್ನು ಲೆಕ್ಕ ಹಾಕಿಯೇ ಹುಷಾರಾದ ಕಾಂಗ್ರೆಸ್ ಹೈಕಮಾಂಡ್ ಮೊದಲು ಮಾಡಿದ ಕೆಲಸವೆಂದರೆ ಬೆಂಗಳೂರಿನ ಮಂತ್ರಿಗಳಾದ ದಿನೇಶ್ ಗುಂಡೂರಾವ್ ಮತ್ತು ರಾಮಲಿಂಗಾ ರೆಡ್ಡಿಯನ್ನು ಕರೆದು ಅನಂತ್‌ಕುಮಾರ್ ಬಗ್ಗೆ ಮೃದುಧೋರಣೆ ತಳೆಯದಂತೆ ಎಚ್ಚರಿಸಿದ್ದು!


ಬಚ್ಚೇಗೌಡನ ದುರಾಸೆ

ಬೆಂಗಳೂರು ದಕ್ಷಿಣದಲ್ಲಿ ಈ ಬಾರಿ ನಂದನ್ ನಿಲೇಕಣಿಯನ್ನು ಕಣಕ್ಕಿಳಿಸಿದ್ದೇ ಕಾಂಗ್ರೆಸ್ ಯಾವ ಮಟ್ಟಕ್ಕೆ

ದೈತ್ಯ ಯಡ್ಡಿಯ ನಾಶಕ್ಕೆ ರಾಜ್ ಸೊಸೆಯ ಶಪಥ!

ಕಾಲನ ಲೀಲೆಯೋ ವಿಧಿ ವಿಕಟವೋ ಗೊತ್ತಾಗುತ್ತಿಲ್ಲ. ರಾಜ್ ಕುಟುಂಬಕ್ಕೂ ದೇವೇಗೌಡರ ವಂಶಕ್ಕೂ ಆಗಿಬರುವುದೇ ಇಲ್ಲ ಎಂದೇ ತಾನೇ ರೂಢಿ ಮಾತಿದ್ದದ್ದು?

ಗೆದ್ದು ಮುಖ್ಯಮಂತ್ರಿಯಾದ ಪ್ರತಿಯೊಬ್ಬರೂ ರಾಜ್ ಕುಟುಂಬದ ಆಶೀರ್ವಾದ ಪಡೆದೇ ಗದ್ದುಗೆಯೇರುತ್ತಾರೆಂಬುದನ್ನು ಮೊದಲ ಬಾರಿಗೆ ಧಿಕ್ಕರಿಸಿದ್ದು ಕುಮಾರಸ್ವಾಮಿ. ವರನಟ ರಾಜ್ ತೀರಿಕೊಂಡಾಗ ನಡೆದ ಗೊಂದಲ, ಅದಕ್ಕೆ ಪ್ರತಿಯಾಗಿ ನಡೆದ ಹಿಂಸಾಚಾರ, ಪೊಲೀಸರ ಗುಂಡೇಟಿಗೆ ಸಿಲುಕಿ ಬಲಿಯಾದ ಎಂಟು ಮಂದಿ ರಾಜ್



ಅಭಿಮಾನಿಗಳ ದುರಂತ, ಜಿದ್ದಿಗೆ ಬಿದ್ದಂತೆ ನೂರಾರು ರಾಜ್ ಅಭಿಮಾನಿಗಳು ಜೈಲಲ್ಲಿ ಕೊಳೆಯುವಂತೆ ಮಾಡಿದ ಕುಮಾರಣ್ಣನ ಪ್ರತೀಕಾರ, ಇದೆಲ್ಲಕ್ಕೂ ಮುನ್ನ ಪಾರ್ವತಮ್ಮನ ವಿರುದ್ಧ ಬಂಡೆದ್ದು ತನ್ನದೇ ಪ್ರತ್ಯೇಕ ನಿರ್ಮಾಪಕರ ಸಂಘ ಹುಟ್ಟುಹಾಕಿದ ಕುಮಾರಣ್ಣನ ವೈರ: ಇತ್ಯಾದಿಗಳನ್ನೆಲ್ಲ ಗಮನಿಸಿದವರಿಗೆ ರಾಜ್ ಕುಟುಂಬ ಮತ್ತು ದೇವೇಗೌಡರ ಫ್ಯಾಮಿಲಿಯ ಪ್ರತಿಷ್ಠೆಯ ಮುನಿಸು ಚಿರಪರಿಚಿತ.

ಈಗ ನೋಡಿದರೆ ಇದೆಲ್ಲವೂ ತಿರುಗಾಮುರುಗಾ! ಗೀತಾ ಶಿವರಾಜ್‌ಕುಮಾರ್ ಶಿವಮೊಗ್ಗದ ಜೆಡಿಎಸ್ ಅಭ್ಯರ್ಥಿಯಾಗುವ ಮೂಲಕ ಸುದೀರ್ಘ ವೈಮನಸ್ಯವೊಂದಕ್ಕೆ ತಾತ್ಕಾಲಿಕ ತಡೆ ಬಿದ್ದಂತಾಗಿದೆ. ಬದುಕಿನ ಕೊನೆಗಾಲದಲ್ಲಿ ತಂದೆ ಬಂಗಾರಪ್ಪ ಮಾಡಿಕೊಂಡ ಯಡವಟ್ಟಿನ ಮುಂದುವರಿಕೆಯಂತೆ ಮಗಳು ಗೀತಾ ಜೆಡಿಎಸ್ ಅಂಬಾರಿಯೇರಿರಬಹುದು. ಅಣ್ಣ ಕುಮಾರ್ ಬಂಗಾರಪ್ಪನನ್ನು ಹಣಿಯಲು ಮಧು ಬಂಗಾರಪ್ಪ ತನ್ನ ಅಕ್ಕನನ್ನೇ ಬಾವಿಗೆ ತಳ್ಳಿ ಆಳ ನೋಡುತ್ತಿರಲಿಕ್ಕೂ ಸಾಕು!

ಇದೇನೇ ಇರಲಿ, ಸದ್ಯ ಶಿವಮೊಗ್ಗದ ಹಣಾಹಣಿಯಂತೂ ಚಿತ್ರವಿಚಿತ್ರ ಕುತೂಹಲ ಕೆರಳಿಸುತ್ತಿದೆ. ಬಿಜೆಪಿಯ ದೈತ್ಯ ಯಡ್ಡಿಯನ್ನು ಮಣಿಸುವುದು ಸುಲಭದ ಮಾತೇನಲ್ಲ, ಹಾಗಂತ ಶಿವಮೊಗ್ಗದ ಈಡಿಗರನ್ನಾಗಲಿ ಅವರ ಸ್ವಾಭಿಮಾನವನ್ನಾಗಲಿ ಕಡೆಗಣಿಸುವಂತಿಲ್ಲ, ಯಡ್ಡಿಯ ಪಾಲಿಗೆ ಶಿವಮೊಗ್ಗ ಹಿಂದಿನ ಶಿವಮೊಗ್ಗವಾಗಿ ಉಳಿದಿಲ್ಲ, ಮಗ ರಾಘವೇಂದ್ರ ನಿಂತಾಗ ಇದ್ದ ಪರಿಸ್ಥಿತಿಯೇ ಬೇರೆ. ಈಗಿನ ಸನ್ನಿವೇಶವೇ ಬೇರೆ. ಕಾಂಗ್ರೆಸ್ ಕುಮಾರ್ ಬಂಗಾರಪ್ಪನನ್ನೇನಾದರೂ ಯಡ್ಡಿ ವಿರುದ್ಧ ಅಖಾಡಕ್ಕಿಳಿಸಿತೆಂದರೆ ಅದು ಗೆಲುವನ್ನು ಹರಿವಾಣದಲ್ಲಿಟ್ಟು ಬಿಜೆಪಿಗೆ ಅರ್ಪಿಸಿದ ಲೆಕ್ಕವೆ. ಮಂಜುನಾಥ್ ಭಂಡಾರಿಯನ್ನು ಛೂಬಿಡುವ ಮತ್ತೊಂದು ಲೆಕ್ಕಾಚಾರವೂ ಕಾಗೋಡು ತಲೆ ಹೊಕ್ಕದೆಯಂತೆ.

ಇಬ್ಬರು ಈಡಿಗರ ಅಭ್ಯರ್ಥಿಗಳಿದ್ದರೇನೇ ಯಡ್ಡಿಗೆ ಲಾಭ ಎಂಬ ಕಾಮನ್‌ಸೆನ್ಸ್ ಕಾಂಗ್ರೆಸ್ ನಾಯಕರಿಗಿರಬೇಕಲ್ಲವೆ? ಯಡ್ಡಿಯನ್ನು ಗೆಲ್ಲಿಸುವುದು, ಸೋಲಿಸುವುದು ಎರಡೂ ಕಾಂಗ್ರೆಸ್ ಕೈಯಲ್ಲೇ ಇದೆ. ಏಕೆಂದರೆ ಶಿವಮೊಗ್ಗದ ಲಿಂಗಾಯತರ ಒಗ್ಗಟ್ಟೆಂದರೆ ಅದು ಅಂತಿಂಥಾ ಒಗ್ಗಟ್ಟಲ್ಲ, ಇದರ ವಿರುದ್ಧ ರಾಜ್ ಕುಟುಂಬದ ಸೊಸೆಯನ್ನೂ ಜೊತೆಗೆ ರಾಜ್ ಪುತ್ರ ಶಿವಣ್ಣನನ್ನೂ ಸೆಣಸಾಟಕ್ಕಿಳಿಸಿದ ದೇವೇಗೌಡರ ತಲೆಗಾರಿಕೆಗೆ ಏನೆನ್ನಬೇಕು?

ಜೆಡಿಎಸ್ ರಣಸಾಹಸ

ಅಪ್ಪ ಪ್ರಧಾನಿಯಾಗದೇ ಹೋದರೇನಂತೆ ಮಗ ಕೇಂದ್ರ ಮಂತ್ರಿಯಾಗಬಹುದಲ್ಲವೆ?

ಇದ್ದಕ್ಕಿದ್ದಂತೆ ಕಾಂಗ್ರೆಸ್ ನಾಯಕ ಜಾಫರ್ ಷರೀಫ್ ದೇವೇಗೌಡರ ವಿರುದ್ಧ ಅಭ್ಯರ್ಥಿ ಹಾಕದಂತೆ ಹೈಕಮಾಂಡಿಗೆ ಪತ್ರ ಬರೆದಿದ್ದೇಕೆ?

ಅದು ಒಂದೇ ಕಲ್ಲಿಗೆ ಎರಡು ಹಕ್ಕಿ ಉದುರಿಸುವ ತಂತ್ರ. ಈ ರೀತಿ ದೇವೇಗೌಡರನ್ನು ಓಲೈಸುವ ಮೂಲಕ ಗೌಡರ ಕಡುವೈರಿ ಸಿದ್ದುವನ್ನು ...ಸಿದಂತಾಯ್ತು. ತನ್ಮೂಲಕ ತನಗೆ ಬೆಂಗಳೂರು ಕೇಂದ್ರದಿಂದ ಕಾಂಗ್ರೆಸ್ ...ಟ್ ಸಿಕ್ಕ ಪಕ್ಷದಲ್ಲಿ ಜೆಡಿಎಸ್ ಮುಸ್ಲಿಂ ಅಭ್ಯರ್ಥಿಯನ್ನು ಹಾಕದ ಹಾಗೆ ...ರೈಸುವುದು!

ಕೇವಲ ಜಾಫರ್ ಷರೀಫ್ ಮಾತ್ರವೇ ಅಲ್ಲ, ಚಳವಳಿ ನಾಯಕ ವಾಟಾಳ್ ...ಡ ದೇವೇಗೌಡರ ವಿರುದ್ಧ ಅಭ್ಯರ್ಥಿಗಳನ್ನು ಹಾಕದಂತೆ ಬಿಜೆಪಿ, ಕಾಂಗ್ರೆಸ್ ...ಯಕರನ್ನು ಒತ್ತಾಯಿಸುತ್ತಿದ್ದಾರೆ.

ಓರ್ವ ಮಾಜಿ ಪ್ರಧಾನಿಗೆ ಇದು ಕನ್ನಡಿಗರು ಸಲ್ಲಿಸುತ್ತಿರುವ ಗೌರವ ...ವಾ ಕನ್ನಡಿಗರ ಸ್ವಾಭಿಮಾನವೆಂದೇ ಭಾವಿಸಿದರೂ ಗೌಡರ ಈ ಸಲದ ...ತಂತ್ರವೇ ಬೇರೆಯಿದೆ. ಕನಿಷ್ಠ ಐದು ಅಥವಾ ಆರು ಸ್ಥಾನಗಳನ್ನು ...ಲ್ಲೇಬೇಕೆಂಬ ಹಠಕ್ಕೆ ದೇವೇಗೌಡರು ಬಿದ್ದಿದ್ದಾರಂತೆ. ಹಿಂದಿದ್ದ ಮಂಡ್ಯ ...ಗಳೂರು ಗ್ರಾಮಾಂತರ ಮತ್ತು ಹಾಸನಗಳಲ್ಲದೆ ತುಮಕೂರು, ಚಿಕ್ಕಬಳ್ಳಾಪುರ ...ಧ್ಯವಾದರೆ ಚಿತ್ರದುರ್ಗವನ್ನೂ ಗೆಲ್ಲುವುದು ಗೌಡರ ಲೆಕ್ಕಾಚಾರ. ಸಾಧ್ಯವಾದರೆ ಮೈಸೂರಿಗೂ ಒಂದು ಕೈ ನೋಡೇಬಿಡುವ ದುಸ್ಸಾಹಸಕ್ಕೂ ಗೌಡರು ಕೈ ಇಟ್ಟಂತಿದೆ.





ತುಮಕೂರಿನಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿರುವುದು ಜೆಡಿಎಸ್ ಪಾಳಯದಿಂದಲೇ ಬಂದೆದ್ದು ಹೋದ ಎಸ್.ಪಿ. ಮುದ್ದಹನುಮೇಗೌಡ. ಬಿಜೆಪಿಯಿಂದ ಬಸವರಾಜು ನಿಂತರೂ, ಸೊಗಡು ಶಿವಣ್ಣನೇ ಹೋರಾಟಕ್ಕಿಳಿದರೂ ಅದು ತಲೆನೋವೇನಲ್ಲ. ಏಕೆಂದರೆ ಜೆಡಿಎಸ್ ಅಭ್ಯರ್ಥಿಯಾಗಿ ಪತ್ರಕರ್ತ ಕೃಷ್ಣಪ್ಪ ... ಗೌಡರ ಮತ ಮತ್ತೊಂದೆಡೆ ಗೌಡರ ... ಮಗದೊಂದೆಡೆ ಅಲ್ಪಸಂಖ್ಯಾತರ ಓಟನ್ನು ಗಿಟ್ಟಿಸುತ್ತಾರೆ. ಇದು ಬಿರುದ್ಧ ಪರಮೇಶ್ವರ ಗುಂಪು ಜೆಡಿಎಸ್ ಬೆಂಬಲಕ್ಕೆ ನಿಲ್ಲಲೇಬೇಕು. ಮುದ್ದಹನುಮೇಗೌಡರ ಬಿಟ್ಟು ಬೇರೆ ಇಲ್ಲ!

ತುಮಕೂರನ್ನು ಈ ಬಾರಿ ಜೆಡಿಎಸ್ ತನ್ನ ನಿಶ್ಚಿತ ಕ್ಷೇತ್ರವಾಗಿ ಪರಿಗಣಿಸುವುದಕ್ಕೆ ಇಂಥ ಅನೇಕ ಕಾರಣಗಳಿರುವಂತೆ ಪಕ್ಕದ ಚಿತ್ರದುರ್ಗದಲ್ಲೂ ಈ ಥರದ್ದೇ ಪರಿಸ್ಥಿತಿ ಉದ್ಭವವಾಗಿದೆ. ಬಿಜೆಪಿಯ ಜನಾರ್ದನ ಸ್ವಾಮಿಗೆ ಹಿಂದಿನ ವರ್ಚಸ್ಸಿಲ್ಲ, ಕಾಂಗ್ರೆಸ್ಸಿಗಂತೂ ಅಭ್ಯರ್ಥಿಗಳೇ ಗತಿಯಿಲ್ಲ, ಏಕೆಂದರೆ ಎಲ್ಲಿ ಮಂತ್ರಿಗಿರಿಗೆ ಧಕ್ಕೆಯಾಗುತ್ತೋ ಎಂದು ಆಂಜನೇಯ ಗೆಲ್ಲುವ ಅವಕಾಶವಿದ್ದರೂ ಮನಸ್ಸು ಮಾಡುತ್ತಿಲ್ಲ, ಹಾಗೇ ಚಿಕ್ಕಬಳ್ಳಾಪುರಕ್ಕೆ ಮೊಯ್ಲಿಗೆ ಟಿಕೆಟ್ ಸಿಗದೇ ಹೋದರೆ ಮಗ ಕುಮಾರಸ್ವಾಮಿಯನ್ನೇ ತರುವ ಆಲೋಚನೆಯೂ ಗೌಡರ ತಲೆ ಹೊಕ್ಕಿದೆ.


ನಾಳೆ ಏನಾದರೂ ತೃತೀಯ ರಂಗದ ಬೆನ್ನಿಗೆ ಕಾಂಗ್ರೆಸ್ ನಿಂತಿತೆಂದರೆ ಪ್ರಧಾನಿ ಪಟ್ಟಕ್ಕೆ ತಾನೂ ಒಂದು ಕೈ ನೋಡೇಬಿಡುವ ದೂರಾಲೋಚನೆಯೂ ಗೌಡರ ತಲೆ ಹೊಕ್ಕಿದೆ. ಈ ಎಲ್ಲಾ ಲೆಕ್ಕ ಹಾಕಿಯೇ ತಮಿಳುನಾಡಿನ ಮುಖ್ಯಮಂತ್ರಿ ಜಯಲಲಿತಾಗೆ ಗೌಡರು ಮಸ್ಕಾ ಹೊಡೆಯುತ್ತಿದ್ದಾರೆ. ಯಾವ ಗಳಿಗೆಯಲ್ಲಿ ಏನಾಗುತ್ತೋ. ನಾಳೆ ಮಮತಾ, ಮಾಯಾವತಿ, ಜಯಲಲಿತಾ, ಒಂದಾಗಲೂಬಹುದು ಅಥವಾ ಎಡ ಪಕ್ಷಗಳು, ಜೆಡಿಯು ಮತ್ತು ಜೆಡಿಎಸ್ ಕೂಟದ ಬೆನ್ನಿಗೆ ಕಾಂಗ್ರೆಸ್ ನಿಂತರೂ ಅಚ್ಚರಿಯಿಲ್ಲ, ಆಗ ತಾನು ಪ್ರಧಾನಿಯಾಗದೇ ಹೋದರೂ ಮಗ ಕುಮಾರಸ್ವಾಮಿಯನ್ನಾದರೂ ಕೇಂದ್ರ ಮಂತ್ರಿ ಮಾಡಬಹುದಲ್ಲವೆ?


ಇಂಥ ದೂರದೃಷ್ಟಿ ಇಟ್ಟುಕೊಂಡೇ ಮೈಸೂರಿಗೆ ಮಲ್ಲಿಕಾರ್ಜುನಪ್ಪನನ್ನು ಕಣಕ್ಕಿಳಿಸಿದ ದೇವೇಗೌಡರಿಗೆ ಕನಿಷ್ಠ ಬೆಂಗಳೂರು ಗ್ರಾಮಾಂತರ ಮತ್ತು ಮಂಡ್ಯವನ್ನಾದರೂ ಉಳಿಸಿಕೊಳ್ಳಲೇಬೇಕಾಗಿದೆ. ಯಾರ ಹಣೆಬರಹದಲ್ಲಿ ಏನಿದೆಯೊ? ಪರಿಸ್ಥಿತಿ ಏನಾಗುತ್ತೊ? ತಾನು ಪ್ರಧಾನಿಯಾಗದಿದ್ದರೇನಂತೆ ಕನಿಷ್ಠ ಮಗನಾದರೂ ಕೇಂದ್ರ ಮಂತ್ರಿಯಾಗಬಹುದಲ್ಲವೆ?











...ಪಿಗೆ ಬಿಸಿ ಮುಟ್ಟಿಸಲಿದೆ ಎಂಬುದಕ್ಕೆ ಉದಾಹರಣೆ ...ತಿತ್ತು. ಆಮ್ ಆದ್ಮಿ ಪಾರ್ಟಿ ಕಣಕ್ಕಿಳಿಯದೇ ...ಗಿದ್ದರೆ ನಿಲೇಕಣಿಯ ದಾರಿ ನಿರಾಯಾಸವಾಗುತ್ತಿತ್ತು. ...ಗಂತ ಅನಂತ್‌ಗಿದು ಲಾಭವೆಂದೇನಲ್ಲ. ಏಕೆಂದರೆ ...ತ್ ಪಾಲಿಗೆ ದಕ್ಕುತ್ತಿದ್ದ ಅದೃಶ್ಯ ಮತಗಳ ಅರ್ಧದಷ್ಟನ್ನೂ ...ಪ್ ಆದ್ಮಿ ಕಸಿಯುತ್ತದೆ. ಏನೇ ಆದರೂ ಬೆಂಗಳೂರು ...ಣದಲ್ಲಿ ಈ ಬಾರಿ ಜನ ಬದಲಾವಣೆ ಬಯಸಿರುವುದೂ ...ಸತ್ಯ. ಅನಂತ್ ಪಾಲಿಗಿದು ಮಾಡು ಇಲ್ಲವೆ ಮಡಿ ...ಗವೆಂಬುದರಲ್ಲಿ ಅನುಮಾನವಿಲ್ಲ.

...ಹಾಗೆ ಚಿಕ್ಕಬಳ್ಳಾಪುರದಲ್ಲಿ ಮೊಯ್ಲಿ ವಿರುದ್ಧ ಅನಿತಾ ...ಮಾರಸ್ವಾಮಿಯನ್ನು ಜೆಡಿಎಸ್ ಕಣಕ್ಕಿಳಿಸುವುದು ...ವಾಗಿತ್ತು. ಯಾವತ್ತು ಮೊಯ್ಲಿಗೆ ಹೈಕಮಾಂಡ್ ಅನುಮತಿ ...ನಾಯಿತೋ ಮಾಜಿ ಗಣಿ ಮಂತ್ರಿ ಶಿಡ್ಲಘಟ್ಟದ ವಿ. ...ನಿಯಪ್ಪ ಕಾಂಗ್ರೆಸ್ ಅಭ್ಯರ್ಥಿಯಾಗುತ್ತಾರೆಂಬ ಮಾತು ...ಬಂತು. ಹಾಗೊಮ್ಮೆ ವಿ. ಮುನಿಯಪ್ಪ ಕಾಂಗ್ರೆಸ್ ...ರ್ಥಿಯಾಗಿದ್ದೇ ಆದರೆ ಅನಿತಾ ಕುಮಾರಸ್ವಾಮಿಗೆ ...ಲಾಗಿ ಜೆಡಿಎಸ್ ಅಧಿಪತಿ ಕುಮಾರಣ್ಣನೇ ...ಳಿಯುತ್ತಾರೆಂಬ ಸುದ್ದಿ ಹೊರಬಿತ್ತು. ಅದು ಬಿಜೆಪಿಯ ...ಂಚಕ ಬಚ್ಚೇಗೌಡನನ್ನು ಹಣಿಯುವ ಗೌಡರ ರಣತಂತ್ರ!

...ಹೊಸಕೋಟೆಯ ರಕ್ತ ಪಿಪಾಸು ಬಚ್ಚೇಗೌಡನನ್ನು ...ಬಳ್ಳಾಪುರದಿಂದ ಕಣಕ್ಕಿಳಿಸುವ ಬಿಜೆಪಿಯ ಅನಾಚಾರ ...ದ ಹತಾಶೆಯ ಪ್ರತೀಕವಷ್ಟೇ. ಕೋಲಾರದಲ್ಲಿ ಜೆಡಿಎಸ್ ...ವ ಎಂಬ ಉದ್ಯಮಿಯನ್ನು ಹಾಕಿರುವುದು ಕೂಡ ...ಚ್. ಮುನಿಯಪ್ಪ ಗೆಲುವಿಗೆ ಪೂರಕವಾಗಿಯೇ ಎಂಬ ...ತು ಕೇಳಿಬರುತ್ತಿದೆ. ಏಕೆಂದರೆ ಕೆ.ಹೆಚ್. ಮುನಿಯಪ್ಪ ...ನ್ನ ಸುಲಭಕ್ಕೆ ಜಗ್ಗುವ ಆಸಾಮಿಯಲ್ಲ. ಅಂಥಾ ...ಗೌಡರನ್ನೇ ಬುಟ್ಟಿಗೆ ಹಾಕಿಕೊಂಡು ಬಿಜೆಪಿಯಿಂದಲೂ ...ಗಳನ್ನೇ ಹಾಕಿಸಿಕೊಂಡು ತಾನು ನಿರಾಯಾಸವಾಗಿ ...ವ ಮುನಿಯಪ್ಪರ ಷಡ್ಯಂತ್ರ ಕಾಂಗ್ರೆಸ್ಸಿಗೆ ಅನುಕೂಲವೇ ...ರೂ ತಲೆ ನೋವಾಗಿರಲಿಲ್ಲ. ಮಂಡ್ಯದಲ್ಲಿ ಈ ಬಾರಿ ...ಎಸ್ ಮತ್ತು ಕಾಂಗ್ರೆಸ್ ಮಧ್ಯೆ ತೀವ್ರ ಹಣಾಹಣಿಯೇ ...ಟ್ಟಿದೆ. ಹಾಗೆ ಬೆಂಗಳೂರು ಗ್ರಾಮಾಂತರದಲ್ಲಿ ಡೀಕೆ ... ಸೂರಿಯನ್ನು ಮಣಿಸಲು ಜೆಡಿಎಸ್ ಪ್ರಭಾಕರ್ ...ನ್ನು ಅಖಾಡಕ್ಕಿಳಿಸಿದೆ. ಬಿಜೆಪಿ ಮುನಿರಾಜು ಎಂಬ ...ಸವನನ್ನು ಛೂಬಿಟ್ಟದ್ದು ಪರೋಕ್ಷವಾಗಿ ಜೆಡಿಎಸ್ ...ಕೂಲಕ್ಕೆಂಬಂತೆ ತೋರುತ್ತಿದೆ. ಆದರೆ ಡೀಕೆ ತಮ್ಮನ ...ಗೆ ಹೊಸ ಚಾನ್ಸೆಂಬಂತೆ ಒದಗಿ ಬಂದದ್ದು ...ಗಾದ ಯೋಗೇಶ್ವರ್ ಎಂಟ್ರಿ.

ಯೋಗೇಶ್ವರ್ ಲಾಭ!

ಬಿಜೆಪಿ ಅಧಿಕಾರದಲ್ಲಿದ್ದಷ್ಟೂ ದಿನ ಡೀಕೆಯಿಂದ ವಾಚಾಮಗೋಚರ ಉಗಿಸಿಕೊಳ್ಳುತ್ತಿದ್ದ ಯೋಗೇಶ್ವರ್‌ಗೆ ತಾನು ಗೆಲ್ಲಬೇಕೆಂದರೆ ಡೀಕೆ ಕೃಪಾಕಟಾಕ್ಷ ಅನಿವಾರ್ಯವೆಂಬುದು ಕಳೆದ ವಿಧಾನಸಭಾ ಚುನಾವಣೆಯಲ್ಲೇ ಅರ್ಥವಾಗಿತ್ತು. ಹಾಗೆ ಮುಂದೊಮ್ಮೆ ದೇವೇಗೌಡರ ವಿರುದ್ಧ ತನಗೆ ಯೋಗೇಶ್ವರ್ ಪ್ರಯೋಜನಕ್ಕೆ ಬರುತ್ತಾನೆಂಬ ಲೆಕ್ಕಾಚಾರವೂ ಡೀಕೆಗಿತ್ತು! ಅದು ಸಾಕಾರವಾಗಿದ್ದೇ ಕಳೆದ ಲೋಕಸಭಾ ಉಪಚುನಾವಣೆಯಲ್ಲಿ. ಪ್ರತಿ ಬಾರಿ ಚನ್ನಪಟ್ಟಣದಲ್ಲಿ ಕಾಂಗ್ರೆಸ್ಸಿಗೆ ಬರುತ್ತಿದ್ದ ಮತಗಳು ಹೆಚ್ಚೆಂದರೆ 17 ಸಾವಿರವಷ್ಟೇ. ಆದರೆ ಅನಿತಾ ಕುಮಾರಸ್ವಾಮಿ ವಿರುದ್ಧ ಡೀಕೆ ತಮ್ಮನಿಗೆ ಚನ್ನಪಟ್ಟಣವೊಂದರಲ್ಲೇ 70 ಸಾವಿರದಷ್ಟು ಮತ ಬಿದ್ದಿತ್ತು.

ಇದರರ್ಥ ಯೋಗೇಶ್ವರ್ ಕಾರಣಕ್ಕೆ ಡೀಕೆ ತಮ್ಮನಿಗಾದ ಲಾಭ 53 ಸಾವಿರ ಮತಗಳು!

ಇದನ್ನು ಲೆಕ್ಕ ಹಾಕಿಯೇ ಜೆಡಿಎಸ್ ಈ ಬಾರಿ ಪ್ರಭಾಕರ್ ರೆಡ್ಡಿಯನ್ನು ಅಖಾಡಕ್ಕಿಳಿಸಿದೆ. ಬೆಂಗಳೂರು ದಕ್ಷಿಣ, ಆನೇಕಲ್, ರಾಜರಾಜೇಶ್ವರಿನಗರ ಇತ್ಯಾದಿ ಬೆಂಗಳೂರು ನಗರದ ಏರಿಯಾಗಳಲ್ಲಿ ಗಣನೀಯವಾಗಿರುವ ರೆಡ್ಡಿಗಳೆಲ್ಲ ಪ್ರಭಾಕರ್ ರೆಡ್ಡಿಗೆ ಮತ ಕೊಟ್ಟರೆಂದರೆ ಡೀಕೆ ಸುರೇಶ್‌ನನ್ನು ಮಣಿಸುವುದು ಕಷ್ಟವೇನಲ್ಲ. ಇನ್ನು ಬಿಜೆಪಿಯ ಐದೋ ಹತ್ತೋ ಪರ್ಸೆಂಟು ಓಟುಗಳು ಜೆಡಿಎಸ್‌ಗೆ ಬಂದರಂತೂ ಸೂರಿಗೆ ಸೋಲು ಕಟ್ಟಿಟ್ಟ ಬುತ್ತಿಯೆ.

ಇದೇ ತಂತ್ರವನ್ನು ಜೆಡಿಎಸ್ ಮಂಡ್ಯಕ್ಕೂ ಅಳವಡಿಸುತ್ತಿದೆ. ಕಳೆದ ಬಾರಿ ಜೆಡಿಎಸ್‌ನ ಪುಟ್ಟರಾಜು ಮತ್ತು ಕಾಂಗ್ರೆಸ್ಸಿನ ರಮ್ಯಾ ಮಧ್ಯೆ ಇದ್ದ ಅಂತರ 60 ಸಾವಿರದಷ್ಟು. ಹೇಗಿದ್ದರೂ ಮತ್ತೆ ಆರು ತಿಂಗಳಿಗೆ ಮಹಾ ಚುನಾವಣೆಯನ್ನು ಎದುರಿಸಲೇಬೇಕೆಂಬ ಉಪಾಯಕ್ಕೆ ಬಿದ್ದು ದುಡ್ಡು ಕಾಸಿನ ವಿಷಯದಲ್ಲಿ ಜೆಡಿಎಸ್ ಹುಷಾರಾಯಿತು. ಅನಗತ್ಯ ದುಂದುವೆಚ್ಚಕ್ಕೂ ಕೈಹಾಕಲಿಲ್ಲ. ಇದರ ಲಾಭ ಕಾಂಗ್ರೆಸ್ಸಿಗಾಯಿತಾದರೂ ಸುರಿದ ದುಡ್ಡಿಗೆ ದಕ್ಕಿದ್ದು ಆರು ತಿಂಗಳ ಎಂಪಿಗಿರಿ ಮಾತ್ರ. ಈ ಆರು ತಿಂಗಳಲ್ಲಿ ರಮ್ಯಾ ಮಾಡಿದ ಸಾಧನೆ, ನಡೆಸಿದ ಓಡಾಟ ಮತ್ತು ಮಿಂಚಿದ ರೀತಿಗೀಗ ಬಿದ್ದ ಜೆಡಿಎಸ್ ಪೆಟ್ಟು ನೋಡಿಕೊಳ್ಳುವಂತಾಗಿದೆ.

ಸಿಕ್ಕ ಸಣ್ಣ ಅವಕಾಶವನ್ನೇ ಬಳಸಿಕೊಂಡ ರಮ್ಯಾ ಮಂಡ್ಯದ ರಾಜಕಾರಣದಲ್ಲಿ ಬೇರು ಬಿಟ್ಟಾಗಿದೆ. ಅದರ ಆಳ ಮಾತ್ರ ಏಪ್ರಿಲ್ ಚುನಾವಣೆಯಲ್ಲೇ ಗೊತ್ತಾಗಲಿದೆ. ಮೈಸೂರು ಮತ್ತು ಚಾಮರಾಜನಗರಗಳಲ್ಲಿ ಎತ್ತಿಂದೆತ್ತ ಲೆಕ್ಕ ಹಾಕಿದರೂ ಕಾಂಗ್ರೆಸ್ ದಾರಿಯೇ ಸಲೀಸಾಗಿದೆ. ಚಾಮರಾಜನಗರದ ಎಂಎಲ್‌ಎ ಕ್ಷೇತ್ರಗಳ ಪೈಕಿ ಹೆಚ್.ಡಿ. ಕೋಟೆ ಹೊರತುಪಡಿಸಿದಂತೆ ಮಿಕ್ಕೆಲ್ಲ ಕಾಂಗ್ರೆಸ್ ಪಾಲಾಗಿರುವುದರಿಂದ ಕಾಂಗ್ರೆಸ್‌ನ ಧ್ರುವನಾರಾಯಣರಿಗೆ ಈ ಬಾರಿ ತಲೆನೋವು ಕಮ್ಮಿ. ಜೆಡಿಎಸ್ ಎಡ ದಲಿತರೆಂಬ ಒಂದೇ ಲೆಕ್ಕಾಚಾರದಿಂದ ಶಿವಣ್ಣನವರನ್ನು ನಿಲ್ಲಿಸಿದೆ. ಹಾಗೆ ಬಿಜೆಪಿಯ ಕೃಷ್ಣಮೂರ್ತಿಗೂ ಈ ಬಾರಿ ಹಿಂದಿನಷ್ಟು ಅನುಕೂಲವಿಲ್ಲ.

ಕರಾವಳಿಯಲ್ಲಿ

ಇತ್ತ ಕರಾವಳಿಯಲ್ಲೂ ಇಂಥದ್ದೇ ಅನುಕೂಲ ಕಾಂಗ್ರೆಸ್ಸಿಗಿದೆ. ದಕ್ಷಿಣ ಕನ್ನಡದಲ್ಲಿ ಜನಾರ್ದನ್ ಪೂಜಾರಿಗೆ ಮೋದಿ ಅಲೆಯದ್ದೇ ದೊಡ್ಡ ತಲೆ ನೋವಾಗಿರುವಂತಿದೆ. ಹಾಲೀ ಸಂಸದ ನವೀನ್ ಕಟೀಲ್‌ಗೆ ಪೂಜಾರಿಯನ್ನು ಮುಕ್ಕಿಸುವುದು ಈ ಬಾರಿ ಅಷ್ಟು ಸಲೀಸಲ್ಲ. ಹಾಗೆ ಉಡುಪಿ-ಚಿಕ್ಕಮಗಳೂರಿನಲ್ಲಿ ಬಿಜೆಪಿ ಕರಂದ್ಲಾಜೆಯನ್ನು ಇಳಿಸಿದೆ. ಆದರೆ ಜಯಪ್ರಕಾಶ್ ಹೆಗಡೆಯವರ ವರ್ಚಸ್ಸಿನೆದುರು ಹೆಣಗಾಡುವುದು ಕರಂದ್ಲಾಜೆಗೆ ಅಷ್ಟು ಸಲೀಸೇನಲ್ಲ. ಪಕ್ಕದ ಉತ್ತರ ಕನ್ನಡದಲ್ಲಿ ಕಾಂಗ್ರೆಸ್ ಬಿ.ಕೆ. ಹರಿಪ್ರಸಾದ್‌ರನ್ನೇನಾದರೂ ತಂದಿತೆಂದರೆ ಅನಂತ್ ಮಾಣಿ ನೀರು ಕುಡಿಯಲೇಬೇಕು.

ಸಮಸ್ಯೆಯೆಂದರೆ ಬಿ.ಕೆ. ಹರಿಪ್ರಸಾದ್ ಸದ್ಯ ಒರಿಸ್ಸಾದ ಚುನಾವಣಾ ಉಸ್ತುವಾರಿ ಹೊತ್ತಿದ್ದಾರೆ. ಅಂಥಾ ಮಹತ್ವದ ಜವಾಬ್ದಾರಿಯನ್ನು ಕೈಬಿಟ್ಟು ಹರಿಪ್ರಸಾದ್ ಉತ್ತರ ಕನ್ನಡಕ್ಕೆ ಬರುತ್ತಾರಾ ಅಥವಾ ಅಸ್ನೋಟಿಕರ್‌ಗೆ ಬಿಟ್ಟು ಕೊಡುತ್ತಾರ ಎಂಬುದೇ ಪ್ರಶ್ನೆ.

ಸದ್ಯಕ್ಕಂತೂ ಕರಾವಳಿಯ ಈ ಮೂರು ಕ್ಷೇತ್ರಗಳಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಸರಿಸಮನಾದ ಹಣಾಹಣಿಗಿಳಿದಿದೆ. ಕಾಂಗ್ರೆಸ್ಸಿಗಿಲ್ಲಿ ಬಿಜೆಪಿಯಷ್ಟೇ ಸಮನಾದ ಅನುಕೂಲವಿದೆ. ಮೋದಿ ಅಲೆ ವಿರುದ್ಧ ಕಾಂಗ್ರೆಸ್ ಎಂಥಾ ರಣತಂತ್ರ ಹೂಡುತ್ತದೆ ಎಂಬುದೊಂದೇ ಉಳಿಕೆ ಪ್ರಶ್ನೆ. ಸವಾಲನ್ನು ಸಿದ್ದು ಹೇಗೆ ನಿಭಾಯಿಸುತ್ತಾರೆಂಬುದರಲ್ಲಿ ಕಾಂಗ್ರೆಸ್ ಭವಿಷ್ಯ ನಿರ್ಧಾರವಾಗಲಿದೆ. ದಾವಣಗೆರೆಯ ವಿಷಯದಲ್ಲೂ ಬಿಜೆಪಿ ಮತ್ತು ಕಾಂಗ್ರೆಸ್ ಮಧ್ಯೆ ಇದೇ ಜಿದ್ದಾಜಿದ್ದಿಯಿದೆ. ಯಾರಿಗೆ ಬಿಜೆಪಿಗೆ ಬಂದಿದ್ದರ ಲಾಭ ಸಿದ್ದೇಶ್ ಪಡೆಯದಂತೆ ಶಾಮನೂರು ಪಾಳೇಗಾರರು ಏನೆಲ್ಲ ಚಾಲಾಕು ತೋರುತ್ತಾರೋ ಕಾದು ನೋಡಬೇಕು.

ಕತ್ತಿ ತಮ್ಮನ ಎಂಟ್ರಿ

ಬೆಳಗಾವಿಯಲ್ಲಿ ಮೋದಿ ಅಲೆಯೇನೋ ಇದೆ. ಆದರೆ ಅದಕ್ಕಿಂತಲೂ ದೊಡ್ಡ ಮಟ್ಟದ ಅಸಹನೆ ಹಾಲಿ ಬಿಜೆಪಿ ಸಂಸದ ಸುರೇಶ್ ಅಂಗಡಿ ವಿರುದ್ಧ ಹೊಗೆಯಾಡುತ್ತಿದೆ. ಲಕ್ಷ್ಮಿ ಹೆಬ್ಬಾಳ್‌ಕರ್‌ಗೆ ಕಾಂಗ್ರೆಸ್ ಟಿಕೆಟ್ ಕೊಟ್ಟಿದ್ದರಿಂದಾಗಿ ಸುರೇಶ್ ಅಂಗಡಿ ತೊಲಗುವುದು ಮತ್ತಷ್ಟು ನಿಕ್ಕಿಯಾಗಿದೆ. ಇನ್ನು ಸಂಭಾಜಿ ಪಾಟೀಲ್ ಏನಾದರೂ ಎಂಇಎಸ್‌ನಿಂದ ನಿಂತರೆಂದರೆ ಬಿಜೆಪಿ ಕತೆಯಿಲ್ಲಿ ಮುಗಿದಂತೆಯೆ! ಇನ್ನು ಚಿಕ್ಕೋಡಿಯಲ್ಲಿ ಕತ್ತಿ ತಮ್ಮ ರಮೇಶ್ ಕತ್ತಿಯ ವಿರುದ್ಧ ಕಾಂಗ್ರೆಸ್ ಪ್ರಕಾಶ್ ಹುಕ್ಕೇರಿಯ ಹೊರತಾಗಿ ಬೇರೆ ಯಾರನ್ನು ನಿಲ್ಲಿಸಿದರೂ ಕಷ್ಟವೆ. ಬಿಜಾಪುರದಲ್ಲಿ ಜಿಗಜಿಣಗಿಯನ್ನು ಮಣಿಸುವುದು ಅಷ್ಟು ಸಲೀಸಲ್ಲ, ಕಾಂಗ್ರೆಸ್ ಇಲ್ಲಿ ಪ್ರಕಾಶ್ ರಾಥೋಡ್‌ರನ್ನು ಅಖಾಡಕ್ಕಿಳಿಸಿದೆ. ಇಲ್ಲಿ ಸರಿಸಮನಾದ ಹಣಾಹಣಿಯಿದೆ. ಹಾಗೆ ಬಾಗಲಕೋಟೆಯಲ್ಲೂ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ನೇರಾನೇರ ಕಾಳಗವಿದೆ.

ಬಿಜೆಪಿಯ ಗದ್ದಿಗೌಡರ್ ಈ ಬಾರಿ ಸರ್ನಾಯಕ್ ವಿರುದ್ಧ ನೀರು ಕುಡಿಯಲೇಬೇಕು. ಬೀದರ್ ಮತ್ತು ಗುಲಬರ್ಗಾದಲ್ಲಿ ಖರ್ಗೆ ಮತ್ತು ಧರ್ಮಸಿಂಗ್ ಜೋಡಿಗೆ ಅಂಥಾ ತಲೆ ನೋವಿದ್ದಂತಿಲ್ಲ. ಧರ್ಮಸಿಂಗ್ ವಿರುದ್ಧ ಬಂಡೆಪ್ಪ ಕಾಶೆಂಪೂರ್ ಜೆಡಿಎಸ್‌ನ ಬಾವುಟ ಹಾರಿಸುವುದು ಅಷ್ಟು ಸಲೀಸಲ್ಲ. ಹಾವೇರಿಯಲ್ಲಿ ಉದಾಸಿ ಮಗನ ವಿರುದ್ಧ ಕಾಂಗ್ರೆಸ್ ಡಿ.ಆರ್. ಪಾಟೀಲರನ್ನು ಇಳಿಸಿದರಷ್ಟೇ ಲಾಭ. ಮುಸ್ಲಿಂ ಅಭ್ಯರ್ಥಿ ಹಾಕಿದ್ದರ ಲಾಭ ಬಿಜೆಪಿಗೇ ಹೆಚ್ಚು. ಬಳ್ಳಾರಿಯಲ್ಲಿ ಈ ಬಾರಿ ಬಿಜೆಪಿ ಆಟವಾಗಲಿ, ಶ್ರೀರಾಮುಲು ಕೈಚಳಕವಾಗಲಿ ಕಷ್ಟವೆ. ಏಕೆಂದರೆ ಬಿಜೆಪಿ ಅಧಿಕಾರದಲ್ಲಿದ್ದಾಗಲೇ ಕಾಂಗ್ರೆಸ್ ಅಭ್ಯರ್ಥಿ ಹನುಮಂತಪ್ಪ ಕೇವಲ 2245 ಮತಗಳಿಂದ ಸೋತಿದ್ದು.

ಈಗ ಪರಿಸ್ಥಿತಿ ಉಲ್ಟಾ. ಕೇವಲ ಬಳ್ಳಾರಿಯಲ್ಲಷ್ಟೇ ಅಲ್ಲ; ಇಡೀ ರಾಜ್ಯದ ಮಟ್ಟಿಗೆ ಲೆಕ್ಕ ಹಾಕಿದರೂ ಬಿಜೆಪಿಯ ಪಾಲಿಗೆ ಮೋದಿ ಅಲೆ ಕೂಡ ಪ್ರಯೋಜನಕ್ಕೆ ಬರುತ್ತಿಲ್ಲ. ಕಾಂಗ್ರೆಸ್ ಹದಿನೈದಕ್ಕಿಂತಲೂ ಕಮ್ಮಿಯಿಲ್ಲದಂತೆ ಮತ್ತು ಹೆಚ್ಚೆಂದರೆ 18ನ್ನು ಮುಟ್ಟಿದರೂ ಅಚ್ಚರಿಯಿಲ್ಲ. ಬಿಜೆಪಿ ಎಂಟು ಅಥವಾ ಹತ್ತಕ್ಕಿಳಿಯಬಹುದು. ಪ್ರಶ್ನೆಯೆಂದರೆ ಜೆಡಿಎಸ್ ತನ್ನ ಪಾಲಿನ ಮೂರನ್ನಾದರೂ ಉಳಿಸಿಕೊಳ್ಳುತ್ತಾ ಅಥವಾ ಐದಕ್ಕೇರುತ್ತಾ?

● ರಾ.ಸೋಮನಾಥ್

ತುಮಕೂರು: ಒಕ್ಕಲಿಗರು ಪ್ರಬಲರಾಗಿದ್ದರೂ ಗೆಲ್ಲುವ ಲಿಂಗಾಯತರು

ಯಾವುದೇ ಕ್ಷೇತ್ರದ ಚುನಾವಣೆಯಲ್ಲಿ ಬಹುಸಂಖ್ಯಾತ ಜಾತಿಯ ಅಭ್ಯರ್ಥಿ ಗೆದ್ದು ಬರುವುದು ಸಹಜ. ವಿಧಾನಸಭಾ ಚುನಾವಣೆ ಫಲಿತಾಂಶಗಳೇನೇ ಇರಲಿ, ಲೋಕಸಭಾ ಕ್ಷೇತ್ರದ ಚುನಾವಣೆಯೇ ತುಮಕೂರಿನಲ್ಲಿ ಭಿನ್ನ. ಈ ಜಿಲ್ಲೆಯಲ್ಲಿ ಬಹುಸಂಖ್ಯಾತ ಮತದಾರರನ್ನು ಹೊಂದಿರುವ ಒಕ್ಕಲಿಗ ಜನಾಂಗದಿಂದ ಗೆದ್ದು ಬಂದಿರುವ ವ್ಯಕ್ತಿ ಒಬ್ಬರೇ. ಅವರು ಲಕ್ಕಪ್ಪ. ಸಂಖ್ಯೆಯಲ್ಲಿ ಎರಡನೇ ಸ್ಥಾನದಲ್ಲಿರುವ ಲಿಂಗಾಯತರೇ ಹೆಚ್ಚಿನ ಬಾರಿ ಸಂಸದರಾಗಿದ್ದಾರೆ.


ಈ ಹಿನ್ನೆಲೆಯಲ್ಲೇ ಬೆಂಗಳೂರಿನ ಸೆರಗಿನಂತಿರುವ ತುಮಕೂರು ಲೋಕಸಭಾ ಕ್ಷೇತ್ರ ದಿನದಿಂದ ದಿನಕ್ಕೆ ಕುತೂಹಲವನ್ನು ಹೆಚ್ಚಿಸುತ್ತಲೇ ಇದೆ. ಇದಕ್ಕೆ ಕಾರಣವಾಗಿರುವುದು 'ಬಾಯಿ ಹರುಕ ಎಂಪಿ ಬಸವರಾಜ್'!

ಬಿಜೆಪಿ ಕೇಂದ್ರಿಯ ಚುನಾವಣಾ ಸಮಿತಿ ಕೊನೆಗೂ ತುಮಕೂರಿಗೆ ತನ್ನ ಪಕ್ಷದ ಅಭ್ಯರ್ಥಿ ಯಾರು ಎಂಬುದನ್ನು ಖಚಿತಪಡಿಸಿದೆ. ಹಾಗೇ ನೋಡಿದರೆ ತುಮಕೂರು ಜಿಲ್ಲಾ ಬಿಜೆಪಿ ಘಟಕ ನಂದೀಶ್ ಎಂಬ ಲಿಂಗಾಯತ ಜನಾಂಗದವರನ್ನೇ ಶಿಫಾರಸ್ಸು ಮಾಡಿತ್ತು. ಆದರೆ ಬುಧವಾರ ರಾತ್ರಿ ಜಿ.ಎಸ್.ಬಸವರಾಜ್‌ಗೆ ಟಿಕೆಟ್ ಕೊಡಬೇಕೆಂದು ಯಡಿಯೂರಪ್ಪ, ಬಸವರಾಜ್ ಬೊಮ್ಮಾಯಿ ಮತ್ತು ವಿ.ಸೋಮಣ್ಣ ಪಟ್ಟು ಹಿಡಿದು ಕೂತಿದ್ದರಿಂದ ಚುನಾವಣಾ ಸಮಿತಿ ಬಸವರಾಜು ಹೆಸರನ್ನು ಅಂತಿಮಗೊಳಿಸಿದೆ.


ಈ ಜಿ.ಎಸ್.ಬಸವರಾಜ್ ಹೆಸರೆತ್ತಿದರೇ ಸಾಕು ಬಿಜೆಪಿಯ ಪಿತೃ ಸ್ಥಾನದಲ್ಲಿರುವ ಆರೆಸ್ಸೆಸ್‌ನ ಚಡ್ಡಿಗಳಲ್ಲದೆ ಬಿಜೆಪಿಯ ಕಟ್ಟಾ ಬೆಂಬಲಿಗರೂ ಕೆರಳುತ್ತಾರೆ. ಒಂದೆಡೆ ಚಡ್ಡಿಗಳ




ಬಸವರಾಜ್



ಮುದ್ದ ಹನುಮೇಗೌಡ



ಸೊಗಡು ಶಿವಣ್ಣ



ಎ. ಕೃಷ್ಣಪ್ಪ

ಆಕ್ರೋಶ ಮತ್ತೊಂದೆಡೆ ಬಸವರಾಜು ಪರವಾದ ಯಡಿಯೂರಪ್ಪನ ಒತ್ತಡ... ಚುನಾವಣೆಯಲ್ಲಿ ಇದೆಲ್ಲ ಎಂತಹ ಪರಿಣಾಮ ಬೀರುತ್ತವೆ ಎಂದು ಹೇಳಲಾಗುವುದಿಲ್ಲ. ಇದೆಲ್ಲದರೊಂದಿಗೆ ಕೊನೆ ಗಳಿಗೆಯವರೆಗೂ ಅಖಾಡದಲ್ಲಿದ್ದ ನಂದೀಶ್ ಮತ್ತು ಬಸವರಾಜುರವರ ಬದ್ಧ ವೈರಿ ಸೊಗಡು ಶಿವಣ್ಣ ತಟಸ್ಥರಾದರೆ ಬಿಜೆಪಿಗೆ ಗಲುವು ಇಲ್ಲಿ ಕಷ್ಟ.

ಕಾಂಗ್ರೆಸ್ ಪಕ್ಷ ಇತರೇ ಆಕಾಂಕ್ಷಿಗಳ ಮನ ಒಲಿಸಿ ಮುದ್ದ ಹನುಮೇಗೌಡರಿಗೆ ಟಿಕೆಟ್ ಘೋಷಿಸಿದೆ. ಹೆಸರೇ ಸೂಚಿಸುವಂತೆ ಮುದ್ದ ಹನುಮೇಗೌಡರು ಜಾತಿಯಿಂದ ಒಕ್ಕಲಿಗರು. ಕ್ಷೇತ್ರದ ಬಹು ಸಂಖ್ಯಾತರಾದ ಒಕ್ಕಲಿಗರಿಗೆ ಇವರ ಬಗ್ಗೆ ಸಹಾನುಭೂತಿಯಿದೆ. ಲಕ್ಕಪ್ಪನವರನ್ನು ಬಿಟ್ಟರೆ ತಮ್ಮ ಜನಾಂಗದಿಂದ ಇದುವರೆವಿಗೆ ಯಾರೂ ಸಂಸದರಾಗಿ ಆಯ್ಕೆಯಾಗಿಲ್ಲವೆಂಬ ಕೊರಗೂ ಒಕ್ಕಲಿಗರಲ್ಲಿದೆ. ಮೂಲತಃ ಸಂಭಾವಿತರಾದ ಮುದ್ದಹನುಮೇಗೌಡರ ಬಗ್ಗೆ ಸರ್ಕಾರಿ ನೌಕರರಿಗೂ ಗೌರವವಿದೆ. ಜೊತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಬೆನ್ನಿಗೆ ನಿಂತಿರುವ ಕುರುಬರೂ ಇವರಿಗೆ ಮತ ಹಾಕುವುದರಲ್ಲಿ ಯಾವುದೇ ಅನುಮಾನವಿಲ್ಲ.

ಮೇಲ್ನೋಟಕ್ಕೆ ಮುದ್ದಹನುಮೇಗೌಡರಿಗೆ ಎಲ್ಲವು ಅನುಕೂಲಕರವಾಗಿದೆ ಎಂದೆನಿಸುತ್ತದೆ. ಆದರೆ ಜೆಡಿಎಸ್‌ನ ಪಿತಾಮಹ ದೇವೇಗೌಡರ ಅಂತಿಮ ಗಳಿಗೆಯ ಕಾರ್ಯತಂತ್ರ, ಆ ಪಕ್ಷದ ಅಭ್ಯರ್ಥಿ ಎ.ಕೃಷ್ಣಪ್ಪನವರ ಅಪಾರ ಅನುಭವ, ಅವರ ಹಿಂದೆ ನಿಲ್ಲಬಹುದಾದ ಯಾದವ ಹಿಂದುಳಿದ ಮತದಾರರ ಸಂಖ್ಯೆ ಜೆಡಿಎಸ್ ಪಾಲಿಗೆ ವರದಾನವಾಗುವ ಸಾಧ್ಯತೆಗಳಿವೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಈ ಜಿಲ್ಲೆಯಿಂದ ನಾಲ್ಕು ಸ್ಥಾನಗಳನ್ನು ತನ್ನದಾಗಿಸಿಕೊಂಡಿದೆ. ಪ್ರಾರಂಭದಲ್ಲಿ ಮಾಜಿ ಸಚಿವ ಚೆನ್ನಿಗಪ್ಪನವರಿಂದ ಒಂದಷ್ಟು ಅಪಸ್ವರ ಕೇಳಿಬಂದಿತ್ತಾದರೂ ಈಗ ಅದನ್ನು ನಿವಾರಿಸ... ಲಾಗಿದೆ. ಒಕ್ಕಲಿಗರು ಅಭ್ಯರ್ಥಿಯನ್ನು ಮರೆತು ದೇವೇಗೌಡರಿ... ಗಾಗಿ ಓಟ್ ಮಾಡಿದರೆ, ಜೊತೆಗೆ ಗಣನೀಯ ಸಂಖ್ಯೆಯಲ್ಲಿ... ರುವ ಹಿಂದುಳಿದವರ ಮತಗಳನ್ನು ಸೆಳೆಯುವಲ್ಲಿ ಎ.ಕೃಷ್ಣ... ಯಶಸ್ವಿಯಾದರೆ ಈ ಕ್ಷೇತ್ರ ಜೆಡಿಎಸ್ ಪಾಲಾಗಲಿದೆ.

● ಬಿ.ನಾರಾಯಣ...


ಹುಬ್ಬಳ್ಳಿ: ಚೆಡ್ಡಿ ಸಾಹುಕಾರನ ಶಿಷ್ಯ ವಿನೋದನ ಪುಂಡಾಟಿಕೆ

ವಾಯುವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ತನ್ನ ಅಧ್ಯಕ್ಷಗಿರಿ ಅವಧಿಯಲ್ಲಿ ನುಂಗಿ ನೀರು ಕುಡಿದಿರುವ ಮಲ್ಲಿಕಾರ್ಜುನ ಸಾಹುಕಾರ ಎಂಬ ಚೆಡ್ಡಿ ಸಿದ್ಧಾಂತಿಯ ಖಾಸಾ ಚೇಲಾ ವಿನೋದ ರೇವಣಕರನಿಗೆ ಗೂಸಾ ಬೀಳುವ ಕಾಲ ಹತ್ತಿರ ಬಂದಿದೆ. ರೇವಣಕರನ ಕಚ್ಚೆ ಹರಕುತನಕ್ಕೆ ಹತ್ತಾರು ಹೆಣ್ಣು ಮಕ್ಕಳು ಬೀದಿ ಪಾಲಾಗಿದ್ದು ಹಳೆಯ ಸ್ಟೋರಿಯಾದರೆ ಈಗ ಸಾಹುಕಾರನ ಹೆಸರಲ್ಲಿ ನಡೆಸುವ ಲ್ಯಾಂಡ್ ದಂಧೆಯಲ್ಲಿ ಮುಗ್ಧ ಜನರಿಗೆ ಪಂಗನಾಮ ಹಾಕುವ ಕಾಯಕವನ್ನು ನಿಯತ್ತಾಗಿ ನಡೆಸಿದ್ದಾನೆ.

ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರರ ಸಹೋದರ ಪ್ರದೀಪ ಶೆಟ್ಟರ ಜನ್ಮ ನೀಡಿರುವ ಲ್ಯಾಂಡ್ ಮಾಫಿಯಾಕ್ಕೆ ರೆಕ್ಕೆಪುಕ್ಕ ಬರುವಂತೆ ಮಾಡಿದ್ದು ಇದೇ ಮಲ್ಲಿಕಾರ್ಜುನ ಸಾಹುಕಾರ. ಪ್ರದೀಪ ಶೆಟ್ಟರರ ಬೇನಾಮಿ ವಾರಸುದಾರನಾಗಿರುವ ಸಾಹುಕಾರನ ಎಲ್ಲ ದಂಧೆಗಳನ್ನು







ನಡೆಸುವವನೇ ಸರಾಪ ವಿನೋದ ಅಲಿಯಾಸ್ ಉಪ್ಪಿನಕಾಯಿ ವಿನ್ಯಾ. ಸ್ವಂತ ಒಡಹುಟ್ಟಿದವರಿಗೂ ಮೋಸ ಮಾಡಿದ ಈ ಭೂಪ ಸದ್ಯ ಅವಳಿ ನಗರದಲ್ಲಿ ತನ್ನ ಕರಾಮತ್ತು ತೋರಿಸುತ್ತಿದ್ದಾನೆ.

ಹುಬ್ಬಳ್ಳಿ ತಾಲೂಕಿನ ಶೆರೆವಾಡ ಗ್ರಾಮದವನಾದ ವಿನೋದ ರೇವಣಕರ ಹುಟ್ಟಾ ಶ್ರೀಮಂತನಲ್ಲ. ನಾಲ್ಕು ಜನ ಸಹೋದರರಲ್ಲಿ ಈತನನ್ನು ಇವನ ಹಿರಿಯಣ್ಣ ಅರುಣ ಎಂಬಾತನೆ ಸಾಕಿ ಬೆಳೆಸಿದ್ದ. ಆದರೆ ಅಣ್ಣನಲ್ಲಿದ್ದ ಒಂದೇ ಒಂದು ಒಳ್ಳೆಯ ಗುಣ ಕೂಡ ಈ ತಮ್ಮನಿಗೆ ಬರಲಿಲ್ಲ. ಬುದ್ಧಿ ಬಂದಾಗಿನಿಂದ ಬರೀ ಅಪರಾ ತಪರಾ ಕೆಲಸ ಮಾಡುವುದನ್ನೇ ಕಲಿತಿರುವ ವಿನೋದ ಸದ್ಯ ಹುಬ್ಬಳ್ಳಿಯಲ್ಲಿ ಬಿಜೆಪಿ ಲೀಡರ್.

ಕಟ್ಕೊಂಡೋಳಿಗೂ ಚೀಟ್ ಮಾಡಿದ

ಈತ ಮದುವೆಮಾಡಿಕೊಂಡಿದ್ದವಳಿಗೂ ಮೋಸ ಮಾಡುವ ಗಿರಾಕಿ. ಖಾಸ ಅತ್ತಿಗೆಯ ತಂಗಿ ಅರ್ಚನ ಮೇಲೆ ವಿನೋದ ಕಣ್ಣು ಹಾಕಿದ. ಆಗಾಗ ಅಕ್ಕನನ್ನು ಭೇಟಿಯಾಗಲು ಕಾರವಾರದಿಂದ ಬರುತ್ತಿದ್ದ ಅರ್ಚನಾ ಎಂಬ ಮುಗ್ಧ ಹುಡುಗಿಯನ್ನು ತನ್ನ ಬಲೆಗೆ ಬೀಳಿಸಿಕೊಂಡ. ಆಮೇಲೆ ತನ್ನ ಸ್ನೇಹಿತರಾದ ಯಶ್ವಂತ ಪವಾರ್, ಅರುಣ ರೇವಣಕರ, ಶ್ರೀನಿವಾಸ ಚೌಗಳೆ ಹಾಗೂ ಆನಂದ ಸಮ್ನೇಕರ ಎಂಬ ಪುಢಾರಿಗಳ ಬೆಂಬಲದೊಂದಿಗೆ ಆಕೆಯನ್ನು ಧರ್ಮಸ್ಥಳಕ್ಕೆ ಕರೆದೊಯ್ದು ಮದುವೆಯಾದ.

ಅಣ್ಣ ಅತ್ತಿಗೆ ಯಾರಿಗೂ ತಿಳಿಯದಂತೆ ಅರ್ಚನಾಳನ್ನು ಮದುವೆಯಾದ ವಿನೋದ ಸ್ವಲ್ಪ ತಿಂಗಳಲ್ಲೇ ಆಕೆಯ ಗರ್ಭ ತುಂಬಿಸಿದ. ಅಷ್ಟು ಹೊತ್ತಿಗೆ ತನ್ನ ತೀಟೆಯನ್ನು ತೀರಿಸಿಕೊಂಡಿದ್ದ ವಿನೋದನಿಗೆ ಅರ್ಚನಾ ಬೇಡವಾದಳು. ಅವಳಿಗೆ ಎಲ್ಲಿಲ್ಲದ ಚಿತ್ರ ಹಿಂಸೆ ನೀಡಲಾರಂಭಿಸಿದ. ಮಾನಸಿಕವಾಗಿ ಮತ್ತು ದೈಹಿಕವಾಗಿ ಜರ್ಜರಿತಳಾಗಿದ್ದ ಗರ್ಭಿಣಿ ಅರ್ಚನಾಳನ್ನು ಒಂದು ಮಧ್ಯರಾತ್ರಿ ಮನೆಯಿಂದ ಆಚೆ ದಬ್ಬಿದ.

ಅರ್ಚನಾ ನ್ಯಾಯಕ್ಕಾಗಿ ಅವರಿವರತ್ತ ಬೇಡಲಾರಂಭಿಸಿದಳು. ಆಗ ದೈವಜ್ಞ ಸಮಾಜದ ಅಧ್ಯಕ್ಷರಾಗಿದ್ದ ಮನ್ಮಥ ಶೇಟ್ ರಾಜಿ ಪಂಚಾಯ್ತಿ ಮಾಡಲು ಮುಂದಾದರು. ಆದರೆ ವಿನೋದ ಮಾತ್ರ ಯಾವ ಕಾರಣಕ್ಕೂ ಆಕೆಯನ್ನು ವಾಪಸ್ ಕರೆಸಿಕೊಳ್ಳಲು ಸಿದ್ಧನಿರಲಿಲ್ಲ. ಅರ್ಚನಾಳಿಗೆ ಒಂದು ಲಕ್ಷ ರೂಪಾಯಿಗಳನ್ನು ಪರಿಹಾರವಾಗಿ ಕೊಡುವುದಾಗಿ ಒಪ್ಪಿಕೊಂಡ. ಆದರೆ ಈತ ಅದೆಂತಹ ಪಾತಕಿ ಎಂದರೆ ಕೊನೆಗೂ ಆಕೆಗೆ ಬಿಡಿಗಾಸನ್ನೂ ಕೊಡದೆ ಬೀದಿಪಾಲು ಮಾಡಿದ.

ಆತ್ಮಹತ್ಯೆಗೆ ಶರಣಾದ ಅಣ್ಣ, ಅತ್ತಿಗೆ

ವಿನೋದನ ಭಾನಗಡಿಗಳಿಂದ ರೋಸಿ ಹೋಗಿದ್ದ ಈತನ ಅಣ್ಣ ಅರುಣ ಹುಬ್ಬಳ್ಳಿಯಿಂದ ಬೆಳಗಾಂವಿಗೆ ಶಿಫ್ಟ್ ಆಗಿ ಅಲ್ಲಿಯ ಶಿವಾಜಿನಗರದಲ್ಲಿ ಬಂಗಾರದ ಆಭರಣಗಳನ್ನು ತಯಾರು ಮಾಡುವ ಅಂಗಡಿಯೊಂದನ್ನು ತೆರೆದು ಜೀವನ ಸಾಗಿಸುತ್ತಿದ್ದರು. ಆದರೆ ಯಾವಾಗ ವಿನೋದ ತನ್ನ ತಂಗಿ ಅರ್ಚನಾಳನ್ನು ಮನೆಯಿಂದ ಹೊರದಬ್ಬಿ ಅವಳಿಗೆ ಮೋಸ ಮಾಡಿದ ಸುದ್ದಿ ಅತ್ತಿಗೆ ವೈಶಾಲಿಗೆ ಗೊತ್ತಾಯಿತೋ ಆಕೆ ತತ್ತರಿಸಿಹೋದರು. ತನ್ನಿಂದಲೇ ತನ್ನ ತಂಗಿಯ ಜೀವನ ಬೀದಿಗೆ ಬತ್ತು ಎಂದು ಮನನೊಂದ ವೈಶಾಲಿ ಆತ್ಮಹತ್ಯೆಗೆ ಶರಣಾದರು. ಸಹೋದರ ವಿನೋದನಿಂದಾಗಿ ತಾವು ಉಳಿಸಿಕೊಂಡಿದ್ದ ಮರ್ಯಾದೆ ಮೂರು ಕಾಸಿಗೆ ಹರಾಜಾಯಿತು ಎಂದು ಅಣ್ಣ ಅರುಣ ಕೂಡ ಆತ್ಮಹತ್ಯೆ ಮಾಡಿಕೊಂಡುಬಿಟ್ಟರು.

ಸ್ವಂತ ಅಣ್ಣ ಮತ್ತು ಅತ್ತಿಗೆ ಆತ್ಮಹತ್ಯೆ ಮಾಡಿಕೊಂಡಿದ್ದರೂ ವಿನೋದ ಅದರಲ್ಲೂ ಲಾಭ ಮಾಡಿಕೊಳ್ಳಲು ಸ್ಕೆಚ್ ಹಾಕಿದ. ಬೆಳಗಾವಿಯ ಸರಾಫರು ಆಭರಣ ತಯಾರಿಸಲು ವಿನೋದನ ಅಣ್ಣ ಅರುಣನಿಗೆ ಸುಮಾರು ಎರಡೂವರೆ ಕೆ.ಜಿ ಬಂಗಾರವನ್ನು ಕೊಟ್ಟಿದ್ದರು. ಅರುಣನ ಸಾವಿನ ನಂತರ ಸರಾಫರು ಸಭೆ ಸೇರಿ ತಾವು ಕೊಟ್ಟಿದ್ದ ಬಂಗಾರವನ್ನು ವಾಪಾಸ್ ಕೊಡುವಂತೆ ವಿನೋದನನ್ನು ಕೇಳಿದರು. ಆದರೆ ವಿನೋದ ಮಾತ್ರ "ನೀವು ಯಾರಿಗೆ ಕೊಟ್ಟಿದ್ದರೋ ಅವನಿಂದಲೇ ಇಸಿದುಕೊಳ್ಳಿ" ಎಂದು ಸತ್ತ ಅಣ್ಣನ ಫೋಟೋ ತೋರಿಸಿ ಕೈ ಎತ್ತಿದ. ವಿಚಿತ್ರವೆಂದರೆ ಇದಾದ ನಂತರ ಹುಬ್ಬಳ್ಳಿಯ ಗೌಳಿಗಲ್ಲಿಯಲ್ಲಿ 'ಮಣಿಕಂಠ ಜ್ಯುವೆಲರಿ' ಎಂಬ ಅಂಗಡಿಯನ್ನು ವಿನೋದ ಪ್ರಾರಂಭಿಸಿದ!

ಈಗ ಈ ವಿನೋದ ದೈವಜ್ಞ ಸಮಾಜದ ಬ್ಯಾಂಕಿನಲ್ಲಿ ನಿರ್ದೇಶಕನಾಗಿ ನೇಮಕಗೊಂಡು ಸಾಚಾನಂತೆ ಪೋಜು ಕೊಡುತ್ತಿದ್ದಾನೆ. ಸದ್ಯ ಮತ್ತೊಂದು ಮದುವೆ ಮಾಡಿಕೊಂಡಿರುವ ವಿನೋದ ಆಕೆಯ ಕೈಗೂ ಯಾವಾಗ ಚಿಪ್ಪು ಕೊಡುತ್ತಾನೋ...

ಸಾಹುಕಾರನ ಶಿಷ್ಯ

ಮಲ್ಲಿಕಾರ್ಜುನ ಸಾಹುಕಾರನ ಲ್ಯಾಂಡ್ ಮಾಫಿಯಾ ದಂಧೆಯನ್ನು ನಿಭಾಯಿಸುತ್ತಿರುವವನೇ ಈ ವಿನೋದ. ಅದರೆ ಅದನ್ನೂ ಆತ ನೆಟ್ಟಗೆ ಮಾಡುತ್ತಿಲ್ಲ. ಹುಬ್ಬಳ್ಳಿಯ ಕೇಶ್ವಾಪುರ, ಸುಳ್ಳ ರಸ್ತೆ ಕಲಘಟಗಿ ರಸ್ತೆ ಜಿ.ಪಿ. ರಸ್ತೆ



ವಿನೋದ್

ಹಾಗೂ ನೆಹರೂ ಮೈದಾನದ ಸುತ್ತಮುತ್ತ ಇವನಿಂ... ಮೋಸಹೋದವರ ಸಂಖ್ಯೆ ನೂರರ ಗಡಿದಾಟುತ್ತದೆ.

'ಇಬ್ಬರ ಜಗಳದಲ್ಲಿ ಮೂರನೆಯವರಿಗೆ ಲಾಭ ಎಂಬಂ... ಈ ವಿನೋದ ಜನರ ನಡುವೆ ಜಗಳ ಸೃಷ್ಟಿಸಿ ಅದನ್ನು ಸರಿಮಾಡುವ ನೆಪದಲ್ಲಿ ಹಣ ಪೀಕುತ್ತಾನೆ. ಅಧಿಕಾರಿಗಳನ್ನು ಹೆದರಿಸಿ ವಸೂಲಿ ಮಾಡುವುದು, ಟ್ರಾನ್ಸ್‌ಫರ್ ದಂ... ಈತನ ನಿತ್ಯ ಕಸುಬಾಗಿದೆ. ಇದೆಲ್ಲದರಿಂದಾಗಿ ಈ ಹಿಂ... ಶ್ರೀಮಂತನಾಗಿರದಿದ್ದ ವಿನೋದ ಈಗ ಕೋಟಿ ಲೆಕ್ಕದ... ತೂಗುತ್ತಾನೆ.

ಈತ ತನ್ನ ಎಲ್ಲಾ ಭಾನಗಡಿ ಕೆಲಸಗಳಿಗೆ ಮಲ್ಲಿಕಾರ್ಜುನ ಸಾಹುಕಾರನ ಹೆಸರು ಬಳಸಿಕೊಳ್ಳುತ್ತಾನೆ. ಅಷ್ಟೇ ಅ... ಈಗ ಅದೇ ಸಾಹುಕಾರನಿಗೇ ಬತ್ತಿ ಇಡುವ ಸ್ಕೆ... ಹಾಕಿದ್ದಾನೆ. ಪ್ರದೀಪ ಶೆಟ್ಟರನ ಮುಂದೆ ಮಲ್ಲಿಕಾರ್ಜುನ ಸಾಹುಕಾರನ ವಿರುದ್ಧ ಚಾಡಿ ಹೇಳಿ ತನ್ನ ಬೇ... ಬೇಯಿಸಿಕೊಳ್ಳಲು ಶುರುವಿಟ್ಟಿದ್ದಾನೆ.


ವಿನೋದದ ದಂಧೆಗಳನ್ನು ಕಂಡೂ ಸುಮ್ಮನಿರು... ಸಾಹುಕಾರ ತನ್ನ ಅಂಗಳದಿಂದ ಈತನನ್ನು ಆದಷ್ಟು ಬೇ... ಆಚೆ ದಬ್ಬದಿದ್ದರೆ, ಒಂದು ದಿನ ಅವನಿಗೂ ಸೂಯಿಸೈಡ್ ಮಾಡಿಕೊಳ್ಳುವಂತಹ ಸಂದರ್ಭ ತಂದಿಟ್ಟರೂ ಅಚ್ಚರಿ ಇಲ್ಲ.

"ಲೋಕಸಭಾ ಚುನಾವಣೆಯಲ್ಲಿ ನನ್ನಿಂದಲೇ ಬಿಜೆಪಿ... ರಾಜ್ಯಾಧ್ಯಕ್ಷ ಪ್ರಹ್ಲಾದ್ ಜೋಷಿ ಗೆಲ್ಲುವುದು" ಎಂ... ಹೇಳಿಕೊಂಡು ತಿರುಗುತ್ತಿರುವ ವಿನೋದನ ಪುಂಡಾಟಿಕೆಗ... ಚೆಡ್ಡಿಗಳಿಗೆ ಮುಳುವಾಗಲಿವೆ. ಈತ ಮಾಡಿದ ಒಂದೊಂ... ಭಾನಗಡಿ ದಂಧೆಗಳನ್ನೂ ಪಟ್ಟಿ ಮಾಡಿಟ್ಟುಕೊಂಡಿರು... ಹುಬ್ಬಳ್ಳಿಯ ಜನ ಚೆಡ್ಡಿಗಳು ಓಟು ಕೇಳಲು ಬಂದ... ಅವರಿಗೆ ಇಕ್ಕಿ ಕಳಿಸುವ ಇರಾದೆಯಲ್ಲಿದ್ದಾರೆ.

● ವರದಿಗಾ...

ಹು-ಧಾ ಮೇಯರ್ ಚುನಾವಣೆ


ಮಗನಿಗಾಗಿ ಪಕ್ಷವನ್ನೇ ಅಡವಿಟ್ಟ ಹೊರಟ್ಟಿ




ಜೆಡಿಎಸ್‌ನ 'ಪುತ್ರ ವ್ಯಾಮೋಹ'ದ ಪರಂಪರೆ ...ಸದೇನೂ ಅಲ್ಲ. ಆದರೆ ಈ ಬಾರಿ ಪಕ್ಷಕ್ಕೆ 'ಸನ್‌ಸ್ಟ್ರೋಕ್' ...ಡಾಯಿಸಿರೋದು ಬಸವರಾಜ್ ಹೊರಟ್ಟಿ ಸಾಹೇಬರು. ...ನ್ನು ಬಯಲು ಮಾಡಿದ್ದು ಈಚೆಗೆ ನಡೆದ ...ಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಮೇಯರ್ ...ನಾವಣೆ. ಮಗನ ರಾಜಕೀಯ ಭವಿಷ್ಯಕ್ಕಾಗಿ ಮಾಜಿ ...ವ ಬಸವರಾಜ್ ಹೊರಟ್ಟಿ ಜೆಡಿಎಸ್ ಅನ್ನು ಇಡಿಯಾಗಿ









...ಕ್ಕೆ ಅಡವಿಟ್ಟು ತಮ್ಮ ಒಳಒಪ್ಪಂದದ ರಾಜಕಾರಣವನ್ನು ...ದುವರೆಸಿದ್ದಾರೆ.

...ಲೋಕಸಭಾ ಚುನಾವಣೆಗೆ ಸಜ್ಜಾಗುತ್ತಿರುವ ...ಗೌಡರು ಅತ್ತ ತೃತೀಯ ರಂಗದ ರಚನೆಗೆ ತಾಲೀಮು ...ದ್ದರೆ ಇತ್ತ ಅವರದೇ ಪಕ್ಷದ ಮುಖಂಡ ಬಸವರಾಜ್ ...ರಟ್ಟಿ ಕೋಮುವಾದಿ ಬಿಜೆಪಿಯನ್ನು ಬಲವಾಗಿ ಅಪ್ಪಿ ...ಮಾಡುತ್ತಿದ್ದಾರೆ. ಇಂತಹ ಒಳಒಪ್ಪಂದಗಳಿಂದಲೇ ಶಿಕ್ಷಕ ...ದ ಎಂಎಲ್‌ಸಿ ಸ್ಥಾನಕ್ಕೆ ಫೆವಿಕಾಲ್ ಅಂಟಿಸಿಕೊಂಡಂತೆ ಕೂತಿರುವ ಬಸವರಾಜ್ ಹೊರಟ್ಟಿಗೆ ತಾನು ರಾಜಕೀಯ ನಿವೃತ್ತಿ ಹೊಂದುವುದಕ್ಕೂ ಮೊದಲು ಆ ಸ್ಥಾನಕ್ಕೆ ತನ್ನ ಮಗ ಶಿಕ್ಷಣ ಉದ್ಯಮಿ ವಸಂತ್ ಹೊರಟ್ಟಿಯನ್ನು ಉತ್ತರಾಧಿಕಾರಿಯನ್ನಾಗಿಸಬೇಕೆಂಬ ಬಯಕೆ ಇರುವುದು ರಹಸ್ಯವೇನಲ್ಲ. ಅದನ್ನು ಈಡೇರಿಸಿಕೊಳ್ಳುವ ಸಲುವಾಗಿ ಪಾಲಿಕೆಯ ಮೇಯರ್, ಉಪ ಮೇಯರ್ ಚುನಾವಣೆಯಲ್ಲಿ ತತ್ವಗಳನ್ನು ಗಾಳಿಗೆ ತೂರಿ ಜೆಡಿಎಸ್ ಸದಸ್ಯರ ಮತಗಳನ್ನು ಕಮಲಕ್ಕೆ ಕೊಡಿಸಿ ಧನ್ಯರಾಗಿದ್ದಾರೆ. ಇದಕ್ಕೆ ಪ್ರತಿಯಾಗಿ ಮುಂಬರುವ ಎಂಎಲ್‌ಸಿ ಚುನಾವಣೆಯಲ್ಲಿ ತಮ್ಮ ಮಗನ ವಿರುದ್ಧ ಡಮ್ಮಿ ಕ್ಯಾಂಡಿಡೇಟನ್ನು ನಿಲ್ಲಿಸಿ ಬಿಜೆಪಿ ಹೊರಟ್ಟಿಯವರ ಋಣ ತೀರಿಸಬೇಕೆಂಬುದು ಅಲಿಖಿತ ಅಗ್ರಿಮೆಂಟು!

ನಾಮಕಾವಸ್ಥೆ ಸಭೆ

ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಮೇಯರ್ ಹಾಗೂ ಉಪಮೇಯರ್ ಸ್ಥಾನಕ್ಕೆ ಚುನಾವಣೆ ನಡೆಯುವ ಸಂದರ್ಭದಲ್ಲಿ ಪಾಲಿಕೆಯಲ್ಲಿ ಎಂಟು ಜನ ಸದಸ್ಯರನ್ನು ಹೊಂದಿದ್ದ ಜೆಡಿಎಸ್ ನಿರ್ಣಾಯಕ ಪಾತ್ರ ವಹಿಸುವುದು ಖಚಿತವಾಗಿತ್ತು. ಪಾಲಿಕೆಯ ಒಟ್ಟು 67 ಸ್ಥಾನಗಳಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯಬೇಕೆಂದರೆ ತಲುಪಬೇಕಿದ್ದ ಸ್ಪಷ್ಟ ಬಹುಮತದ ಗಡಿ 35ನ್ನು ಯಾವ ಪಕ್ಷವೂ ಮುಟ್ಟಲಿಲ್ಲ. 33 ಸ್ಥಾನಗಳಲ್ಲಿ ಗೆಲ್ಲಲಷ್ಟೆ ಶಕ್ತವಾದ ಬಿಜೆಪಿ ಬಹುದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದರೆ ಕಾಂಗ್ರೆಸ್ 22, ಜೆಡಿಎಸ್ 8 ಸ್ಥಾನ ಗಳಿಸಿದ್ದವು. ಬಿಜೆಪಿ ಅಧಿಕಾರದ ಚುಕ್ಕಾಣಿ ಹಿಡಿಯಬೇಕೆಂದರೆ ಜೆಡಿಎಸ್‌ನ ಸಾಥ್ ಬೇಕೇ ಬೇಕು ಎನ್ನುವಂತಹ ಪರಿಸ್ಥಿತಿ. ಇದನ್ನೇ ನೆಪ ಮಾಡಿಕೊಂಡು ನಮಗೇ ಮೇಯರ್ ಸ್ಥಾನ ನೀಡಿದರೆ ಮಾತ್ರ ನಮ್ಮ ಬೆಂಬಲ ಎನ್ನುವ ಹೇಳಿಕೆ ಹೊರಡಿಸುತ್ತಿದ್ದ ಹೊರಟ್ಟಿ ಇದ್ದಕ್ಕಿದ್ದಂತೆ ಉಲ್ಟಾ ಹೊಡೆದು ಕಮಲದ ಕಡೆಗೆ ವಾಲಿದ್ದು ಪಕ್ಷದ ಕಾರ್ಯಕರ್ತರಿಗೆ ಅಚ್ಚರಿ ಮೂಡಿಸಿತ್ತು. ಹೊರಟ್ಟಿಯ ಈ ಹೊರಳಾಟದ ಹಿಂದೆ ಮಗನ ರಾಜಕೀಯ ಭವಿಷ್ಯದ ಚಿತಾವಣೆ ಇರುವುದು ಕಾರ್ಯಕರ್ತರ ಗಮನಕ್ಕೆ ಬರಲು ಬಹಳ ಸಮಯವೇನು ಬೇಕಾಗಲಿಲ್ಲ. ಇದನ್ನು ತೀವ್ರವಾಗಿ ವಿರೋಧಿಸಿದ್ದು ಇಸ್ಮಾಯಿಲ್ ತಮಟಗಾರ್ ಹಾಗೂ ಖಾತುನಬಿ ತಮಾಟಗಾರ್.

ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಅಲ್ಕೋಡ್ ಹನುಮಂತಪ್ಪ, ತರಬೇಜ ಸಂಶಿ, ಅಮೃತ ದೇಶಾಯಿ, ಪಿ.ಸಿ. ಸಿದ್ದನಗೌಡ ಹಾಗೂ ಬೇರೆ ಸದಸ್ಯರೊಂದಿಗೆ ಚರ್ಚಿಸದ ಹೊರಟ್ಟಿ ತಮ್ಮದೇ ಹಿಂಬಾಲಕರ ಸಭೆಯೊಂದನ್ನು ಕರೆದು ಕಮಲವನ್ನು ಬೆಂಬಲಿಸುವುದಾಗಿ ಘೋಷಿಸುತ್ತಿದ್ದಂತೆ ಸಭೆಯಲ್ಲಿದ್ದ ಇಸ್ಮಾಯಿಲ್ ತಮಟಗಾರ್, ಅಲ್ತಾಪ ಕಿತ್ತೂರ್, ಖಾತುನಬಿ ತಮಟಗಾರ್ ಮೊದಲಾದವರು ವಿರೋಧಿಸಿದ್ದರು. ಚಾಲಾಕಿ ಹೊರಟ್ಟಿ ಅಲ್ತಾಫ್ ಕಿತ್ತೂರನಿಗೆ ಲೋಕಸಭಾ ಚುನಾವಣಾ ಟಿಕೆಟ್‌ನ ಆಸೆ ತೋರಿಸಿ ಸುಮ್ಮನಾಗಿಸಿಬಿಟ್ಟಿದ್ದ. ಆದರೆ ಹೊರಟ್ಟಿಯ ಡಬಲ್‌ಗೇಮ್ ಕಂಡು ರೋಸಿಹೋಗಿದ್ದ ಇಸ್ಮಾಯಿಲ್ ತಮಟಗಾರ್ ಸುಮ್ಮನಾಗಲಿಲ್ಲ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ತಮಟಗಾರ್ ವಿರುದ್ಧ ಈಶ್ವರ ಸಾಣಿಕೊಪ್ಪನನ್ನು ನಿಲ್ಲಿಸಿ ತಮಟಗಾರ್ ಸೋಲುವಂತೆ ಮಾಡಿದ್ದೇ ಹೊರಟ್ಟಿಯೆಂಬ ಸಿಟ್ಟು ತಮಟಗಾರ್‌ನಿಗಿತ್ತು. ವಿರೋಧ ಹೆಚ್ಚಾಗುತ್ತಿದ್ದಂತೆ ಹೊರಟ್ಟಿಯ ಬಲಗೈ ಬಂಟ ಹಾಗೂ ಪಾಲಿಕೆ ಸದಸ್ಯ ರಾಜಣ್ಣ ಕೊರವಿ ಮತ್ತು ಶಾಸಕ ಎನ್.ಎಚ್. ಕೋನರೆಡ್ಡಿ ತಮಟಗಾರನನ್ನು ಬಾಯಿಗೆ ಬಂದಂತೆ ಬೈಯ್ದದ್ದಲ್ಲದೆ ಹಲ್ಲೆಗೂ ಮುಂದಾಗಿದ್ದರು. ಈ ಕುರಿತು ಪೊಲೀಸ್ ಠಾಣೆಯಲ್ಲಿ ಹೊರಟ್ಟಿ ವಿರುದ್ಧ ತಮಟಗಾರ್ ದೂರನ್ನೂ ದಾಖಲಿಸಿದ್ದಾನೆ. ಇಷ್ಟಾದರೂ ಪುತ್ರ ವ್ಯಾಮೋಹದ ಹಿಂದೆ ಬಿದ್ದ ಹೊರಟ್ಟಿ ಕೊನೆಗೂ ಕಮಲಕ್ಕೆ ಸಾಥ್ ನೀಡಿ ಪಾಲಿಕೆ ಚುಕ್ಕಾಣಿಯನ್ನು ಬಿಜೆಪಿಗೆ ಒಪ್ಪಿಸಿದ್ದಾನೆ. ಮತದಾನದ ವೇಳೆ ಖಾತೂನಬಿ ತಮಟಗಾರ್ ತಟಸ್ಥನಾಗಿ ಉಳಿದು ತಬುಸುಮ್ ಮನಿಯಾ ಗೈರುಹಾಜರಾಗುವ ಮೂಲಕ ಕೋಮುವಾದಿ ಸಖ್ಯಕ್ಕೆ ಅಲ್ಪಸಂಖ್ಯಾತರ ವಿರೋಧವಿದೆ ಎಂಬ ಅಸಮಾಧಾನ ಹೊರಹಾಕಿದರೂ ಪುತ್ರವ್ಯಾಮೋಹಿ ಹೊರಟ್ಟಿಗೆ ಅದು ಲೆಕ್ಕಕ್ಕೇ ಇದ್ದಂತಿಲ್ಲ.

ಚುನಾವಣಾ ಮರುದಿನವೇ ಹೊರಟ್ಟಿ ಗುಂಪಿನ ಶಾಸಕ ಎನ್.ಎಚ್. ಕೋನರೆಡ್ಡಿ ಹಾಗೂ ಪಾಲಿಕೆ ಸದಸ್ಯ ಕಮ್ ಜೆಡಿಎಸ್ ನಗರಾಧ್ಯಕ್ಷ ರಾಜಣ್ಣ ಕೊರವಿ ನೇತೃತ್ವದಲ್ಲಿ ಸಭೆ ಸೇರಿ ಇಸ್ಮಾಯಿಲ್ ತಮಟಗಾರನನ್ನು ಪಕ್ಷದ ಸದಸ್ಯತ್ವದಿಂದ ಉಚ್ಚಾಟಿಸುವ ನಿರ್ಣಯ ಕೈಗೊಳ್ಳಲಾಗಿದೆ. ಅಲ್ಲಿಗೆ ಹುಬ್ಬಳ್ಳಿ-ಧಾರವಾಡ ಜೆಡಿಎಸ್‌ನಲ್ಲಿ ಹೊರಟ್ಟಿಯೇ ಸರ್ವಾಧಿಕಾರಿ ಎಂಬ ಸಂದೇಶ ಸ್ಪಷ್ಟವಾದಂತಿದೆ. ಅವತ್ತಿನ ಸಭೆಯಲ್ಲಿ ಹಾಜರಿದ್ದ ಮಾಜಿ ಸಚಿವ ಪಿ.ಸಿ. ಸಿದ್ದನಗೌಡರ್ ಕೂಡಾ ಯಾವುದೇ ಅಭಿಪ್ರಾಯ ವ್ಯಕ್ತಪಡಿಸದೇ ಸುಮ್ಮನೆ ಕುಳಿತು ತಮಟಗಾರ್ ಅಮಾನತ್ತಿಗೆ ಸಮ್ಮತಿ ಸೂಚಿಸುವಷ್ಟು ವಾತಾವರಣ ಹೊರಟ್ಟಿಯ ಬಿಗಿತದಲ್ಲಿತ್ತು. ಹಾಗಂತ ತಮಟಗಾರ್ ಕೈಕಟ್ಟಿ ಕೂತಿಲ್ಲ. ಈಗಾಗಲೇ ಮಾಜಿ ಪ್ರಧಾನಿ ದೇವೇಗೌಡರಿಗೆ ದೂರು ಸಲ್ಲಿಸಿ 'ನನ್ನನ್ನು ಉಚ್ಚಾಟಿಸುವ ಅಧಿಕಾರ ಹೊರಟ್ಟಿಗಿಲ್ಲ' ಎಂದು ಬಹಿರಂಗವಾಗಿಯೇ ಸೆಡ್ಡು ಹೊಡೆದಿದ್ದಾನೆ. ಒಟ್ಟನಲ್ಲಿ ಈ ಬಾರಿ ಹೊರಟ್ಟಿಯಿಂದಾಗಿ ಮುಸ್ಲಿಮರು ಜೆಡಿಎಸ್‌ನಿಂದ ಮುನಿಸಿಕೊಳ್ಳುವಂತಾಗಿದೆ.


ಹೊರಟ್ಟಿಯ ಒಳ 'ಸ್ಯಾಂಪಲ್'ಗಳು

ಬಸವರಾಜ್ ಹೊರಟ್ಟಿ ಒಳಒಪ್ಪಂದ ರಾಜಕಾರಣದ ಸ್ಪೆಷಲಿಸ್ಟ್ ಇದ್ದಂತೆ. ಕಳೆದ ವರ್ಷ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಶೆಟ್ಟರ್ ವಿರುದ್ಧ ಜೆಡಿಎಸ್ ದುರ್ಬಲ ಅಭ್ಯರ್ಥಿ ನಿಲ್ಲಿಸುವಲ್ಲಿ ಹೊರಟ್ಟಿ ಪಾತ್ರ ಅಪಾರವಾದದ್ದು. ಅಲ್ಲದೆ ಧಾರವಾಡ ಶಹರದಿಂದ ಸ್ಪರ್ಧಿಸಿದ್ದ ತಮ್ಮದೇ ಪಕ್ಷದ ಇಸ್ಮಾಯಿಲ್ ತಮಟಗಾರ ಸೋಲುವಂತೆ ನೋಡಿಕೊಂಡ ಹೊರಟ್ಟಿ ಅಲ್ಲಿ ಬಿಜೆಪಿಯ ಅರವಿಂದ್ ಬೆಲ್ಲದ್‌ಗೆ ನೀಡಿದ ಸಹಾಯಹಸ್ತ ರಹಸ್ಯವಾಗೇನೂ ಉಳಿದಿಲ್ಲ.

ತನಗೆ ಬೇಕಾದವರ ಕ್ಷೇತ್ರಗಳಿಗೆ ಮಾತ್ರ ತೆರಳಿ ಪ್ರಚಾರ ಮಾಡಿದ್ದ ಹೊರಟ್ಟಿ ಕಲಘಟಗಿ ಕ್ಷೇತ್ರಕ್ಕೆ ಕಾಲಿಡಲೇ ಇಲ್ಲ. ಅಲ್ಲಿಂದ ಸ್ಪರ್ಧಿಸಿದ್ದ ಮಾಜಿ ಸಚಿವ ಪಿ.ಸಿ. ಸಿದ್ದನಗೌಡರ್ ಸೋಲಿಗೆ ಅದೇ ದೊಡ್ಡ ಕಾರಣವಾಗಿತ್ತು. ನವಲಗುಂದದಿಂದ ಸ್ಪರ್ಧಿಸಿದ್ದ ತನ್ನ ಹೆಂಡತಿಯ ಸೋದರ ಸಂಬಂಧಿ ಎನ್.ಎಚ್. ಕೋನರೆಡ್ಡಿಯನ್ನು ಶಾಸಕನನ್ನಾಗಿಸಲು ಪಟ್ಟ ಶ್ರಮದಲ್ಲಿ ಒಂದು ಭಾಗವನ್ನಾದರೂ ಕಲಘಟಗಿ ಚುನಾವಣಾ ಪ್ರಚಾರಕ್ಕೆ ಮೀಸಲಿಟ್ಟಿದ್ದರೆ ಜೆಡಿಎಸ್‌ಗೆ ಮತ್ತೊಂದು ಸೀಟು ನಿಸ್ಸಂದೇಹವಾಗಿ ಲಭಿಸುತ್ತಿತ್ತು.

ಇನ್ನು ಶಿಕ್ಷಣ ಸಚಿವನಾಗಿದ್ದಾಗ ಒಂದೇ ಒಂದು ಸರ್ಕಾರಿ ಕಾಲೇಜು ತರದ ಹೊರಟ್ಟಿಯ ಉದ್ದೇಶದ ಹಿಂದೆ ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರರ ಮತ ರಾಜಕೀಯವೇ ಮೂಲವೆನ್ನುವುದು ಮತದಾರರಿಗೆ ಮನದಟ್ಟಾಗಿದೆ (ಸ್ವತಃ ಹೊರಟ್ಟಿ ಮಗನೇ ಶಿಕ್ಷಣ ಉದ್ಯಮಿ). ನಿರಂತರವಾಗಿ ಹರಿದುಬರುವ ಆಮದನಿಗಳ ಮೇಲೆ ಕಣ್ಣಿಟ್ಟು ಜಗದೀಶ್ ಶೆಟ್ಟರ್‌ರೊಂದಿಗೆ ಮಾಡಿಕೊಳ್ಳುವ ಸ್ಥಳೀಯ ಮಿಲಾಪಿಗಳೆ ಹೊರಟ್ಟಿ ಸಾಹೇಬರ ಪೊಲಿಟಿಕಲ್ ಸ್ಟ್ರೆಂತ್! 'ಪರಸ್ಪರ ವಿರೋಧ ಪಕ್ಷದಲ್ಲಿದ್ದರು ಶೆಟ್ಟರ್ ಹಾಗೂ ಹೊರಟ್ಟಿ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ' ಎಂಬ ಮಾತು ಹುಬ್ಬಳ್ಳಿ ಧಾರವಾಡ ವಲಯದಲ್ಲಿ ಚಾಲ್ತಿಯಲ್ಲಿರೋದು ಇದೇ ಕಾರಣಕ್ಕೆ.

ಹೊರಟ್ಟಿಯ ಅಡಿಗೆಮನೆ ಸೇವಕ ಎನ್.ಎಚ್. ಕೋನರೆಡ್ಡಿ (ಹಾಲಿ ನವಲಗುಂದ ಶಾಸಕ) ಹಾಗೂ ಬಲಗೈ ಬಂಟ, ಪಾಲಿಕೆಯ ಸದಸ್ಯ ರಾಜಣ್ಣ ಕೊರವಿ ಇಬ್ಬರಿದ್ದರೆ ಹೊರಟ್ಟಿಗೆ ಬೇರೆಯವರು ಲೆಕ್ಕಕ್ಕೇ ಇಲ್ಲ.




ಕೈ ಅಂತಃಕಲಹ

ಕೋಮುವಾದಿ ಬಿಜೆಪಿಯನ್ನು ಪಾಲಿಕೆ ಗದ್ದುಗೆಯಿಂದ ಸುಲಭವಾಗಿ ದೂರ ಇಡುವ ಸಾಧ್ಯತೆ ಇದ್ದರೂ ಅದನ್ನು ಹಾಳು ಮಾಡುವಲ್ಲಿ ಜೆಡಿಎಸ್‌ನ ಪಾಲು ಒಂದಾದರೆ, ಕಾಂಗ್ರೆಸ್‌ನದ್ದೂ ಒಂದು ಪಾಲಿದೆ. ಸಚಿವ ಎಚ್.ಕೆ. ಪಾಟೀಲ್ ಹಾಗೂ ಹುಬ್ಬಳ್ಳಿ ಧಾರವಾಡ ಮಹಾನಗರ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಎ.ಎಂ. ಹಿಂಡಸಗೇರಿಯನ್ನು ಮೂಲೆಗುಂಪು ಮಾಡಬೇಕೆಂದು ಶಾಸಕ ಸಂತೋಷ್ ಲಾಡ್, ಶ್ರೀನಿವಾಸ್ ಮಾನೆ, ಪ್ರಸಾದ್ ಅಬ್ಬಯ್ಯರ ತ್ರಿಮೂರ್ತಿ ಜೋಡಿ ನಡೆಸುತ್ತಿರುವ ಆಂತರಿಕ ಕಾರ್ಯಾಚರಣೆಗಳೂ ಬಿಜೆಪಿಗೆ ಇಲ್ಲಿ ವರವಾಗಿವೆ. ಒಂದೊಮ್ಮೆ ಕಾಂಗ್ರೆಸ್ ಯತ್ನಿಸಿದ್ದರೆ ಸಂತೋಷ್ ಲಾಡ್ ಹಾಗೂ ಜೆಡಿಎಸ್‌ನ ಇಸ್ಮಾಯಿಲ್ ತಮಟಗಾರ್ ನಡುವಿನ ಹಲವು ವರ್ಷಗಳ ಗೆಳೆತನವನ್ನೇ ಬಂಡವಾಳ ಮಾಡಿಕೊಂಡು ಬಿಜೆಪಿಯನ್ನು ಅಧಿಕಾರದಿಂದ ದೂರ ಇರಿಸಬಹುದಿತ್ತು. ರಾಜ್ಯದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್‌ಗೆ ಅದೇನು ಕಷ್ಟವಾಗುತ್ತಿರಲಿಲ್ಲ. ಆದರೆ ಅಂತಹದ್ದೊಂದು ಸಾಧ್ಯತೆಯನ್ನೇ ಕಾಂಗ್ರೆಸ್ ಕೈಚೆಲ್ಲಿ ಕೂತಿದ್ದರ ಹಿಂದೆಯೂ ಒಂದು ಕಾರಣವಿದೆ. ಏನೆಂದರೆ, ಮೇಯರ್ ಸ್ಥಾನ ಪಡೆಯಲು ಪಕ್ಷ ವಿಫಲವಾಯಿತೆಂಬ ಅಪಕೀರ್ತಿಯನ್ನು ಅಧ್ಯಕ್ಷ ಎ.ಎಂ. ಹಿಂಡಸಗೇರಿ ತಲೆಗೆ ಕಟ್ಟಿ ಲೋಕಸಭಾ ಚುನಾವಣೆಯ ನಂತರ ಅಧ್ಯಕ್ಷಗಾದಿಯಿಂದ ಕೆಳಗಿಳಿಸುವ ತಂತ್ರಗಾರಿಕೆ ತ್ರಿಮೂರ್ತಿಗಳದ್ದು ಎನ್ನಲಾಗಿದೆ. ಈ ಯೋಜನೆ ಒಂದು ಹಂತದಲ್ಲಿ ಯಶಸ್ವಿಯಾಗುತ್ತಿದ್ದಂತೆ ಇಸ್ಮಾಯಿಲ್ ತಮಟಗಾರ್‌ನನ್ನು ಹಾಗೂ ಕೆಜೆಪಿಗೆ ಹೋಗಿದ್ದ ಹುಬ್ಬಳ್ಳಿಯ ಅಂಜುಮಾನ್ ಸಂಸ್ಥೆಯ ಅಧ್ಯಕ್ಷ ಜಬ್ಬಾರ್ ಖಾನ್ ಹೊನ್ನಳ್ಳಿಯನ್ನು ಕಾಂಗ್ರೆಸ್ ಪಕ್ಷಕ್ಕೆ ಕರೆತರುವ ಪ್ರಯತ್ನದಲ್ಲಿ ಇವರಿದ್ದಾರೆ. ಇದೇ ಪ್ರಭಾವವನ್ನು ಚುನಾವಣೆಗೆ ಮುನ್ನವೇ ಬಳಸಬಹುದಿತ್ತು. ಆದರೆ ಅದು ಅವರಿಗೆ ಬೇಕಾಗಿರಲಿಲ್ಲ. ಹಾಗಾಗಿ ರಾಜ್ಯದಲ್ಲಿ ಅಧಿಕಾರದಲ್ಲಿದ್ದೂ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಆಡಳಿತ ಚುಕ್ಕಾಣಿ ಹಿಡಿಯಬೇಕಾದ ಕಾಂಗ್ರೆಸ್ ವಿರೋಧ ಪಕ್ಷದ ಸ್ಥಾನದಲ್ಲಿ ಕೂರುವಂತಾಗಿದೆ ಎಂಬ ಗುಲ್ಲು ಎಲ್ಲಾ ಕಡೆ ಕೇಳಿಬರುತ್ತಿದೆ.

ಈ ಅಂತಃಕಲಹ ಯಾವ ಮಟ್ಟ ತಲುಪಿದೆಯೆಂದರೆ ಲೋಕಸಭೆ ಚುನಾವಣೆಯಲ್ಲಿ ಇದೇ ತ್ರಿಮೂರ್ತಿಗಳ ತಂಡ ಮಾಜಿ ಪಾಲಿಕೆ ಸದಸ್ಯ ಮೋಹನ್ ಅಸೂಂಡಿಗೆ ಪಕ್ಷದ ಟಿಕೆಟ್ ನೀಡುವಂತೆ ಒತ್ತಾಯಿಸಿತ್ತು. ಆದರೆ ಹೈಕಮಾಂಡ್‌ಗೆ ರವಾನಿಸಿದ ಪಟ್ಟಿಯಲ್ಲಿ ಆತನ ಹೆಸರು ಮಿಸ್ಸಾಗಿತ್ತು. ಎ.ಎಂ. ಹಿಂಡಸಗೇರಿ, ಮಂಜುನಾಥ್ ಕುನ್ನೂರ್ ಹೆಸರುಗಳ ಜೊತೆಗೆ ವಿಧಾನಸಭಾ ಚುನಾವಣೆಯಲ್ಲಿ ಶೆಟ್ಟರ್ ವಿರುದ್ಧ ಸ್ಪರ್ಧಿಸಿ ಸೋತಿರುವ ಡಾ. ಮಹೇಶ್ ನಾಲವಾಡ ಹೆಸರನ್ನು ಏರ್‍ನಾ ಮತ್ತಿಕಟ್ಟಿ ಪ್ರಸ್ತಾಪಿಸುತ್ತಿದ್ದಂತೆ ಇದೇ ಶ್ರೀನಿವಾಸ್ ಮಾನೆ, ಪ್ರಸಾದ್ ಅಬ್ಬಯ್ಯ, ಲಾಡ್ ಗುಂಪು ಹುಬ್ಬಳ್ಳಿಯ ಹೋಟೆಲ್‌ವೊಂದರಲ್ಲಿ ಸಭೆ ಸೇರಿ ಇದನ್ನು ವಿರೋಧಿಸುವ ನಿರ್ಣಯ ಕೈಗೊಂಡಿದೆ. ಒಟ್ಟನಲ್ಲಿ ಕೈ ಪಾಳಯದಲ್ಲಿ ನಡೆಯುತ್ತಿರುವ ಆಂತರಿಕ ಕಚ್ಚಾಟಗಳ ಆ ಪಕ್ಷಕ್ಕೆ ಲೋಕಸಭಾ ಚುನಾವಣೆಯಲ್ಲಿ ಮುಳುವಾಗಬಹುದಾದ [illegible] ತಳ್ಳಿಹಾಕುವಂತಿಲ್ಲ.

● ಹುಬ್ಬಳ್ಳಿಯಾಂವ

ಸೆಕ್ಯುಲಾರ್ ಸರಕಾರವೆಂಬ ವಿಷದ ಮತ್ತೊಂದು ಬ್ರಾಂಡ್



ಪ್ರಜಾಪ್ರಭುತ್ವದಲ್ಲಿ ಪ್ರಜೆಗಳಿಗೆ ಆಯ್ಕೆಯ ಸ್ವಾತಂತ್ರ್ಯವಿದೆ. ಬರಲಿರುವ ಲೋಕಸಭಾ ಚುನಾವಣೆಯಲ್ಲಿ ನಾವು ಸ್ಪ್ರೈಟ್, ಟ್ವೆಂಟಿ20 ಇತ್ಯಾದಿಗಳ ನಡುವೆ ಯಾವುದನ್ನು ಬೇಕಾದರೂ ಆರಿಸಿಕೊಳ್ಳಬಹುದು. ನಾವು ಆಯ್ದುಕೊಳ್ಳುವ ವಿಷಕ್ಕೆ ಒಂದು ಲೇಬಲ್ ಇರುತ್ತದೆ ಎನ್ನುವುದೇ ಪ್ರಜಾಪ್ರಭುತ್ವದ ಪ್ಲಸ್ ಪಾಯಿಂಟ್. ಕಳೆದ ವರ್ಷದ ವಿಧಾನಸಭಾ ಚುನಾವಣೆಯಲ್ಲಿ ಜನ ಅಧಿಕಾರಕ್ಕೇರಿಸಿದ ಹಾಲಿ ಸರಕಾರಕ್ಕೆ ಸೆಕ್ಯುಲಾರ್ ಎಂಬ ಲೇಬಲ್ ಇತ್ತು. ಆದರೆ, ಒಂದು ವರ್ಷ ಕಳೆಯುವುದರೊಳಗೆ ಸರಕಾರದ ಸೆಕ್ಯುಲಾರ್ ಧೋರಣೆಯ ಬಗ್ಗೆ ಜನರಿಗಿದ್ದ ನಂಬಿಕೆ ನುಚ್ಚುನೂರಾಗಿದೆ. ರಾಜ್ಯದಲ್ಲಿ ಬಜರಂಗಿಗಳ ಗೂಂಡಾಗಿರಿಯನ್ನು ನಿಯಂತ್ರಿಸಲು ಕೂಡ ಈ ಸರಕಾರ ವಿಫಲವಾಗಿದೆ. ಕರಾವಳಿಯ ಊರುಗಳಲ್ಲಂತೂ ಭಾರತದ ಸಂವಿಧಾನದ ಆಳ್ವಿಕೆ ಯಾವತ್ತೋ ಕೊನೆಗೊಂಡಿದ್ದು ಹಿಂದೂತ್ವದ ದೊಣ್ಣೆ ನಾಯಕರ ಹುಕುಂ ಜಾರಿಯಲ್ಲಿದೆ. ಹಾಲಿ ಸರ್ಕಾರವೂ ಇವರ ಗುಲಾಮನಂತೆ ನಡೆದುಕೊಳ್ಳುತ್ತಿದೆ ಎನ್ನುವುದಕ್ಕೆ ಉಡುಪಿ ಜಿಲ್ಲೆಯಲ್ಲಿ ಇತ್ತೀಚೆಗೆ ನಡೆದಿರುವ ಇಂತಹ ಹಲವು ಘಟನೆಗಳಲ್ಲಿ ಎರಡನ್ನು ಇಲ್ಲಿ ನಿರೂಪಿಸುತ್ತಿದ್ದೇವೆ.

ಗಂಗೊಳ್ಳಿ ಪ್ರಕರಣ

ಕುಂದಾಪುರ ತಾಲೂಕಿನ ಗಂಗೊಳ್ಳಿ ಎಂಬಲ್ಲಿ ಫೆಬ್ರವರಿ 23 ರಂದು ಹಿಂದೂ ಸಮಾಜೋತ್ಸವ ಕಾರ್ಯಕ್ರಮ ನಡೆಯುವುದಿತ್ತು. ಅದರ ಅಂಗವಾಗಿ ರಾಷ್ಟ್ರೀಯ ಹೆದ್ದಾರಿ ಬಳಿಯ ತ್ರಾಸಿ ಜಂಕ್ಷನ್‌ನಿಂದ ಗಂಗೊಳ್ಳಿಗೆ ಒಂದು ಮೆರವಣಿಗೆಯನ್ನು ಏರ್ಪಡಿಸಲಾಗಿತ್ತು. ಆ ಮೆರವಣಿಗೆ ಹೆದ್ದಾರಿ ಬಳಿಯ ತ್ರಾಸಿ ರಸ್ತೆಯಲ್ಲಿ ಸಂಜೆ 4 ರ ವೇಳೆಗೆ ಸಜ್ಜಾಗಿ ನಿಂತಿತ್ತು. ಆ ಹೊತ್ತಿನಲ್ಲಿ ತ್ರಾಸಿ ನಿವಾಸಿ, ಹನೀಫ್ ಎಂಬುವರು ತಮ್ಮ ದ್ವಿಚಕ್ರವಾಹನದಲ್ಲಿ ಪತ್ನಿಯೊಂದಿಗೆ ತ್ರಾಸಿ ಜಂಕ್ಷನ್ ಬಳಿಯ ಪೆಟ್ರೋಲ್ ಬಂಕ್ ರಸ್ತೆಗೆ ತಿರುಗಿದರು. ಅದೇ ಸಮಯಕ್ಕೆ ಪೆಟ್ರೋಲ್ ಬಂಕಿನಿಂದ ಒಂದು ಟಿಪ್ಪರ್ ಹಿಮ್ಮುಖವಾಗಿ ಅಜಾಗರೂಕತೆಯಿಂದ ಚಲಿಸಿ ಇವರ ಬೈಕ್‌ಗೆ ಢಿಕ್ಕಿ ಹೊಡೆಯುದರಲ್ಲಿದ್ದಾಗ ಹನೀಫ್ ಮತ್ತು ಅವರ ಪತ್ನಿ ಇಬ್ಬರೂ ಬೈಕಿನಿಂದ ಜಿಗಿದರು. ಹನೀಫ್ ಟಿಪ್ಪರ್ ಚಾಲಕನ ಬಳಿ ಹೋಗಿ ಆತನ ಅಜಾಗರೂಕತೆಯ ಕುರಿತು ತರಾಟೆಗೆ ತೆಗೆದುಕೊಂಡಾಗ ರಸ್ತೆಯಲ್ಲಿ ಮೆರವಣಿಗೆಗೆ ಸಿದ್ಧವಾಗಿ ನಿಂತಿದ್ದವರಲ್ಲಿ ಕೆಲವರು ಅವರ ಬಳಿ ಧಾವಿಸಿದರು. ಹನೀಫರ ಪತ್ನಿ ಬುರ್ಖಾ ಧರಿಸಿದ್ದರಿಂದ ಅವರನ್ನು ಮುಸ್ಲಿಮರು ಎಂದು ಗುರುತಿಸಿ ಹನೀಫರ ಮೇಲೆ ಅವಾಚ್ಯ ಶಬ್ದಗಳಿಂದ ಬೈಯುತ್ತಾ ಹಲ್ಲೆ ನಡೆಸಿದರು. ಇದನ್ನು ತಡೆಯಲು ಹೋದ ಹನೀಫರ ಪತ್ನಿಯನ್ನು ಸಹ ನಿಂದಿಸಿ, ದೂಡಿದರು. ಈ ಹಲ್ಲೆಯಿಂದ ಘಾಸಿಗೊಂಡಿದ್ದ ಹನೀಫ್ ಕುಂದಾಪುರದ ಸರಕಾರಿ ಆಸ್ಪತ್ರೆಯಲ್ಲಿ ದಾಖಲಾಗಿದ್ದ ವೇಳೆ ಗಂಗೊಳ್ಳಿ ಪೊಲೀಸರು ಒತ್ತಡದ ದೂರನ್ನು ಬರೆಸಿಕೊಂಡು, ಇಡೀ ಪ್ರಕರಣವನ್ನು ಅಪಘಾತದ ಸನ್ನಿವೇಶದಲ್ಲಿ ನಡೆದ ಪುಟ್ಟ ಜಗಳ ಎನ್ನುವಂತೆ ದಾಖಲಿಸಿದ್ದಾರೆ. ವಾಸ್ತವವಾಗಿ ಅದು ಮೆರವಣಿಗೆ ಹೊರಟಿದ್ದ ಸಂಘಪರಿವಾರದವರು ಕೋಮು ದ್ವೇಷದಿಂದ ನಡೆಸಿದ ಹಲ್ಲೆಯಾಗಿದೆ. ಗಂಗೊಳ್ಳಿ ಪೊಲೀಸರು ಈ ಸತ್ಯವನ್ನು ಮುಚ್ಚಿ ಹಾಕಿ ತಕ್ಷೀರಿನ ಅಪರಾಧಿಗಳಿಗೆ ರಕ್ಷಣೆ ನೀಡಿದ್ದಾರೆ.

ಕೆಳನೇಜಾರು ಪ್ರಕರಣ

ಫೆಬ್ರವರಿ 24 ರ ಸಂಜೆ 6.00 ಗಂಟೆಗೆ ಹೂಡೆ ನಿವಾಸಿ ಹುಮೇರ್ ಎಂಬ 28 ರ ಹರೆಯದ ಎಲೆಕ್ಟ್ರಿಷಿಯನ್ ವೃತ್ತಿಯಲ್ಲಿರುವ ಯುವಕ ಮಣಿಪಾಲದಲ್ಲಿ ತನ್ನ ಕೆಲಸ ಮುಗಿಸಿ ನೇಜಾರು ಮಸೀದಿಯ ಬಳಿ ರಸ್ತೆಯಲ್ಲಿ ತನ್ನ ಬೈಕಿನಲ್ಲಿ ಹೋಗುತ್ತಿದ್ದಾಗ, ಜಯಂತ್ ಕೆಳನೇಜಾರು ಎಂಬುವವರು, ಲಿಫ್ಟ್ ಕೇಳಿ ಅವರ ಬೈಕ್ ಹತ್ತಿದರು. ತನಗೆ ತುರ್ತಾಗಿ ಮನೆಗೆ ಹೋಗಬೇಕಾಗಿದೆ ಎಂದು ಹೇಳಿ ಹುಮೇರ್‌ರ ಬೈಕು ಹತ್ತಿದ ಜಯಂತ್ ಅವರನ್ನು ಬೇರೊಂದು ರಸ್ತೆಯಲ್ಲಿ ಕರೆದೊಯ್ದರು. ಆ ರಸ್ತೆಯಲ್ಲಿ ಮತ್ತೆ ಹಲವರು ಬೈಕುಗಳಲ್ಲಿ ಬಂದು ಹುಮೇರ್‌ನನ್ನು ಸುತ್ತುವರಿದು ನಿಲ್ಲಿಸಿದರು. ಜಯಂತ್ ಆ ಗುಂಪಿಗೆ ಸೇರಿದವರಾಗಿದ್ದರು. ಹುಮೇರ್ ಮೂಲತಃ ಹಿಂದೂ ಮತದ ಬಿಲ್ಲವ ಸಮುದಾಯಕ್ಕೆ ಸೇರಿದವರಾಗಿದ್ದು, ಅವರಿಗೆ ಗಿರೀಶ್ ಎಂಬ ಹೆಸರಿತ್ತು, ಅವರು 8 ವರ್ಷಗಳ ಹಿಂದೆ ತಮ್ಮ 20ನೇ ವಯಸ್ಸಿನಲ್ಲಿ ಉದ್ಯೋಗದ ನಿಮಿತ್ತ ಗಲ್ಫ್‌ಗೆ ಹೋಗಿದ್ದು ಅಲ್ಲಿ ಸ್ವೇಚ್ಛೆಯಿಂದ ಮುಸ್ಲಿಮ್ ಧರ್ಮಕ್ಕೆ ಮತಾಂತರಗೊಂಡರು. ಎರಡು ವರ್ಷಗಳ ಹಿಂದೆ ಅವರು ಮಂಗಳೂರಿನ ಕುದ್ರೋಳಿಯ ಮುಸ್ಲಿಮ್ ಯುವತಿಯೊಬ್ಬರೊಟ್ಟಿಗೆ ಮದುವೆಯಾದರು. ಈ ಎಲ್ಲವೂ ಹುಮೇರರ ಹೆತ್ತವರು ಮತ್ತು ಕುಟುಂಬದವರಿಗೆ ತಿಳಿದಿದ್ದು ಅವರು ಈಗಲೂ ಹುಮೇರ್ ಜೊತೆ ಒಳ್ಳೆಯ ಸಂಬಂಧವನ್ನು ಇರಿಸಿಕೊಂಡಿದ್ದಾರೆ. ಹುಮೇರ್ ಆರು ತಿಂಗಳ ಕೆಳಗೆ ಗಲ್ಫ್‌ನಿಂದ ಹಿಂತಿರುಗಿ ಉಡುಪಿಯ ಹೂಡೆಯಲ್ಲಿ ಮನೆ ಮಾಡಿಕೊಂಡು ಎಲೆಕ್ಟ್ರಿಷಿಯನ್ ವೃತ್ತಿಯಿಂದ ತಮ್ಮ ಜೀವನ ನಡೆಸುತ್ತಿದ್ದಾರೆ. ಹೀಗಿದ್ದೂ ಹುಮೇರ್‌ರಿಗೆ ವೈಯಕ್ತಿಕವಾಗಿರುವ ಅವರ ಮತಾಂತರವನ್ನು ನೆಪವಾಗಿಟ್ಟುಕೊಂಡು ಸದರಿ ಗುಂಪು ಅವರು ಹಿಂದೂ ಧರ್ಮವನ್ನು ತೊರೆದಿದ್ದರ ವಿರುದ್ಧ ದ್ವೇಷಪೂರಿತ ನಿಂದನೆಯ ಮಾತುಗಳಿಂದ ಹಲ್ಲೆಗೆ ಮುಂದಾಗಿದೆ. ಆ ತರುವಾಯ ಅವರನ್ನು ಕೆಳನೇಜಾರಿನ ಮೈದಾನಕ್ಕೆ ಕರೆದುಕೊಂಡು ಹೋಗಿ ಸಂಜೆ 6.30 ರಿಂದ ಎರಡು ಗಂಟೆಗಳ ಕಾಲ ಸತತವಾಗಿ ಕ್ರಿಕೆಟ್ ಬ್ಯಾಟು, ದೊಣ್ಣೆ ಚಪ್ಪಲಿ ಹಾಗೂ ಪಂಚ್‌ನಿಂದ ಹಲ್ಲೆ ನಡೆಸಲಾಯಿತು. ಈ ಹಲ್ಲೆ ಎಷ್ಟು ಅಮಾನುಷವಾಗಿತ್ತು ಎನ್ನುವುದು, ಘಟನೆ ನಡೆದ ನಾಲ್ಕು ದಿನಗಳ ನಂತರ ನಾವು ಉಡುಪಿಯ ಆದರ್ಶ ಆಸ್ಪತ್ರೆಯಲ್ಲಿ ಅವರನ್ನು ಕಂಡಾಗ ನಮ್ಮ ಅರಿವಿಗೆ ಬಂತು. ಅವರು ಜರ್ಜರಿತ ಸ್ಥಿತಿಯಲ್ಲಿದ್ದರು; ಮುಖ ಬಾತುಕೊಂಡಿತ್ತು; ಅವರಿಗೆ ಮಾತನಾಡಲು ಮತ್ತು ಉಣ್ಣಲು ಕೂಡ ಕಷ್ಟವಾಗುತಿತ್ತು.

ಆ ನಂತರ ಅಲ್ಲಿ ಹಲ್ಲೆಕೋರರು ಮಲ್ಪೆ ಠಾಣೆಯ ಪೊಲೀಸರನ್ನು ಕರೆಸಿ ಯುವತಿಯೋರ್ವಳಿಂದ ಚುಡಾವಣೆ ಮತ್ತು ಅಸಭ್ಯ ವರ್ತನೆಯ ದೂರನ್ನು ಕೊಡಿಸಿದರು. ಮಲ್ಪೆ ಠಾಣೆಯ ಪೊಲೀಸರು ಯಾವ ಪೂರ್ವಾಪರಗಳನ್ನೂ ವಿಚಾರಿಸದೇ ಹಲ್ಲೆಗೊಳಗಾಗಿದ್ದ ಹುಮೇರ್‌ರನ್ನು ದಸ್ತಗಿರಿ ಮಾಡಿ ಅವರೇ ಅಪರಾಧಿ ಎನ್ನುವಂತೆ ಕೇಸು ದಾಖಲಿಸಿದ್ದಾರೆ. ಅಷ್ಟೇ ಅಲ್ಲದೆ ಹಲ್ಲೆಯಿಂದ ದೈಹಿಕವಾಗಿ ಜರ್ಜರಿತನಾಗಿಯೂ, ಮಾನಸಿಕವಾಗಿ ಆಘಾತಕ್ಕೂ ಒಳಗಾಗಿದ್ದ ಹುಮೇರ್‌ನಿಂದ ಹಲ್ಲೆಕೋರರ ದೂರಿಗೆ ಪೂರಕವಾಗುವಂತೆ ದೂರನ್ನು ಒತ್ತಡದಲ್ಲಿ ಬರೆಸಿಕೊಂಡಿರುತ್ತಾರೆ ಮತ್ತು ಹಲ್ಲೆಯ ಆರೋಪಿಗಳ ವಿರುದ್ಧ ಕೇಸು ದಾಖಲಿಸದೇ, ಹುಮೇರ್ ಆರೋಪಿಗಳನ್ನು ಗುರುತಿಸಿಲ್ಲವೆಂದು ಕಾಣಿಸಿರುತ್ತಾರೆ. ಹುಮೇರ್‌ರನ್ನು ದಸ್ತಗಿರಿ ಮಾಡಿದ ನಂತರ ನಡೆದ ಸಕಲ ವಿವರಗಳನ್ನೂ ಹುಮೇರ್ ತಮಗೆ ಈಗಾಗಲೇ ಸಲ್ಲಿಸಿರುವ ದೂರಿನಲ್ಲಿ ಕಾಣಿಸಿರುತ್ತಾರೆ. ಅದಲ್ಲದೇ ಮ್ಯಾಜಿಸ್ಟ್ರೇಟರಿಗೆ ಹುಮೇರ್‌ರನ್ನು ಬಿಡುಗಡೆಗೊಳಿಸದೇ ನ್ಯಾಯಾಂಗ ಬಂಧನದಲ್ಲೇ ಮುಂದುವರಿಸಬೇಕೆಂದು ಕೋರಿ ಮಲ್ಪೆ ಠಾಣೆಯ ಎಸ್ಸೈಯವರು ವರದಿಯಲ್ಲಿ ಕಾಣಿಸಿರುವ ಕಾರಣಗಳೆಲ್ಲವೂ ಹುಮೇರ್‌ನ ಮೇಲೆ ಹಲ್ಲೆ ನಡೆಸಿದವರ ವಾದವನ್ನೇ ಪುಷ್ಟೀಕರಿಸುತ್ತಿವೆ (ಬಾಕ್ಸ್ ನೋಡಿ).

ನೇಜಾರು ಬಳಿ ಅಂದು ನಡೆದದ್ದು ಭಾರತದ ಸಂವಿಧಾನದ ಮೇಲಿನ ಅತ್ಯಾಚಾರ. ಈ ಪ್ರಕರಣದಲ್ಲಿ ಮಲ್ಪೆ ಠಾಣೆಯ ಪೊಲೀಸರು ಸಂಪೂರ್ಣವಾಗಿ ಹಲ್ಲೆಕೋರರ ಉದ್ದೇಶಗಳಿಗನುಗುಣವಾಗಿಯೇ ವರ್ತಿಸಿ, ಹಲ್ಲೆಗೊಳಗಾದವನನ್ನೇ ಅಪಾಯಕಾರಿ ಆರೋಪಿ ಎಂದು ಚಿತ್ರಿಸುವ ಆತಂಕಕಾರಿ ಸಂವಿಧಾನಬಾಹಿರ ಮನೋಭಾವ ಸ್ಪಷ್ಟವಾಗಿ ಗೋಚರಿಸುತ್ತಿದೆ.

ಉಡುಪಿಯ ಆಳುವ ಪಕ್ಷದ ಶಾಸಕರು ಮತ್ತು ಉಸ್ತುವಾರಿ ಸಚಿವರು, ಇಂತಹ ಯಾವ ಘಟನೆಯ ಬಗ್ಗೆಯೂ ತಲೆಕೆಡಿಸಿಕೊಳ್ಳುವವರಲ್ಲ. ಇಲ್ಲಿಯ ಪೊಲೀಸರಂತೂ ಸ್ವತಃ ಬಜರಂಗಿಗಳಂತೆ ವರ್ತಿಸುತ್ತಿರುವವರು. ಪ್ರಜೆಗಳು ಯಾರ ಬಳಿ ತಮ್ಮ ದೂರನ್ನು ಒಯ್ಯಬೇಕು? ಅಲ್ಪಸಂಖ್ಯಾತರಿಗಂತೂ ಇದು ತಾಯ ಹಾಲೇ ನಂಜಾಗುವಂಥ ಸ್ಥಿತಿ. ಅವರು ದೇವರ ಬಳಿಯೇ ತಮ್ಮ ದೂರು ಹೇಳಿಕೊಳ್ಳಬೇಕು. ಇಂತಹ ದುರ್ಭರ ಸನ್ನಿವೇಶದಲ್ಲೂ, ಸ್ಥಳೀಯ ಮುಸ್ಲಿಮರು, ಎರಡೂ ಘಟನೆಗಳ ಬಗ್ಗೆ ಕರ್ನಾಟಕ ಕೋಮು ಸೌಹಾರ್ದ ವೇದಿಕೆ ವತಿಯಿಂದ ಪ್ರತಿಭಟನೆ ನಡೆಸಿದರು, ಜಿಲ್ಲಾ ಪೊಲೀಸು ವರಿಷ್ಠರಿಗೆ ನ್ಯಾಯ ಕೇಳಿ, ಮನವಿ ಸಲ್ಲಿಸಿದರು. ಆಳುವವರು ಪ್ರತಿ ದಿನ ಪ್ರತಿ ಕ್ಷಣ ಈ ದೇಶದ ಸಂವಿಧಾನಕ್ಕೆ ಅಪಚಾರವೆಸಗುತ್ತಿದ್ದರೂ, ಉಡುಪಿಯ ಮುಸ್ಲಿಮರು ಸಂವಿಧಾನ ಮತ್ತು ಪ್ರಜಾಪ್ರಭುತ್ವಗಳನ್ನು ನೆಚ್ಚಿ ಪ್ರತಿಭಟನೆ ನಡೆಸಿದರು. ಇಷ್ಟಾದರೂ ಈ ಊರ ಪೊಲೀಸರಿಗೆ ಇವರು 'ಕೋಮು ಸೂಕ್ಷ್ಮವಾದ ಪ್ರದೇಶದಲ್ಲಿ ಸಾರ್ವಜನಿಕ ವಾತಾವರಣವನ್ನು ವಿಕೋಪಕ್ಕೆ ತಳ್ಳುವವರು!' ಇನ್ಷಾ ಅಲ್ಲಾ!

● ಜಿ.ರಾಜಶೇಖರ್, ಕೆ.ಫಣಿರಾಜ್

ಭಜರಂಗಿಗಳಾದ ಮಲ್ಪೆ ಪೊಲೀಸರು

ಮಲ್ಪೆ ಠಾಣೆಯ ಎಸ್ಸೈ ಉಮೇರರಿಗೆ ಯಾಕೆ ಜಾಮೀನು ನೀಡಕೂಡದು ಎಂದು ಉಡುಪಿ ಜಿಲ್ಲಾ ಎ.ಸಿ.ಜೆ (ಹಿ.ವಿ) ಮತ್ತು ಸಿ.ಜೆ.ಎಮ್. ನ್ಯಾಯಾಲಯಕ್ಕೆ ಸಲ್ಲಿಸಿರುವ ಮನವಿಯ ಭಾಗ:

1. ಆರೋಪಿತನು ಮೂಲತಃ ಹಿಂದೂ ಧರ್ಮದವನಾಗಿದ್ದು ಪ್ರಸ್ತುತ ಮುಸ್ಲಿಂ ಮಹಿಳೆಯನ್ನು ಮದುವೆಯಾಗಿದ್ದು ಹೂಡೆ ಚಿಕ್ಕ ತೋಟ ಎಂಬಲ್ಲಿ ತಾತ್ಕಾಲಿಕವಾಗಿ ಬಾಡಿಗೆ ಮನೆಯಲ್ಲಿ ವಾಸವಿದ್ದುದಾಗಿ ತಿಳಿಸಿದ್ದು ಆತನು ಹಿಂದೂ ಯುವತಿಯರನ್ನು ಇಂತಹ ದುರ್ವರ್ತನೆಯಿಂದ ವರ್ತಿಸಿರುವುದರಿಂದ ಸದ್ರಿ ಪರಿಸರದಲ್ಲಿ ಹಾಗೂ ಕೋಮು ಸೂಕ್ಷ್ಮ ಪ್ರದೇಶವಾದ ಹೂಡೆ ಪರಿಸರದಲ್ಲಿ ಸಾರ್ವಜನಿಕರಿಂದ ವಾತಾವರಣವು ವಿಕೋಪಕ್ಕೆ ಹೋಗುವ ಸಾಧ್ಯತೆ ಇದ್ದುದರಿಂದ ಆರೋಪಿತನನ್ನು ಜಾಮೀನಿನಲ್ಲಿ ಬಿಡುಗಡೆಗೊಳಿಸದೇ ಮಾನ್ಯ ನ್ಯಾಯಾಲಯದ ತಾಬೆಯಲ್ಲಿ ಇರಿಸಬೇಕಾಗಿ ಕೋರಿದೆ.

2. ಆರೋಪಿತನು ಅನ್ಯ ಕೋಮಿಗೆ ಬದಲಾಯಿಸಿಕೊಂಡು ತನ್ನ ಸ್ವಂತ ರಕ್ತಸಂಬಂಧಿಕರನ್ನೆಲ್ಲ ಬಿಟ್ಟು ತಾತ್ಕಾಲಿಕವಾಗಿ ಕೋಮು ಸೂಕ್ಷ್ಮ ಪ್ರದೇಶದಲ್ಲಿ ನೆಲೆಸಿದ್ದು ಆತನಿಗೆ ಅಲ್ಲಿನ ಮತೀಯ ಜನರು ಬೆಂಬಲಿಸಿ ಮುಂದೆ ಆತನು ಪ್ರಕರಣದ ಸಾಕ್ಷಿದಾರರಿಗೆ ಬೆದರಿಸುವ ಸಾಧ್ಯತೆ ಹಾಗೂ ಮಾನ್ಯ ನ್ಯಾಯಾಲಯದ ವಿಚಾರಣೆಗೆ ಹಾಜರಾಗದೇ ಬೇರೆ ಯಾವುದೋ ಊರಿಗೆ ಪರಾರಿಯಾಗಿ ತಲೆಮರೆಸಿಕೊಳ್ಳುವ ಸಾಧ್ಯತೆಯು ಖಂಡಿತವಾಗಿಯೂ ಇರುತ್ತದೆ.

3. ಆರೋಪಿತನನ್ನು ಬಿಡುಗಡೆಗೊಳಿಸಿದಲ್ಲಿ ಆತನು ಈಗಾಗಲೇ ಹಿಂದೂ ಯುವತಿಯರಲ್ಲಿ ಅಸಭ್ಯ ವರ್ತನೆ ಮಾಡಿರುವುದರಿಂದ ರೊಚ್ಚಿಗೆದ್ದ ಜನರು ಆರೋಪಿತನನ್ನು ಕಂಡಲ್ಲಿ ಪುನಃ ಹಲ್ಲೆ ನಡೆಸುವ ಕೋಮುಗಲಭೆ ಇತ್ಯಾದಿ ನಡೆಸುವ ಸಾಧ್ಯತೆ ಇರುತ್ತದೆ.

4. ಆರೋಪಿಯನ್ನು ಬಿಡುಗಡೆಗೊಳಿಸಿದ್ದಲ್ಲಿ ಅವರು ಪ್ರಕರಣದ ಮುಂದಿನ ವಿಚಾರಣೆಗೆ ಹಾಜರಾಗದೆ ತಲೆಮರೆಸಿಕೊಳ್ಳುವ ಸಾಧ್ಯತೆ ಇದ್ದು ಪ್ರಕರಣದ ಮುಂದಿನ ವಿಚಾರಣೆಗೆ ಆತಂಕ ಉಂಟಾಗುವ ಸಾಧ್ಯತೆ ಇರುತ್ತದೆ.

5. ಈ ಪ್ರಕರಣವು ಮಹಿಳಾ ದೌರ್ಜನ್ಯಕ್ಕೆ ಸಂಬಂಧಿಸಿದ ಪ್ರಕರಣವಾಗಿದ್ದು ಇತ್ತೀಚಿನ ದಿನಗಳಲ್ಲಿ ಇಂತಹ ಪ್ರಕರಣಗಳನ್ನು ಸಾರ್ವಜನಿಕ ಸಂಘಟನೆಗಳು ವಿರೋಧಿಸುತ್ತಿದ್ದು ಇದರಿಂದ ಮುಂದೆ ಯಾವುದೇ ಅಹಿತಕರ ಘಟನೆಗಳು ಸಂಭವಿಸದಂತೆ ಹಾಗು ಶಾಂತಿ ಸುವ್ಯವಸ್ಥೆ ಕದಡದಂತೆ ಕಾನೂನು ಸುವ್ಯವಸ್ಥೆ ಹಿತ ದೃಷ್ಟಿಯಿಂದ ಆರೋಪಿತನ್ನು ಜಾಮೀನಿನಲ್ಲಿ ಬಿಡುಗಡೆಗೊಳಿಸದೆ ಇಂದಿನಿಂದ 15 ದಿನಗಳ ಕಾಲ ಅಂದರೆ 24.02.2014 ರಿಂದ 10.03.2014ರವರೆಗೆ ಮಾನ್ಯ ನ್ಯಾಯಾಂಗ ತಾಬೆಯಲ್ಲಿ ಇರಿಸಬೇಕಾಗಿ ವಿನಂತಿಸಿಕೊಂಡಿದೆ. ಆರೋಪಿತನನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದ್ದರ ದೃಢ ಪತ್ರವನ್ನು ಲಗತ್ತಿಸಿದೆ ಮತ್ತು ಸಿಬ್ಬಂದಿಯವರಾದ HC 770, HC 1803 ರವರ ಭದ್ರಿಕೆಯಲ್ಲಿ ನ್ಯಾಯಾಲಯಕ್ಕೆ ಹಾಜರುಪಡಿಸಲು ಕಳುಹಿಸಲಾಗಿದೆ.

ನಮೋ ಬ್ರೋಡ್ಗೇಜ್‌ನಲ್ಲಿನ ರೈಲುಗಳು

"ಅಲೆಕ್ಸಾಂಡರನನ್ನು ಸೋಲಿಸಿದ್ದು ಬಿಹಾರಿಗಳು"
ಎಂದು ಪುಢಾರಿ ಭಾಷಣಗೈಯುವಾಗ
ರೈಲಿನಲ್ಲಿ... ಕ್ಷಮಿಸಿ, ರ್‍ಯಾಲಿಯಲ್ಲಿ ಹಾಜರಿದ್ದ
ಇತಿಹಾಸದ ಮೇಸ್ಟ್ರೊಬ್ಬರು ನಕ್ಕುಬಿಟ್ಟರಂತೆ.
ಪಕ್ಕದಲ್ಲಿ ಕೂತಿದ್ದ ಕೇಸರೀಶ
"ಯಾಕ್ರೀ ನಗ್ತೀರಾ... ಅಲೆಕ್ಸಾಂಡರ್ ಏನು ಮಹಾ
ಅರಿಸ್ಟಾಟಲನನ್ನೇ ಈ ರೈಲಿನಲ್ಲಿ ಕರಕೊಂಡು ಬಂದು
ರಾಮಸೇತು ಮೂಲಕ ಶ್ರೀಲಂಕಾ ತೋರಿಸ್ತೀವಿ"
ಎಂದು ಜಂಭ ಕೊಚ್ಚಿಕೊಂಡನಂತೆ!
* * *
ಅಪ್ಪಿತಪ್ಪಿ ಈ ರೈಲನ್ನೇರಿದ ಪ್ರಯಾಣಿಕನನ್ನು
ಅದರ ಟಿ.ಸಿ. ತಡೆದು
ಟಿಕೆಟು, ಗುರುತಿನ ಚೀಟಿ ಕೇಳುವ ಬದಲು
ಪ್ಯಾಂಟು ಜಾರಿಸಲು ಹೇಳಿದನಂತೆ-
ಅವನು 'ಚೆಡ್ಡಿ' ಹೌದೋ ಅಲ್ಲವೋ ತಿಳಿಯಲು!
* * *
ಆ ರೈಲಿನ ಯಜಮಾನನಿಗಿಂದು ಜನುಮದಿನ.
ಆತ ಮೆಲ್ಲನೆ ಉಸಿರನ್ನೂದಿ ಮೇಣದ ಬತ್ತಿ ಆರಿಸಿದ.
ನೆರೆದ ಅಭಿಮಾನಿಗಳ ಕೈಚಪ್ಪಾಳೆಯ ಸದ್ದಿಗೆ
ಗುಜರಾತಿನ ಸಮಾಧಿಯಲ್ಲಿ
ಕೆಲವೊಂದು ತಲೆಬುರುಡೆಗಳು
ಅದುರಿಬಿದ್ದವಂತೆ!
* * *
ಆ ಬಡಪಾಯಿ ರೈತನಿಗೆ ಇಬ್ಬರು ಹೆಣ್ಮಕ್ಕಳು-
ಅನು ಮತ್ತು ಸೋಣ
ಹಳಿತಪ್ಪಿದ ರೈಲಿಗೆ ಸಿಕ್ಕಿ ಇಬ್ಬರೂ ಸಾವಿಗೀಡಾದರು.
ಅಂತಿಮ ಕ್ರಿಯೆಯ ಖರ್ಚು ರೈಲಿನ ಯಜಮಾನನೇ ಕೊಟ್ಟ
ಅಂತೆಯೇ ಅವನ ಅನುಯಾಯಿಗಳು
ಸ್ಮಶಾನದಲ್ಲಿಯೇ ಪ್ರಚಾರದ
ಫ್ಲೆಕ್ಸ್ ಹಾಕಿಸಿಯೇ ಬಿಟ್ಟರು-
ನಮ್ಮ ನಾಯಕರನ್ನು 'ಅನು-ಮೋದಿ-ಸೋಣ'
* * *
ಕೆಲವೊಂದು ಕೋಮುವಾದಿ ಫೇಸ್ಬುಕ್ ಅಕೌಂಟಿಗರು
ಅತಿ ಎತ್ತರದಿಂದ ಕ್ಲಿಕ್ಕಿಸಿದ ಚೀನಾಗೋಡೆಯ ಚಿತ್ರವನ್ನು
ತನ್ನ 'ವಾಲ್'ಗಳಿಗೆ ಲಗತ್ತಿಸಿ
"ನೋಡ್ರೀ ಇದು ನಮೋ ರೈಲು
ಚಂದ್ರಲೋಕದಿಂದಲೂ ಕಾಣುತ್ತೆ"
ಅಂತ ರೈಲುಬಿಟ್ಟರಂತೆ!
* * *
"ಈ ಮನುಷ್ಯ ಅಭಿವೃದ್ಧಿಯ ಬಗ್ಗೆ
ಇಷ್ಟೆಲ್ಲಾ ಬುರುಡೆ ಬಿಡ್ತಾನಲ್ಲ
ಎಲ್ಲಿ ಸಿಕ್ತು ರಿ ಇವ್ನಿಗೆ ಇಷ್ಟೊಂದು ಬುರುಡೆ?"
ಎಂದು ಕೇಳಿದ್ದಕ್ಕೆ
ವ್ಯಂಗ್ಯ ಚಿತ್ರಕಾರನೊಬ್ಬ ಉತ್ತರಿಸಿದನಂತೆ-
"ಇನ್ನೆಲ್ಲಿ? ಗುಜರಾತ್ ಹತ್ಯಾಕಾಂಡದಲ್ಲಿ!"


● ವಿಲ್ಸನ್, ಕಟೀಲ್

ಚುನಾವಣೆಯೂ, ಜ್ಯೋತಿಷಿಗಳ ಹಾವಳಿಯೂ

ಟಿವಿ ವಾಹಿನಿಗಳಲ್ಲಿ ಕಾಣಿಸಿಕೊಂಡು ಭವಿಷ್ಯ ಹೇಳುವ ...ತಿಷಿಗಳ ಯೋಗ್ಯತೆ, ಅರ್ಹತೆಗಳ ಬಗ್ಗೆ ಏನು ...ದರೂ ಆಕ್ಷೇಪದ ಮಾತನ್ನು ಹೇಳಿ. ಒಂದು ...ಯುವನ್ನು ಮಾತ್ರ ಯಾರೇ ಆದರೂ ...ಕೊಳ್ಳಲೇಬೇಕಾಗುತ್ತದೆ. ಅದೇ- ಸತ್ಯದ ತಲೆಯ ...ಲೆ ಹೊಡೆದಂತೆ ಅಷ್ಟು ಸುಳ್ಳುಗಳನ್ನು ಹೇಳುವಾಗ ... ಆ ಜ್ಯೋತಿಷಿಗಳು ತೋರುವ ಧೈರ್ಯ ಮತ್ತು ...ವಿಶ್ವಾಸ. ವಿಜ್ಞಾನಿಗಳಾದರೋ 'ಹೀಗೆ ಆಗಬಹುದು, ...ದೂ ಆದೀತು' ಎಂದೆಲ್ಲ ಅತ್ಯಂತ ವಿನಯದಿಂದ ...ತ್ತಾರೆ. ತಮಗೆ ಗೊತ್ತಿಲ್ಲದಿರುವುದನ್ನು, ಗೊತ್ತಿಲ್ಲ ಎಂದು ...ಕೊಳ್ಳುವ ಪ್ರಾಮಾಣಿಕತೆ ತೋರುತ್ತಾರೆ. ಆದರೆ ...ತಿಷಿಗಳಿಗೆ ಯಾವುದರಲ್ಲೂ ಅನುಮಾನವಿಲ್ಲ, ಅವರು ...ಗೆ ಆಗಿಯೇ ಆಗುತ್ತದೆ' ಎಂದೇ ಹೇಳುತ್ತಾರೆ. ಅವರಿಗೆ ...ತ್ತಿಲ್ಲದ ವಿಷಯವೇ ಇಲ್ಲ! ಅವರ ಬಂಡವಾಳವೇ ...ಗೆಯಾದುದರಿಂದ ವಾದದಲ್ಲಿ ಅವರನ್ನು ...ವುದು ಸುಲಭಸಾಧ್ಯವಲ್ಲ, ಹಾಗಾಗಿಯೇ ...ಮಾನ್ಯವಾಗಿ ಟಿವಿ ವಾಹಿನಿಗಳ ಚರ್ಚಾ ...ರ್ಯಕ್ರಮದಲ್ಲಿ ಜ್ಯೋತಿಷಿಗಳೂ ...ನಿಗಳೂ ಮುಖಾಮುಖಿಯಾದಾಗ ...ನಿಗಳು ಮಂಕಾಗಿಬಿಡುತ್ತಾರೆ. ವಾದದಲ್ಲಿ ...ತಂತೆ ಕಾಣಿಸುತ್ತಾರೆ. ಏಕೆಂದರೆ ...ನಿಗಳದ್ದು ಮಾತು ಕಮ್ಮಿ ಕೆಲಸ ಜಾಸ್ತಿ.

...ಹಾಗೆ ನೋಡಿದರೆ, ಟಿವಿಯಂತಹ ...ಧುನಿಕ ಮಾಧ್ಯಮದಲ್ಲಿ ಮೌಢ್ಯಗಳನ್ನು ...ರುವ ಜ್ಯೋತಿಷಿಗಳಿಗೆ ಜಾಗವೇ ...ಬಾರದಿತ್ತು. ವಿಜ್ಞಾನ ಮತ್ತು ಕಪಟ ಜ್ಯೋತಿಷ್ಯ ಒಂದೆಡೆ ಸೇರುವುದೇ ಅಸಂಗತ. ಜ್ಯೋತಿಷ್ಯ ...ಯಾವುದೇ ಶಾಸ್ತ್ರ ವಿಚಾರಗಳಲ್ಲಿ ಪ್ರಶ್ನೆ ನಿಷಿದ್ಧ. ...ವಿಜ್ಞಾನ ಬೆಳೆದುದೇ ನಿಸರ್ಗದ ವಿದ್ಯಮಾನಗಳ ...ತೀವ್ರ ಕುತೂಹಲ ತಾಳುತ್ತಾ, ಪ್ರಶ್ನೆ ಮತ್ತು ...ಶೋಧನೆಗಳ ಮೂಲಕ ಅದರ ನಿಗೂಢತೆಗಳನ್ನು ...ಸುತ್ತ. ಅಲ್ಲಿ ತರ್ಕಹೀನ ಆಲೋಚನೆಗಳಿಗೆ ಜಾಗವೇ ... ಸಾವಿರಾರು ವರ್ಷಗಳಿಂದ ಜಗತ್ತಿನ ಅನೇಕ ...ಜ್ಞಾನಿಗಳು ಹಗಲುರಾತ್ರಿ ಎನ್ನದೆ ಶ್ರಮಿಸಿ ಬೆಳೆಸಿದ ...ನದ ಭಾಗವಾಗಿ ಮೂಡಿದ ತಂತ್ರಜ್ಞಾನದ ...ಳಲ್ಲೊಂದು ಇಂದು ನಾವು ಕಾಣುತ್ತಿರುವ ಟಿವಿ, ...ಟಾಪ್ ಮೊದಲಾದ ಅತ್ಯಾಧುನಿಕ ಸಾಧನಗಳು. ...ದುರಂತ ನೋಡಿ, ಮೌಢ್ಯವನ್ನು ಪ್ರಶ್ನಿಸುತ್ತಲೇ ... ವಿಜ್ಞಾನದ ಅತ್ಯಾಧುನಿಕ ಒಂದು ಕೊಡುಗೆಯಾದ ...ದಲ್ಲಿ ಮೌಢ್ಯಕ್ಕೆ ಇನ್ನೊಂದು ಹೆಸರಿನಂತಿರುವ ...ತಿಷಿಗಳು ಲ್ಯಾಪ್‌ಟಾಪ್ ಹಿಡಿದುಕೊಂಡು ಭವಿಷ್ಯ ...ವ ನೆಪದಲ್ಲಿ ಮೌಢ್ಯವನ್ನು ಮಾರುತ್ತಾರೆ!

...ಮ್ಮೆ ಟಿವಿ ಕಾರ್ಯಕ್ರಮವೊಂದರಲ್ಲಿ ಸೋಮಯಾಜಿ ... ಜ್ಯೋತಿಷಿಯೊಬ್ಬರು ಬಾಹ್ಯಾಕಾಶ ವಿಜ್ಞಾನಿ ...ಆರ್.ರಾವ್ ಅವರಿಗೇ ಸವಾಲು ಎಸೆಯುತ್ತಿದ್ದುದನ್ನು ... ನಾನು ಅವಾಕ್ಕಾಗಿದ್ದೆ. "ರಾಕೆಟ್ ಉಡಾವಣೆಗೆ ... ನೀವು ನಮ್ಮಲ್ಲಿ ಮುಹೂರ್ತ ಕೇಳಲು ...ಬರುವಿಲ್ಲವೇ?" ಎಂದು ಆತ ಪ್ರಶ್ನೆ ಹಾಕುತ್ತಿದ್ದ. "ನಮ್ಮ ... ಇಲ್ಲದೆ ನಿಮ್ಮ ರಾಕೆಟ್‌ಗಳ ಉಡಾವಣೆ ...ಯಾಗುವುದು ಸಾಧ್ಯವೇ ಇಲ್ಲ" ಎಂಬ ಅಹಂಕಾರದ ...ತ್ತು ಆತನ ಮಾತಿನಲ್ಲಿ. "ಭೂಕಂಪ ಆಗುವುದು, ...ಮಿ ಬರುವುದು ಇವೆಲ್ಲ ಜ್ಯೋತಿಷಿಗಳಾದ ನಮಗೆ ...ಲೇ ಗೊತ್ತಿರುತ್ತದೆ, ಆದರೆ 'ಕೇಳದೆ ಹೇಳಬಾರದು' ... ಶಾಸ್ತ್ರದಲ್ಲಿದೆ, ಹಾಗಾಗಿ ನಾವು ಮೊದಲೇ ಅದನ್ನು ಹೇಳುವುದಿಲ್ಲ" ಎಂದೂ ವಾದಿಸುತ್ತಿದ್ದ. ನರೇಂದ್ರ ಶರ್ಮ ಎಂಬ 'ಗುರೂಜಿ'ಯಂತೂ ಪ್ರಳಯ ಯಾವ ವರ್ಷದ ಯಾವ ತಿಂಗಳು ಸಂಭವಿಸಲಿದೆ ಎಂದು 'ನಿಖರ'ವಾಗಿ ಲೆಕ್ಕಹಾಕಿ ಹೇಳಿದ್ದ (ಅದು ಸಂಭವಿಸಲಿಲ್ಲ ಅಷ್ಟೆ). ಇನ್ನೊಬ್ಬ ಸಂಖ್ಯಾಶಾಸ್ತ್ರಿ (?) "ವಿಧಾನ ಸೌಧದ ಮುಂದಿನ ಬಸ್‌ನಿಲ್ದಾಣ ತೆಗೆದುಹಾಕಬೇಕು, ಅಲ್ಲಿ 'ವಿಧಾನಸೌಧ ಸ್ಟಾಪ್'.. ವಿಧಾನ ಸೌಧ ಸ್ಟಾಪ್' ಎಂದು ಹೇಳುವುದರಿಂದ ವಿಧಾನ ಸೌಧದ ಗ್ರಹಚಾರ ಕೆಟ್ಟಿದೆ" ಎಂದು ಹೇಳುತ್ತಿದ್ದ. ಹೆಸರುಗಳನ್ನು ಬದಲಾಯಿಸಿಕೊಂಡರೆ ಭವಿಷ್ಯವೂ ಬದಲಾಗುತ್ತದೆ ಎಂದು ಹೇಳುವಾಗ ಆತನಲ್ಲಿ ಕಿಂಚಿತ್ತೂ ಅನುಮಾನವಿರಲಿಲ್ಲ. ಸಚ್ಚಿದಾನಂದ ಬಾಬು ಎಂಬಾತ, ಹೆಣ್ಣು ಯಾವ ನಕ್ಷತ್ರದಲ್ಲಿ ಋತುಮತಿಯಾದರೆ ಏನಾಗುತ್ತದೆ, ಪ್ರೇಮವಿವಾಹಕ್ಕೆ, ಗಂಡಹೆಂಡಿರ ಜಗಳಕ್ಕೆ ಯಾವ ಗ್ರಹಗತಿಗಳು ಕಾರಣ ಎಂದೂ 'ಕರಾರುವಾಕ್ಕಾಗಿ' ಹೇಳುತ್ತಾನೆ. ಇದೇ ಮನುಷ್ಯ



ಸೋಮಯಾಜಿ ನರೇಂದ್ರ ಶರ್ಮ ಶಂಕರ್ ಹೆಗ್ಡೆ ಸಚ್ಚಿದಾನಂದ ಬಾಬು

ಮುಖ್ಯಮಂತ್ರಿಗಳ ಅಧಿಕೃತ ನಿವಾಸ ಅನುಗ್ರಹದ ವಾಸ್ತು ಸರಿ ಇಲ್ಲ ಆದ್ದರಿಂದ ಅದನ್ನು ಕೆಡವಿ ಹೊಸದಾಗಿ ಅದನ್ನು ವಾಸ್ತು ಅನ್ವಯ ಕಟ್ಟಬೇಕು ಎಂಬ ಪ್ರಳಯಾಂತಕ ಸಲಹೆ ನೀಡಿದ್ದ!

ಈ ಜ್ಯೋತಿಷಿಗಳ ವ್ಯಾಪಾರ ವಹಿವಾಟು ಆರಂಭದಲ್ಲಿ ಅಷ್ಟೇನೂ ಚೆನ್ನಾಗಿರುವುದಿಲ್ಲ. ಅಂತಹ ಹೆಸರೂ ಇರುವುದಿಲ್ಲ. ಒಮ್ಮೆ ಟಿವಿಯಲ್ಲಿ ಕಾಣಿಸಿಕೊಳ್ಳುತ್ತಲೇ ಅವರ ಅದೃಷ್ಟ ಖುಲಾಯಿಸತೊಡಗುತ್ತದೆ. ಹೆಸರೂ ಬರುತ್ತದೆ ಹಣವೂ ಬರುತ್ತದೆ. ಆರಂಭದಲ್ಲಿ ಸಾಮಾನ್ಯರಂತೆ ಸರಳ ನಿಜನಾಮಧೇಯದೊಂದಿಗೆ ಕಾಣಿಸಿಕೊಳ್ಳುವ ಇವರ ಜೊತೆಗೆ ಕ್ರಮೇಣ ಗುರೂಜಿಯಂತಹ 'ಡಿಗ್ರಿಗಳು' ಅನಾಯಾಸವಾಗಿ ಸೇರಿಕೊಳ್ಳತೊಡಗುತ್ತವೆ. ಮುಂದೆ ಶ್ರೀ, ಶ್ರೀ ಶ್ರೀ ಮೊದಲಾದ ಹೆಚ್ಚುವರಿ ಡಿಗ್ರಿಗಳೂ ಸೇರಿಕೊಂಡು ಅಂತಿಮವಾಗಿ ಕಾವಿಬಟ್ಟೆಯ ಸಹಿತ 'ಸ್ವಾಮೀಜಿ' ಎಂಬ ಅಭಿದಾನವೂ ಸೇರಿಕೊಳ್ಳುತ್ತದೆ. ಮುಂದೆ ಕೆಲವರು 'ಜಗದ್ಗುರುಗಳ' ಪಟ್ಟವೇರಿದರೂ ಅಚ್ಚರಿಯಿಲ್ಲ. ತಾವು ಕಾರ್ಯಕ್ರಮ ಕೊಡುವ ವಾಹಿನಿಯಲ್ಲಿಯೇ ಇವರು ತಮ್ಮ ಅಂಗಡಿಯ ದೂರವಾಣಿ, ವಿಳಾಸ ಸಹಿತ ಜಾಹೀರಾತು ಕೂಡಾ ನೀಡುತ್ತಾರೆ. ಈ ಜ್ಯೋತಿಷಿಗಳಿಂದ ಭವಿಷ್ಯ ಹೇಳಿಸಿಕೊಂಡವರ ಭವಿಷ್ಯ ಏನಾಯಿತೋ ದೇವರಿಗೇ ಗೊತ್ತು ಆದರೆ ವ್ಯಾಪಾರ ತೀವ್ರಗತಿಯಲ್ಲಿ ವೃದ್ಧಿಯಾಗಿ ಈ ಜ್ಯೋತಿಷಿಗಳ ಭವಿಷ್ಯ ಮಾತ್ರ ಉಜ್ವಲವಾಗುತ್ತಾ ಹೋಗುತ್ತದೆ.

ಬಹುತೇಕ ವಾಹಿನಿಗಳಲ್ಲಿ ಚಿತ್ರ ವಿಚಿತ್ರ ವೇಷಭೂಷಣಗಳೊಂದಿಗೆ ಪ್ರತ್ಯಕ್ಷರಾಗುವ ಈ ಜ್ಯೋತಿಷಿಗಳು ನಡೆಸಿಕೊಡುವ ಇಂತಹ 'ಕಾಮಿಡಿ' ಕಾರ್ಯಕ್ರಮಗಳು ನಿಜಕ್ಕೂ ಅದ್ಭುತವಾಗಿರುತ್ತವೆ. ಯಾರಿಗೂ (ಪ್ರಾಯಶಃ ಅವರಿಗೂ) ಅರ್ಥವಾಗದ ಸಂಸ್ಕೃತ ಶ್ಲೋಕಗಳನ್ನು ಉದುರಿಸುತ್ತಾ ಅವರು ನಮ್ಮೆಲ್ಲರ ಭವಿಷ್ಯವನ್ನು ಹೇಳುತ್ತಿರುತ್ತಾರೆ. ಪ್ರೇಮ, ಪ್ರಣಯ, ಮದುವೆ, ದಾಂಪತ್ಯ ಸಂತಾನ, ಉದ್ಯೋಗ, ಆರೋಗ್ಯ ಹೀಗೆ ಹುಲುಮಾನವನ ಚಿಲ್ಲರೆ ಸಂಗತಿಗಳಿಗೂ ಎಲ್ಲೋ ದೂರದಲ್ಲಿ ತಮ್ಮ ಪಾಡಿಗಿರುವ ಗ್ರಹ ತಾರೆಗಳನ್ನೆಲ್ಲ ಗಂಟು ಹಾಕಿ, ಯಾವ ಯಾವ ಆಕಾಶಕಾಯಗಳೆಲ್ಲ ನಮ್ಮ ಮೇಲೆ ಕಣ್ಣಿಟ್ಟಿವೆ, ಯಾವ ಯಾವ ಆಕಾಶಕಾಯಗಳೆಲ್ಲ ನಮ್ಮ ಬಗ್ಗೆ ಮುನಿಸಿಕೊಂಡಿವೆ, ಅವನ್ನು ಸಂಪ್ರೀತಗೊಳಿಸುವುದು ಹೇಗೆ ಎಂದೆಲ್ಲ ಮಾರ್ಗದರ್ಶನ ನೀಡುತ್ತಾ ಭರ್ಜರಿ ಮನರಂಜನೆಯನ್ನು ನೀಡುತ್ತಿರುತ್ತಾರೆ. ಯಾರು ಏನೇ ಸಮಸ್ಯೆಯನ್ನು ಅವರ ಮುಂದಿಡಲಿ ಅದಕ್ಕೆ ಅವರಲ್ಲಿ ಪರಿಹಾರವಿದೆ. ಸಾಮಾನ್ಯವಾಗಿ ಅವರು ನೀಡುವ ಪರಿಹಾರಗಳಲ್ಲಿ ಅವರಿಗೇ ನಂಬಿಕೆ ಇರುವುದಿಲ್ಲ. ಆ ಮಾತು ಬೇರೆ. ಆದರೆ ಕೇಳುವವರು ಕುರಿಗಳು ಎಂದು ಗೊತ್ತಿರುವುದರಿಂದ ಮತ್ತು ತಮ್ಮ ಸಲಹೆಯಿಂದ ಅವರಿಗೇನೂ ಪ್ರಯೋಜನವಾಗದಿದ್ದರೂ ಅವರೇನೂ ಮಾಡುವುದಿಲ್ಲ ಎಂದು ಗೊತ್ತೇ ಇರುವುದರಿಂದ ಹಿಂದೆಮುಂದೆ ನೋಡದೆ ಅವರು ಪರಿಹಾರೋಪಾಯಗಳನ್ನು ಸೂಚಿಸುತ್ತಿರುತ್ತಾರೆ.

ಇನ್ನೇನು ಲೋಕಸಭಾ ಚುನಾವಣೆ ಬರಲಿದೆ. ಈ ಸಂದರ್ಭದಲ್ಲಿ ಯಾರು ಗೆಲ್ಲುತ್ತಾರೆ ಯಾರು ಸರಕಾರ ರಚಿಸುತ್ತಾರೆ ಎಂದು ಹೇಳುವುದು ಕಷ್ಟವಾದೀತು. ಆದರೆ, ಒಂದು ಭವಿಷ್ಯವನ್ನಂತೂ ನಾವು ಯಾರು ಬೇಕಾದರೂ ಹೇಳಬಹುದು - ಟಿವಿಗಳಲ್ಲಿ ಚಿಲ್ಲರೆ ಜ್ಯೋತಿಷಿಗಳೆಲ್ಲ ಕಾಣಿಸಿಕೊಂಡು ಅಭ್ಯರ್ಥಿಗಳು, ಪಕ್ಷ ಎಲ್ಲದರ ಭವಿಷ್ಯವನ್ನೂ ಹೇಳುತ್ತಾರೆ. ಯಾರು ಗೆಲ್ಲುತ್ತಾರೆ, ಯಾರು ಸರಕಾರ ಮಾಡುತ್ತಾರೆ ಎಲ್ಲವನ್ನೂ ಹೇಳುತ್ತಾರೆ. ಇವರು ಹೇಳುವುದೆಲ್ಲ ಬಹುಭಾಗ (ಫಿಫ್ಟಿ ಫಿಫ್ಟಿ ಭವಿಷ್ಯವಾಣಿಯನ್ನು ಯಾರು ಬೇಕಾದರೂ ಹೇಳಬಹುದು) ಮುಂದೆ ಸುಳ್ಳಾಗಿರುತ್ತದೆ. ಅದನ್ನು ಹೆಚ್ಚಾಗಿ ಯಾರೂ ಗಮನಿಸುವುದಿಲ್ಲ ಅಷ್ಟೆ.

2009ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಹೀಗೆಯೇ ಆಯಿತು. ಜ್ಯೋತಿಷಿಗಳಾದ ಭಾನುಪ್ರಕಾಶ್, ಶಂಕರ ಹೆಗ್ಡೆ ಮತ್ತು ಸಂಖ್ಯಾಶಾಸ್ತ್ರಿ ಎಂದು ಕರೆಸಿಕೊಳ್ಳುವ ವಿಜಯಕುಮಾರ್ ಎಂಬವರು ಟಿವಿ ವಾಹಿನಿಯೊಂದರಲ್ಲಿ ಕುಳಿತು ರೈಲುಬಿಡುತ್ತಿದ್ದರು. ತಮ್ಮದು ಶಾಸ್ತ್ರಸಮ್ಮತವಾದ ಜ್ಯೋತಿಷ್ಯ ಎಂದು ಹೇಳಿಕೊಳ್ಳುವ ಅವರ ಜ್ಯೋತಿಷ್ಯ ಹೇಗಿತ್ತೆಂದರೆ ವಿಷಯ ಒಂದೇ ಆದರೂ ಮೂರು ಜನ ಜ್ಯೋತಿಷಿಗಳಲ್ಲಿಯೇ ಪರಸ್ಪರ ಸಹಮತವಿರಲಿಲ್ಲ. ಆ ಮೂವರಲ್ಲಿ ಇಬ್ಬರು ಎನ್‌ಡಿಎ ಸರಕಾರ ಬಂದೇ ಬರುತ್ತದೆ ಎಂದು ಹೇಳುತ್ತಿದ್ದರು (ಅದು ಆತನ ಪ್ರಬಲ ಆಸೆಯಾಗಿದ್ದಿರಬೇಕು). ಅವರ ಭವಿಷ್ಯವಾಣಿಯ ಭವಿಷ್ಯವನ್ನು ಯಾರೂ ಕೂಡಾ ಅಂದಾಜಿಸಬಹುದಾಗಿತ್ತು. ಆದರೆ ನನಗಾದರೋ ಒಂದು ರೀತಿಯ ಕುತೂಹಲ. ಹಾಗಾಗಿ ಪೆನ್ನು ಕಾಗದ ಹಿಡಿದು ಕುಳಿತೆ. ಅವರು ಹೇಳಿದ ಭವಿಷ್ಯವಾಣಿ ಮುಂದೆಂದಾದರೂ ಉಪಯೋಗಕ್ಕೆ ಬರಬಹುದು ಎಂದು ಹಾಗೆಯೇ ದಾಖಲಿಸಿಟ್ಟೆ. ಅದು ಹೇಗಿತ್ತು ಎನ್ನುವುದನ್ನು ನೀವೇ ಓದಿ.

ಎನ್‌ಡಿಎ 180 ಸ್ಥಾನಗಳೊಂದಿಗೆ ಅಧಿಕಾರಕ್ಕೆ ಬರುತ್ತದೆ, ಅಡ್ವಾಣಿ ಪ್ರಧಾನಿ ಆಗುತ್ತಾರೆ, ಮಾಯಾವತಿ ಎನ್‌ಡಿಎ ಸೇರಿಕೊಳ್ಳುತ್ತಾರೆ, ಜಯಲಲಿತಾ ಎನ್‌ಡಿಎ ಯನ್ನು ಬೆಂಬಲಿಸುತ್ತಾರೆ, ಚಿರಂಜೀವಿ ಗೆದ್ದು ಎನ್‌ಡಿಎ ಯನ್ನು ಬೆಂಬಲಿಸುತ್ತಾರೆ, ಧರಂ ಸಿಂಗ್‌ಗೆ ಸೋಲಾದರೂ ಮುಂದೆ ಅವರಿಗೆ ಅಧಿಕಾರ ಬರುತ್ತದೆ, ಖರ್ಗೆ ಗೆಲ್ಲೋದೇ ಕಷ್ಟ ಇದೆ ಅವರೆದುರು ರೇವೂ ನಾಯಕ್ ಬೆಳಮಗಿ ಗೆಲ್ಲುತ್ತಾರೆ, ಮುನಿಯಪ್ಪಗೆ ಅಧಿಕಾರ ಯೋಗ ಇಲ್ಲ ಅವರು ಸೋಲುತ್ತಾರೆ, ಸದಾನಂದ ಗೌಡರು ಗೆದ್ದು ಕೇಂದ್ರದಲ್ಲಿ ಮಂತ್ರಿಯಾಗಿ ಕೀರ್ತಿ ಪಡೆಯುತ್ತಾರೆ - ಇವೆಲ್ಲ ಭಾನುಪ್ರಕಾಶ್ ಎಂಬವರು ಹೇಳಿದ ಭವಿಷ್ಯ ವಾಣಿ.

ಬಂಗಾರಪ್ಪ ಕಷ್ಟಪಟ್ಟು ಗೆಲ್ಲುತ್ತಾರೆ, ಧರಂ ಸಿಂಗ್‌ಗೆ ಅಧಿಕಾರ ಪಡೆಯುವ ಯೋಗ ಇದೆ. ಮುನಿಯಪ್ಪ ಸೋಲುತ್ತಾರೆ, ಚುನಾವಣೆಯಲ್ಲಿ ಕಾಂಗ್ರೆಸ್ ಮುನ್ನಡೆ ಪಡೆಯುತ್ತದೆ, ಆದರೆ ಸೆಪ್ಟಂಬರ್ 2009 ರ ನಂತರ ಬಿಜೆಪಿ ಬರುತ್ತದೆ - ಹೀಗೆಲ್ಲ ಘೋಷಿಸಿದವರು ಶಂಕರ ಹೆಗ್ಡೆ.

ಸೋನಿಯಾ ಗೆಲ್ಲುತ್ತಾರೆ ಆದರೆ ಅವರ ಪಕ್ಷ ಗೆಲ್ಲುವುದಿಲ್ಲ, ಶರದ್ ಪವಾರ್ ಯುಪಿಎಯಲ್ಲಿ ಉಳಿಯುವುದಿಲ್ಲ ಅವರು ಬಿಜೆಪಿಯನ್ನು ಬೆಂಬಲಿಸುತ್ತಾರೆ, ಮಾಯಾವತಿ ಬಿಜೆಪಿಯನ್ನು ಸೇರಿಕೊಳ್ಳುತ್ತಾರೆ. ಚಿರಂಜೀವಿ ಆಂಧ್ರ ವಿಧಾನ ಸಭೆಯಲ್ಲಿ ಅಧಿಕಾರಕ್ಕೆ ಬರುತ್ತಾರೆ, ಅವರ ಪಕ್ಷಕ್ಕೆ ಆಂಧ್ರದಲ್ಲಿ 14 ಲೋಕಸಭಾ ಸ್ಥಾನ ಸಿಗುತ್ತದೆ, ಅನಂತಕುಮಾರ್ ಗೆದ್ದು ಕೇಂದ್ರದಲ್ಲಿ ಮಂತ್ರಿ ಆಗುತ್ತಾರೆ, ಮುನಿಯಪ್ಪ ಅಧಿಕಾರ ಕಳೆದುಕೊಳ್ಳುತ್ತಾರೆ, ಮೊಯ್ಲಿ ಸೋತು ಮೂರನೆ ಸ್ಥಾನಕ್ಕೆ ತೃಪ್ತಿಪಡೆಯಬೇಕಾಗುತ್ತದೆ, ಅಡ್ವಾಣಿ ಪ್ರಧಾನಿಯಾಗುತ್ತಾರೆ, ಬಿಜೆಪಿಗೆ 205 ಸೀಟು ಬರುತ್ತದೆ - ಇದು ಸಂಖ್ಯಾಶಾಸ್ತ್ರಿ ವಿಜಯಕುಮಾರ್ ಹೇಳಿದ ಭವಿಷ್ಯವಾಣಿ.

ಇವರ ಭವಿಷ್ಯವಾಣಿ ಏನಾಯಿತು ಎಂಬುದರ ಪುರಾವೆ ನಮ್ಮ ಮುಂದೆಯೇ ಇದೆ. ಮುನಿಯಪ್ಪ ಸೋಲುತ್ತಾರೆ ಎಂದು ಮೂವರು ಜ್ಯೋತಿಷಿಗಳೂ ಹೇಳಿದ್ದರು. ಆದರೆ ಅವರು ಗೆದ್ದುದು ಮಾತ್ರವಲ್ಲ ಐದೂ ವರ್ಷ ಕೇಂದ್ರದ ಮಂತ್ರಿಯಾಗಿದ್ದರು. ಖರ್ಗೆ ಗೆಲ್ಲುವುದು ಕಷ್ಟ ಎಂದು ಭವಿಷ್ಯ ಹೇಳಿದ್ದರು. ಆದರೆ ಅವರು ಗೆದ್ದುದು ಮಾತ್ರವಲ್ಲ ಕೇಂದ್ರದಲ್ಲಿ ರೈಲ್ವೆ ಖಾತೆಯಂತಹ ಅತ್ಯಂತ ಪ್ರಮುಖ ಖಾತೆಯನ್ನು ನಿಭಾಯಿಸಿದರು; ಅತ್ಯಂತ ದಕ್ಷ ಮತ್ತು ಪ್ರಾಮಾಣಿಕ ಮಂತ್ರಿ ಎಂಬ ಹೆಗ್ಗಳಿಕೆಗೂ ಪಾತ್ರರಾದರು. ಎನ್‌ಡಿಎ 205 ಸ್ಥಾನಗಳೊಂದಿಗೆ ಅಧಿಕಾರಕ್ಕೆ ಬರುತ್ತದೆ, ಅಡ್ವಾಣಿ ಪ್ರಧಾನಿ ಆಗುತ್ತಾರೆ ಎಂದೂ ಭವಿಷ್ಯ ನುಡಿದರು. ಅವರು ಪ್ರಧಾನಿ ಆಗಲಿಲ್ಲ ಮಾತ್ರವಲ್ಲ ಮೋದಿ ಮಹಾತ್ಮೆಯಿಂದಾಗಿ ಎಂದೆಂದೂ ಪ್ರಧಾನಿಯಾಗದಂತಾಗಿದೆ. ಹೇಗಿದೆ ಈ ಮಹಾನ್ ಜ್ಯೋತಿಷಿಗಳ ಭವಿಷ್ಯವಾಣಿಗಳು.

● ಶ್ರೀನಿವಾಸ ಕಾರ್ಕಳ,
ಮಂಗಳೂರು

...ತ್ಯದಲ್ಲೂ ಮೋದಿಗೆ 'ಸೊನ್ನೆ'!

...ಗುಜರಾತಿನಲ್ಲಿ ನಿಜವಾಗಿ 'ಅಭಿವೃದ್ಧಿ' ಆಗಿರುವುದು ಕಾರ್ಪೋರೇಟ್ ಧಣಿಗಳೆಂಬ-...ವಂಶವೀಗ ನಿಧಾನವಾಗಿ ಜನರ ಅರಿವಿಗೆ ಬರುತ್ತಿದೆ. ಅಲ್ಲಿ ಸಾಕಷ್ಟು 'ಅಭಿವೃದ್ಧಿ' ...ರುವ ಇನ್ನೊಂದು ಕ್ಷೇತ್ರವೂ ಇದೆ. ಅದೇ ಪಠ್ಯಪುಸ್ತಕಗಳ ಕೇಸರೀಕರಣ. ಇತ್ತೀಚಿನ ...ಗಳ ಪ್ರಕಾರ ಅಲ್ಲಿ ಪಠ್ಯಪುಸ್ತಕಗಳ ಗುಣಮಟ್ಟ ಕೂಡ ಅತ್ಯಂತ ಕಳಪೆಯಾಗಿದೆ. ...ಹರಗಳಿಗೆ ಆಂಗ್ಲ ಮಾಧ್ಯಮದ 6, 7 ಮತ್ತು 8ನೇ ತರಗತಿಯ ಸಮಾಜ ವಿಜ್ಞಾನ ...ಗಳಲ್ಲಿ ಸಮಾಜ ಸುಧಾರಕರು, ಕ್ರಾಂತಿಕಾರಿಗಳು ಮತ್ತು ಅವರ ಸಾಧನೆಗಳ ...ಪಾಠಗಳಲ್ಲಿ ಅನೇಕ ತಪ್ಪುಗಳಿವೆ. ಇದೇ ಪಠ್ಯಪುಸ್ತಕದಲ್ಲಿ ವಾಸ್ತವಾಂಶಗಳಿಗೆ ...ಧಪಟ್ಟಂತೆ 59 ಮತ್ತು ಕಾಗುಣಿತಕ್ಕೆ ಸಂಬಂಧಪಟ್ಟಂತೆ 100ಕ್ಕೂ ಅಧಿಕ ...ಗಳಿರುವುದನ್ನು ಪತ್ತೆ ಹಚ್ಚಲಾಗಿದೆ. 8ನೆ ತರಗತಿಯ ಸಮಾಜ ವಿಜ್ಞಾನ ಪಠ್ಯದಿಂದ ಕೆಲವು ಅಣಿಮುತ್ತುಗಳು ಇಲ್ಲಿವೆ.

❖ ಪುಸ್ತಕದ ಮೊದಲ ಅಧ್ಯಾಯದ ಹೆಸರು 'ಸಾಮಾಜಿಕ-ಧಾರ್ಮಿಕ ಜಾಗೃತಿ'. ...ವಲ 7 ಸುಧಾರಕರನ್ನಷ್ಟೆ ಹೆಸರಿಸಲಾಗಿದೆ. ಈಶ್ವರಚಂದ್ರ ವಿದ್ಯಾಸಾಗರ, ಪಂಡಿತಾ ...ಮಾಬಾಯಿ, ವೀರೇಶಲಿಂಗಂ ಪಂತುಲು, ಹೆನ್ರಿ ಡಿರೋಜಿಯೊ, ಕೇಶಬ್ ಚಂದ್ರ ಸೇನ್, ...ರಾಮಸ್ವಾಮಿ ನಾಯ್ಕರ್ (ಪೆರಿಯಾರ್)ರಂಥವರ ಹೆಸರುಗಳೆಲ್ಲ ನಾಪತ್ತೆಯಾಗಿವೆ.

❖ ರಾಜಾ ರಾಮಮೋಹನ ರಾಯ್ 'ಸತಿ ಮತ್ತು ಮದ್ಯಸೇವನೆ' ಎಂಬ ಎರಡು ...ಪದ್ಧತಿ'ಗಳ ವಿರುದ್ಧ ಹೋರಾಡಿದರು ಎಂದಷ್ಟೆ ಬರೆಯಲಾಗಿದ್ದು ಈ ಪದ್ಧತಿಗಳ ...

❖ ಮಹಾತ್ಮ ಗಾಂಧಿ ತನ್ನ ಪ್ರಪ್ರಥಮ ಸತ್ಯಾಗ್ರಹ ಆಶ್ರಮವನ್ನು ಅಹಮದಾಬಾದಿನ ಕೋಕ್ರಾಬ್ ಎಂಬಲ್ಲಿ 1925ರ ಮೇ ತಿಂಗಳಲ್ಲಿ ಸ್ಥಾಪಿಸಿದರಂತೆ! (ವಾಸ್ತವವಾಗಿ ಇದು ಆಗಿರುವುದು 1915ರಲ್ಲಿ).

❖ ಮಹಾತ್ಮ ಗಾಂಧಿಯ ಹತ್ಯೆಯಾಗಿರುವುದು ಅಕ್ಟೋಬರ್ 30, 1948ರಂದು ಅಂತೆ!

❖ ದ್ವಿತೀಯ ಜಾಗತಿಕ ಯುದ್ಧದಲ್ಲಿ ಜಪಾನ್ ಅಮೆರಿಕದ ಮೇಲೆ ಬಾಂಬ್ ದಾಳಿ ನಡೆಸಿತ್ತಂತೆ!

❖ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ದಾದಾಭಾಯಿ ನವರೋಜಿ, ಸುರೇಂದ್ರನಾಥ ಬ್ಯಾನರ್ಜಿ, ಗೋಪಾಲ ಕೃಷ್ಣ ಗೋಖಲೆ ಮೊದಲಾದ ಕಾಂಗ್ರೆಸ್ಸಿಗರು ಪಕ್ಷದ 'ತೀವ್ರವಾದಿ' ಬಣಕ್ಕೆ ಸೇರಿದವರೆಂದು ಪರಿಗಣಿಸಲ್ಪಟ್ಟಿದ್ದರಂತೆ! (ವಾಸ್ತವವಾಗಿ ಇವರೆಲ್ಲರೂ ಮಂದಗಾಮಿಗಳಾಗಿದ್ದರು).


❖ 1947ರ ವಿಭಜನೆಯ ನಂತರ 'ಇಸ್ಲಾಮಿಕ್ ಇಸ್ಲಾಮಾಬಾದ್' ಎಂಬ ನೂತನ ದೇಶ ಅಸ್ತಿತ್ವಕ್ಕೆ ಬಂದಿತಂತೆ! ಇದರ ರಾಜಧಾನಿ ಹಿಂದೂಕುಶ್ ಪರ್ವತಾವಳಿಯಲ್ಲಿರುವ ಖೈಬರ್ ಕಣಿವೆಯಂತೆ!

❖ ಭಾರತದ ದಕ್ಷಿಣ ಭಾಗದಲ್ಲಿರುವವರೆಲ್ಲ 'ಮದ್ರಾಸಿ'ಗಳಂತೆ!

❖ ಪುರಿಯ ರಥಯಾತ್ರೆ ದಕ್ಷಿಣ ಭಾರತೀಯ ಹಬ್ಬಗಳಲ್ಲೊಂದಂತೆ!

❖ ಭಾರತದ ಪೂರ್ವ ಭಾಗದ ಜನ ಬಿದಿರು ಮತ್ತು ಮರದಿಂದ ಕಟ್ಟಿದ ಮನೆಗಳಲ್ಲಿ ವಾಸಿಸುತ್ತಾರಂತೆ!

(<http://timesofindia.indiatimes.com>; 'The Hindu')





ಲಂಕೇಶ್ ಎಂಬ ಮೇಷ್ಟ್ರು

ಈತ ನಮ್ಮನ್ನು ಚುರುಕುಗೊಳಿಸುತ್ತಾನೆ. ಮತ್ತೆ ಮತ್ತೆ ಮನಸ್ಸಿಗೆ ಬಂದು ಹೊಸ ಹೊಸ ತಿಳಿವಳಿಕೆಗೆ ಕಾರಣವಾಗುವ ಈತನನ್ನು ನಿಮ್ಮೊಂದಿಗೆ ನೆನೆಯಲು ಬಯಸುತ್ತೇನೆ. ಈತ 'ಮೇಷ್ಟ್ರಾಗಿದ್ದ'. ಪತ್ರಿಕೆ ಮೂಲಕ ನಾಡಿನ ಜನಕ್ಕೆ ಉಪದೇಶ ಮಾಡುತ್ತಿದ್ದ. ನಾಡಿನ ಮೂಲೆಯಲ್ಲಿ ಎಲ್ಲಿಯೇ ತೊಂದರೆ ಆದರೂ ಪತ್ರಿಕೆಯ ಮೂಲಕ ಅದಕ್ಕೆ ಪರಿಹಾರ ಹುಡುಕುತ್ತಿದ್ದ. ಕಪಟ ರಾಜಕಾರಣಿಗಳನ್ನು, ಸಾಹಿತಿಗಳನ್ನು ಸಾರಾಸಗಟಾಗಿ ತಿರಸ್ಕರಿಸುತ್ತಿದ್ದ. ಜಾತಿವಾದಿಗಳನ್ನು, ಜಗದ್ಗುರುಗಳನ್ನು, ಮಠಗಳನ್ನು ಸದಾ ಸಂಶಯದಿಂದಲೇ ನೋಡುತ್ತಿದ್ದ.

ಈತ 'ಮನುಷ್ಯರ' ನಡುವೆ ಇರಲು ಬಯಸುತ್ತಿದ್ದ. ಮನುಷ್ಯರಿಗೆ ಬೇಕಾದದ್ದು ಪ್ರೀತಿ, ಅನುಕಂಪ, ಆತ್ಮಾಭಿಮಾನ, ಕ್ರಿಯಾಶೀಲತೆ, ಕುತೂಹಲ, ಸಂತೋಷ, ಆಶ್ಚರ್ಯಗಳು ಎಂದು ಮುಗ್ಧತೆಯಿಂದ ಹೇಳುತ್ತಿದ್ದ. ಆಗ ತಾನೆ ಹೊಸ ಜಗತ್ತಿಗೆ ಕಣ್ಣು ಬಿಟ್ಟ ಮಗುವಿನಂತೆ, ಕೂಡಲೇ ಕಣ್ಣು ಮುಚ್ಚುವ ಹಿರಿಯನಂತೆ ಯೋಚಿಸುತ್ತಿದ್ದ. 'ಒಂದು ದಿನ ಸುಮ್ಮನೆ ಜೀವಿಸಿದೆ' ಎನ್ನುತ್ತಲೇ ಬಾಲ್ಕನಿಯಲ್ಲಿ ನಿಂತು ಬೆಳಗಿನ ಬಯಲಲ್ಲಿ ಮಲವಿಸರ್ಜನೆಗೆ ಕೂತ ಹೆಣ್ಣು ಮಕ್ಕಳನ್ನು ಕಂಡು ಕನಿಷ್ಠ ಖರ್ಚಿನಲ್ಲಿ ಶೌಚಾಲಯಗಳ ನಿರ್ಮಾಣ ಕೂಡ ಈ ಸರ್ಕಾರಕ್ಕೆ ಸಾಧ್ಯವಿಲ್ಲವೇ ಎಂದು ಯೋಚಿಸುತ್ತಿದ್ದ! ನಗರದ ಹಣ ಹಳ್ಳಿಗೆ ಹರಿಯಬೇಕು ಎನ್ನುತ್ತಿದ್ದ.

ಪತ್ರಿಕೆಯ ಮೂಲಕ ತನ್ನೊಳಗಿನ ಕಿಚ್ಚು, ಸ್ವಾರ್ಥ, ಒಳ್ಳೆಯದು, ಕೆಟ್ಟದ್ದು, ಭಾವನೆ ಬದುಕು, ಕ್ರಿಯಾಶೀಲತೆ ತಿಳಿಸಿದ. ಪತ್ರಕರ್ತನೊಬ್ಬ ಕೇವಲ ಬರೆಯಬಾರದು, ಕೇವಲ ಸ್ಪಂದಿಸಬಾರದು, ಇವುಗಳ ಜೊತೆ ಸದಾ ಮಾತಾಡುತ್ತಿರಬೇಕು ಎನ್ನುತ್ತಿದ್ದ. ಈಗ 'ಮಾತಾಡುವ' ವೃತ್ತಿಯಿಂದ ನುಡಿಯುವ ವೃತ್ತಿಗೆ ಬಂದೆ ಎಂದು ಜಾಣ-ಜಾಣೆಯರಿಗೆ ಹೇಳುತ್ತಿದ್ದ.

ಸಾಯುವತನಕ ಬದುಕುವ ಮತ್ತು ಬರೆಯುವ ಹುಮ್ಮಸ್ಸನ್ನಿಟ್ಟುಕೊಂಡಿದ್ದ. ಬೆಳಗನ್ನು ಬೇಂದ್ರೆಯಂತೆ, ಸಂಜೆಯನ್ನು ಕುವೆಂಪುನಂತೆ, ಮಧ್ಯಾಹ್ನವನ್ನು ಕಾರಂತರಂತೆ ನೋಡುತ್ತಿದ್ದ ಈತ. ಡಿಸೆಂಬರ್ ಚಳಿಯಲ್ಲಿ ಬೆಂಗಳೂರಿನ ರಸ್ತೆಗಳು ತಣ್ಣಗೆ ಮತ್ತು ಈಗತಾನೆ ಹೆಣ್ಣಾಗುತ್ತಿರುವ ಹುಡುಗಿ ಎಂದು ಹೇಳುತ್ತಲೇ, ಫುಟ್‌ಪಾತ್‌ನಲ್ಲಿ ಹೊದೆಯಲು ಇಲ್ಲದೆ, ಕೈಗಳನ್ನು ತೊಡೆಯ ಸಂಧಿಯಲ್ಲಿಟ್ಟು ಮಲಗಿದ ಜನರನ್ನು ನೋಡುತ್ತಲೇ ಶ್ರೀಮಂತರ ಮನೆಯಲ್ಲಿ ಬೆಚ್ಚಗೆ ಮಲಗಿರುವ ನಾಯಿಗಳ ನೆನಪು ಮಾಡಿಕೊಳ್ಳುತ್ತಿದ್ದ. "ನನ್ನ ಈ ದೇಶದಲ್ಲಿ ಮಾತ್ರ ಮನುಷ್ಯರು ನಾಯಿಗಳಿಗಿಂತ ಎಲ್ಲದರಲ್ಲೂ ಕಡಿಮೆ ಬೆಲೆಯುಳ್ಳವರಾಗಿದ್ದಾರೆ" ಎನ್ನುತ್ತಿದ್ದ.

ಈತನದು ಬೈಗುಳ ಭಾಷೆ ಎನ್ನುವವರೂ ಇದ್ದಾರೆ. ಆದರೆ ಆ ಬೈಗುಳದ ಹಿಂದೆ 'ಸಾಮಾಜಿಕ ರೋಗ'ದ ವಿರುದ್ಧದ ಧ್ವನಿ ಇರುತ್ತಿತ್ತು. ಈತನದು ನಿಜಕ್ಕೂ ವೈಯಕ್ತಿಕತೆಯನ್ನು ಮೀರಿದ ಬರವಣಿಗೆ; ವಸ್ತುನಿಷ್ಠವಾಗಿ ಬರೆಯುವುದು ಈತನ ಕಸುಬು. ಅತ್ಯಂತ ಕ್ಲಿಷ್ಟತೆಗಳನ್ನು ಸರಳತೆಯಲ್ಲಿ ಹೇಳುವುದು, ತನ್ನೊಳಗಿನ ಭಾವುಕ ಸ್ಥಿತಿಯನ್ನು ಹೊರ ಜಗತ್ತಿಗೆ ಸೇರಿಸುವುದು ಈತನ ಸ್ವಭಾವ.

ಈತನ ಪತ್ರಿಕೆ ಕೂಡ ಒಂದು ವಿಸ್ಮಯ. ಒಂದೇ ಸಾಲಿನಲ್ಲಿ ಹೇಳಬೇಕೆಂದರೆ 'ವಿಷವಿರದ ಪತ್ರಿಕೆ'ಯಿದು. ಈತನಿಂದ ಬೈಸಿಕೊಂಡವರೂ ಈತನನ್ನು ಪ್ರೀತಿಸುತ್ತಿದ್ದದ್ದು ಇದಕ್ಕೆ ಸಾಕ್ಷಿ. "ಇಟ್ಟಿಗೆ ಪವಿತ್ರವಲ್ಲ, ಜೀವ ಪವಿತ್ರ" ಎನ್ನುತ್ತಲೇ ಗುಬ್ಬಚ್ಚಿಯ ಗೂಡಿನ ಬಗ್ಗೆ ಹೇಳುತ್ತಿದ್ದ. ಬುದ್ಧನನ್ನು ಬಹುವಾಗಿ ಪ್ರೀತಿಸುತ್ತಿದ್ದ ಈತ ಗಾಂಧೀಜಿಯಲ್ಲೂ ಬುದ್ಧನನ್ನು ಕಂಡ. ಕೆಟ್ಟ ರಾಜಕಾರಣಿಗಳನ್ನು ಖದೀಮ, ಮೂರ್ಖ ಎಂದೆಲ್ಲಾ ಕರೆಯುತ್ತಿದ್ದ. ಒಂದು ಬೆಳಗಿನಲ್ಲಿ ಹತ್ತು ವರ್ಷದ ಎರಡು ಜಡೆಯ ಪುಟ್ಟ ಹುಡುಗಿಗೆ 'ಬೈಸಿಕಲ್' ಕಲಿಸಿ ಸಂಭ್ರಮಿಸಿದ.

ಈತ ಯಾರೆಂದು ಹೇಳಬೇಕಾಗಿಲ್ಲ ತಾನೇ...!

ಹೌದು. ಇವರು ನಮ್ಮ ಲಂಕೇಶ್ ಮೇಷ್ಟ್ರು.

ಲಂಕೇಶ್ ಪತ್ರಿಕೆ ಎಂದರೆ ಅದೊಂದು ವಿಶ್ವವಿದ್ಯಾಲಯ. ಇಲ್ಲಿ ಮಾಸ್ಟರ್ ಡಿಗ್ರಿ ಪಡೆದವರು ಇಂದು ತಾವೇ ಮಾಸ್ಟರ್ ಆಗಿದ್ದಾರೆ. ಲಂಕೇಶ್ ಎಂದಾಕ್ಷಣ ನಮಗೆ ತಟ್ಟನೆ ನೆನಪಾಗುವುದು ಅವರ 'ಅವ್ವ' ಕವನ. ಕರ್ನಾಟಕದ ಲಕ್ಷಾಂತರ ಸಾಹಿತ್ಯ ಪ್ರೇಮಿಗಳಿಗೆ ಇಷ್ಟವಾದ ಕವನ. ನನಗೆ ನನ್ನದೇ ಆದ ಕಾರಣಕ್ಕೆ ಈ ಕವಿತೆ ಇಷ್ಟವಾಗುತ್ತದೆ. ನಮ್ಮೂರು ಎರೆಭೂಮಿಯ ದ್ವೀಪ. ಈ ಎರೆಭೂಮಿಯನ್ನು ನೋಡಿದಾಗಲೆಲ್ಲಾ ಲಂಕೇಶ್ ನೆನಪಾಗುತ್ತಾರೆ. ಈಗಲೂ ಎರೆಹೊಲಗಳಲ್ಲಿ ದುಡಿಯುವ ಜೀವಗಳನ್ನು ಕಂಡಾಗ ಲಂಕೇಶರ ಅವ್ವ ನೆನಪಾಗುತ್ತಾಳೆ. ಶ್ರಮದ ಸಂಸ್ಕೃತಿ ಬಿಚ್ಚಿಕೊಳ್ಳುತ್ತದೆ. ಅಲ್ಲಿಯ ಹತ್ತಿಯ ಬಿಳಿ ಹೂಗಳನ್ನು ಕಂಡಾಗ ಲಂಕೇಶರೇ ಬಿಳಿ ಹೂವಾಗಿ ಬಿರಿದಿದ್ದಾರೆ ಎನಿಸುತ್ತದೆ. ಹತ್ತಿಯ ಹಸಿರು ಕಾಯಿ ತನಗೆ ತಾನೇ ಬಿರಿದು ಹೂವಾಗುವುದು ಪ್ರಕೃತಿಯ ವಿಸ್ಮಯ. ಲಂಕೇಶ್ ಎಂಬ ಸಾಹಿತ್ಯದ ಹಸಿರು ಕಾಯಿ ತನಗೆ ತಾನೇ ಬಿರಿದು 'ಅವ್ವ'ಳಾಗಿ ಅರಳಿದ್ದಾಳೆ.

'ಅವ್ವ' ಕವನದ ತುಂಬಾ 'ದೇಸಿ' ಪದಗಳು ಎರೆಮಣ್ಣಿನ ಫಲವತ್ತಾದ ಭೂಮಿಯಂತೆ ಕಂಡುಬರುತ್ತವೆ. ಕಸುವು, ಪಚ್ಚೆತೋಳ, ತೋಳಬಂಧಿ, ಹೆಂಟೆ, ಮೊಗೆನೀರು, ಅವರೆ, ತೊಗರಿ, ಹೋಳಿಗೆ, ಸತ್ತ ಕರು, ತಪ್ಪಿಸಿಕೊಂಡ ಎಮ್ಮೆ, ಕಾಳುಕಡ್ಡಿ, ರೊಟ್ಟಿ, ಹಚಡ, ಸಾಕರು... ಹೀಗೆ ಇಡೀ ಕವನ ಹಳ್ಳಿ ಸೊಗಡು ಪದಗಳಿಂದ ತುಂಬಿಹೋಗಿದೆ. ಅವರು ಅವ್ವನನ್ನು ಕುರಿತು ಹೀಗೆ ಹೇಳುತ್ತಾರೆ: "ಈಕೆ ಉಳಿದಿದ್ದಾಳು, ಮಗ ಕೆಟ್ಟರೆ ಗಂಡ ಬೇರೆ ಕಡೆ ಹೋದಾಗ ಮಾತ್ರ". ಹಳ್ಳಿಯ ಹೆಣ್ಣು ಮಗಳೊಬ್ಬಳ ತಲ್ಲಣ ಇಲ್ಲಿದೆ. ಹಾಗೆ ಅವರು ಮುಂದುವರೆದು ಹೇಳುತ್ತಾರೆ: "ನನ್ನವ್ವ ಬದುಕಿದ್ದು ಕಾಳು ಕಡ್ಡಿಗೆ, ದುಡಿತಕ್ಕೆ, ಮಕ್ಕಳಿಗೆ ಮೇಲೊಂದು ಸೂರು, ಅನ್ನ ರೊಟ್ಟಿ ಹಚಡಕ್ಕೆ, ಸರೀಕರ ಎದುರು ತಲೆ ಎತ್ತಿ ನಡೆಯಲಿಕ್ಕೆ". ಎಷ್ಟೊಂದು ಅರ್ಥಗರ್ಭಿತ ಮಾತುಗಳು. ತಾಯಿಯ ಬಗ್ಗೆ ಲಕ್ಷಾಂತರ ಲೇಖನಗಳು, ಕಥೆಗಳು, ಸಿನಿಮಾಗಳು, ಪದ್ಯಗಳು ಹೊರಬಂದಿವೆ. ಆದರೆ ಲಂಕೇಶರು ಅವ್ವನನ್ನು ಬೇರೆಯಾಗಿಯೇ ನಿಲ್ಲಿಸುತ್ತಾರೆ. ಅವರ ಅವ್ವ ಎಂಬ ಶಬ್ದವೇ ತಾಯಿ, ಮಾತೃದೇವತೆ, ಅಮ್ಮ ಮುಂತಾದ ಸಾಂಪ್ರದಾಯಿಕ ಪದಗಳಿಗಿಂತ ಭಿನ್ನವಾದುದು, ಆಪ್ತವಾದುದು. ಲಂಕೇಶ್ ಅವ್ವ ಬರೆದ ನಂತರ ದೊಡ್ಡ ದೊಡ್ಡ ಸಾಹಿತಿಗಳು ಎಷ್ಟೇ ಚೆನ್ನಾಗಿ ಅವ್ವನ ಬಗ್ಗೆ ಬರೆದಿದ್ದರೂ ಕೂಡ ಅವು ಸಪ್ಪೆಯಾಗಿಬಿಟ್ಟವು. ಬಹುಶಃ ಲಂಕೇಶರು ಅವ್ವ ಕವನ ಬರೆಯದಿದ್ದರೆ ಅವು ಪ್ರತ್ಯೇಕವಾಗಿ ದೊಡ್ಡ ಸ್ಥಾನ ಪಡೆಯುತ್ತಿದ್ದವೋ ಏನೋ. ಅಷ್ಟೇಕೆ ಲಂಕೇಶರೇ ಅವ್ವದ ಎರಡನೇ ಭಾಗ ಬರೆದರು. ಅದೂ ಕೂಡ ಸಪ್ಪೆಯೇ. ಹಾಗಾಗಿ ಆನಂತರ ಬಂದ ಕವಿಗಳಿಗೆ ಅವ್ವ ಒಂದು ಸ್ಫೂರ್ತಿ.

ಲಂಕೇಶರನ್ನು ನಾನು ಮೊದಲು ನೋಡಿದ್ದು ಅವರಿಗೆ 'ಪಲ್ಲವಿ' ಸಿನಿಮಾಕ್ಕೆ ಪ್ರಶಸ್ತಿ ಬಂದಾಗ. ಅವರು ನೊಣಬರು ಎಂಬ ಕಾರಣಕ್ಕೆ ನಮ್ಮೂರಿನ ಪಕ್ಕದಲ್ಲಿರುವ ಕೆಂಚಿಕೊಪ್ಪದ ಕೆಲ ನೊಣಬ ಮುಖಂಡರು ಅವರನ್ನು ಸನ್ಮಾನಕ್ಕೆ ಕರೆದಿದ್ದರು. ಕೆಂಚಿಕೊಪ್ಪಕ್ಕೆ ಹೋಗಲು ನಮ್ಮೂರು ಆರುಂಡಿಯ ಮೇಲೆ ಸಾಗಬೇಕು. ಲಂಕೇಶರು ಬರುತ್ತಿದ್ದಾರೆಂದು ಅರಿತ ನನ್ನಂತಹ ಹಲವು ಹುಡುಗರು ಊರ ಅಗಸೇಬಾಗಿಲಿನಲ್ಲಿ ಗಂಟೆಯಿಂದಲೇ ಕಾಯುತ್ತ ನಿಂತಿದ್ದೆವು. ಆಗ ನಾನು ಅವರ 'ಮುಸ್ಸಂಜೆ ಕಥಾಪ್ರಸಂಗ'ವನ್ನು ಓದಿದ್ದೆ ಎಂಬ ನೆನಪು. ಕಾರಿನಲ್ಲಿ ಬಂದ ಅವರನ್ನು ನಮ್ಮೂರಿನ ಹಿರಿಯ ಮೇಷ್ಟ್ರು ನಾಗೇಂದ್ರಪ್ಪ ಮತ್ತಿತರರು ಸ್ವಾಗತಿಸಿದರು. ನಾನಂತೂ ಯಾರಿಗೂ ಕಾಣದ ಹಾಗೆ ಅವರ ಕೈಮುಟ್ಟಿದ್ದೆ. ಅವರ ಸ್ಪರ್ಶವೇ ಅದೇನೋ ಹೊಸ ಅನುಭವವನ್ನು ನೀಡಿತ್ತು. ಮೇಷ್ಟ್ರುಗಳ ಬಗ್ಗೆ ತುಂಬಾ ಗೌರವ ಇಟ್ಟುಕೊಂಡಿದ್ದ ಅವರು, ನಮ್ಮೂರಿನ ಹಲವು ಮೇಷ್ಟ್ರನ್ನು ಪ್ರೀತಿಯಿಂದ ಮಾತನಾಡಿಸಿ ಕಾರು ಹತ್ತಿದರು. ಆ ನೆನಪು ನನ್ನನ್ನು ಇನ್ನೂ ಕಾಡುತ್ತಲೇ ಇರುತ್ತದೆ. ನಂತರ ಕೆಂಚಿಕೊಪ್ಪದಲ್ಲಿ ಅವರಿಗೆ ಶಾಲು ಹೊದಿಸಿ ಸನ್ಮಾನ ಮಾಡಿದರು. ಲಂಕೇಶ್ ಆಗ ನೊಣಬ ಮುಖಂಡರಿಗೆ ಬೈದದ್ದು ನನಗಿನ್ನೂ ನೆನಪಿದೆ.

ಲಂಕೇಶರಿಗೂ ನನಗೂ ವಯಸ್ಸಿನಲ್ಲಿ ಬಹಳ ಅಂತರವಿದೆ. ಆದರೆ ಪತ್ರಿಕೆಯ ಓದಿನ ಸೆಳೆತ ನಮ್ಮನ್ನು ಹತ್ತಿರ ತರುತ್ತಿತ್ತು, ಕೂಲಿ ಮಾಡಿಯಾದರೂ ಲಂಕೇಶ್ ಪತ್ರಿಕೆಯನ್ನು ಕೊಂಡುಕೊಳ್ಳುತ್ತಿದ್ದೆವು. ಗೆಳೆಯ ಆರುಂಡಿ ಪ್ರಕಾಶ್, ರವಿ, ಮುರುಗೇಶ್, ಬಸಣ್ಣ, ಕೆಂಚಪ್ಪ ಮಾಸ್ತ್ರು- ಹೀಗೆ ಊರಿನಲ್ಲೇ ನಮ್ಮದೊಂದು ಲಂಕೇಶ್ ಬಳಗವಿತ್ತು. ಹಾಗೆಂದು ನಾವೇನು ಅವರ ಹೆಸರಿನ ಸಂಘ ಕಟ್ಟಲಿಲ್ಲ, ಕತ್ತಿಗೆ ಊರಿನವರ ಹಾಗೆ ಜಾತಿ ಕಾರಣಕ್ಕೆ ಅವರ ಹೆಸರಲ್ಲಿ ಬಯಲುರಂಗಮಂದಿರ ಕಟ್ಟಿ ಅದನ್ನು ಪಾಳು ಬೀಳಿಸಲಿಲ್ಲ, ನಿರಂತರವಾಗಿ ಅವರ ಪತ್ರಿಕೆಯನ್ನು, ಕೃತಿಗಳನ್ನು ಓದುತ್ತಾ ಬಂದೆವು. ಮತ್ತು ಅವರ ಬರವಣಿಗೆಯನ್ನು, ಶೈಲಿಯನ್ನು ಅನುಕರಿಸಿದೆವು. ಈಗಲೂ ಅಷ್ಟೇ ಅವರ ದಟ್ಟ ನೆರಳು ನಮ್ಮ ಮೇಲಿದೆ.

ಲಂಕೇಶ್ ಪತ್ರಿಕೆಯ 'ಕಣ್ಣು ಮುಚ್ಚಾಲೆ' ವಿಭಾಗಕ್ಕೆ ಆಗಾಗ ನಾವು ಪ್ರಶ್ನೆ ಕೇಳುತ್ತಿದ್ದೆವು. ಪತ್ರಿಕೆಯಲ್ಲಿ ನಮ್ಮ ಹೆಸರು ಬಂದಾಗ ಗೆಳೆಯರಿಗೆಲ್ಲ ತೋರಿಸಿ ಖುಷಿ ಪಡುತ್ತಿದ್ದೆವು. ನಂತರ ಅವರು 'ಪ್ರಗತಿರಂಗ' ಸ್ಥಾಪಿಸಲು ಹೊರಟಾಗ ಅವರಿಗೆ ಬೆಂಬಲ ನೀಡಿ ಪತ್ರ ಬರೆದಿದ್ದೆವು. ಲಂಕೇಶ್ ಉತ್ತರ ಕೂಡ ಬರೆದಿದ್ದರು. ಅದಕ್ಕೂ ಮುಂಚೆ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಪತ್ರ ಕೂಡ ಬರೆದು ಉತ್ತರವನ್ನು ಪಡೆದಿದ್ದೆವು. ಆ ಪತ್ರಗಳನ್ನು ನಾವು ಹುಡುಗಿಯಿಂದ ಬಂದ ಲವ್ ಲೆಟರ್‌ಗಿಂತ ಹೆಚ್ಚಿನ ಪ್ರೀತಿಯಿಂದ ಇಟ್ಟುಕೊಂಡಿದ್ದೆವು.

ಬಹಳಷ್ಟು ಸಲ ನಮಗೆ ಲಂಕೇಶ್ ಈಗ ಬದುಕಿದ್ದರೆ ಏನು ಮಾಡುತ್ತಿದ್ದರು, ಪ್ರಸ್ತುತ ಏನು ಬರೆಯುತ್ತಿದ್ದರು ಎಂದು ಅನಿಸುತ್ತದೆ. ರಾಜಕೀಯ ಅವರ ಕಾಲದಲ್ಲೂ ದಿಕ್ಕು ತಪ್ಪಿದ್ದು ನಿಜ. ಗುಂಡೂರಾವ್, ಬಂಗಾರಪ್ಪ, ದೇವರಾಜ್ ಅರಸು, ಇಂದಿರಾ, ವಾಜಪೇಯಿ, ಜೆ.ಹೆಚ್.ಪಟೇಲ್, ನಜೀರ್‌ಸಾಬ್- ಹೀಗೆ ರಾಜಕಾರಣಿಗಳ ಒಳ್ಳೆಯ ಮತ್ತು ಕೆಟ್ಟ ಕೆಲಸಗಳನ್ನು ಸಾರಾಸಗಟಾಗಿ ಜನರ ಮುಂದೆ ಬಿಚ್ಚಿಟ್ಟ ಲಂಕೇಶ್ ಯಡಿಯೂರಪ್ಪನ ಬಗ್ಗೆ ಅದೇನು ಬರೆಯುತ್ತಿದ್ದರೋ ನೀವೇ ನಿರ್ಧರಿಸಿಕೊಳ್ಳಿ.

ಲಂಕೇಶ್ ಬರಹಗಳಲ್ಲಿ ಮನುಷ್ಯರ ಬಗ್ಗೆ ಕಾಳಜಿ ಕಾಣುತ್ತಿತ್ತು, 'ಸಂಕ್ರಾಂತಿ'ಯಂತಹ ನಾಟಕದಲ್ಲಿ ಅವರು ಪಾತ್ರಗಳ ಮೂಲಕ ಎತ್ತುವ ಪ್ರಶ್ನೆಗಳು 'ವಚನ ಸಾಹಿತ್ಯ'ವನ್ನು ಕಲಕುವಂತೆ ಮಾಡುತ್ತವೆ. 'ವಚನಗಳು' ಸೋತು ಅಲ್ಲಿ ಮನುಷ್ಯರು ಗೆಲ್ಲುತ್ತಾರೆ. ಬದುಕಿನಲ್ಲಿ ಯಾವುದೂ ಚಿಕ್ಕದಲ್ಲ, ಹಾಗೆಯೇ ಯಾವುದೂ ದೊಡ್ಡದಲ್ಲ ಎನ್ನುತ್ತಲೆ ಬರೆದರು. ವಾಸ್ತವತೆಯನ್ನು ಹಿತವಾಗಿ ಅಷ್ಟೇಕೆ ತಮಾಷೆಯ ಮೂಲಕ ಓದುಗರನ್ನು ತಲುಪಿಸುವ ಕಲೆ ಅವರಿಗೆ ಸಿದ್ಧಿಸಿತ್ತು, ಕಾವ್ಯ, ಕಥೆ, ಕಾದಂಬರಿ, ನಾಟಕ, ಅಷ್ಟೇಕೆ ಅನುವಾದಗಳಲ್ಲಿಯೂ ಕೂಡ ಮನುಷ್ಯರನ್ನು ನೋಡುವ ಪ್ರಯತ್ನ ಮಾಡುತ್ತಾರೆ. ಇದನ್ನು ಎಲ್ಲಾ ಸಾಹಿತಿಗಳು ಮಾಡುತ್ತಾರೆ ನಿಜ. ಆದರೆ ಇಂತಹ ಸಾಹಿತಿಗಳು ಸುತ್ತು ಬಳಸಿ ಮನುಷ್ಯರ ಹತ್ತಿರ ಬಂದರೆ ಲಂಕೇಶ್ ಹಾಗಲ್ಲ, ಅವರು ನೇರವಾಗಿ ಮನುಷ್ಯರ ಹತ್ತಿರ ಬಂದುಬಿಡುತ್ತಾರೆ. ಮನುಷ್ಯರ ಮೂಲಕವೇ ಮಾತಾಡುತ್ತಾರೆ. 'ಮುಸ್ಸಂಜೆಯ ಕಥಾಪ್ರಸಂಗ' ಕಾದಂಬರಿಯನ್ನು ತೆಗೆದುಕೊಳ್ಳಿ. ಇಡೀ ಕಾದಂಬರಿ ಯಾವ ವಿವರಣೆಗಳಿಲ್ಲದೆ ಸಾಗುತ್ತದೆ.

'ಮುಸ್ಸಂಜೆಯ ಕಥಾ ಪ್ರಸಂಗ' ಬಹುಶಃ ನನ್ನಂತಹ ಸರಳವಾದ ಓದುಗರಿಗೆ ಬಹಳ ಇಷ್ಟವಾದ ಕೃತಿ. ಅಲ್ಲಿ ಬರುವ ಪಾತ್ರಗಳು ರೂಪ ಪಡೆಯುತ್ತವೆ. ರಂಗವ್ವ, ಸಾವಂತ್ರಿ, ಶ್ರೇಷ್ಠ ಮಂಜ, ಶಿವಲಿಂಗಪ್ಪ, ಕರಿಯ, ಮಿಷನ್ ಭರ್ಮಣ್ಣ, ರಾಮಿ-ರುದ್ರಿ, ಗಿಡ್ಡ ಮೇಷ್ಟ್ರು ಸಣ್ಣೀರಪ್ಪ, ಹನುಮಕ್ಕ, ಶಿವಿ, ನಂದ್ಯಪ್ಪ ಬೂಸಿ ಬಸ್ಯ, ಪಾರ್ವತಿ, ರಾಚ, ಇಕ್ಬಾಲ, ಶಿವಾಜಿ, ಅಂಜನಿ, ಗುತ್ಯವ್ವ, ಶಿವನಂಜ, ಉಡುಪ, ಮಾಮ್ಲಾಜ್, ಹಕ್ಕಿನರಸ, ಕರಿಬಸ್ಯ, ಕೊಟ್ರ, ದತ್ತಣ್ಣ, ತಮ್ಮಯ್ಯ, ನಿಂಗವ್ವ ಮುಂತಾದ ಅನೇಕ ಪಾತ್ರಗಳು ನಮ್ಮೂರಿನವು. ನಾವು-ನೀವು ಪ್ರತಿದಿನ ನೋಡುತ್ತಿರುವ ಮನುಷ್ಯರು. ಈ ಮನುಷ್ಯರನ್ನು 'ಮುಸ್ಸಂಜೆ'ಗೆ ತಂದು 'ಕಥೆ ಪ್ರಸಂಗ'ವನ್ನು ಹೇಳುವ ಲಂಕೇಶ್ ಬಹಳ ಆಪ್ತವಾಗುತ್ತಾರೆ. ಪ್ರೇಮ, ಕಾಮ, ಹಾದರ, ಆಸೆ, ಓಸಿ, ಕುಸ್ತಿ, ಮಿಷನ್, ದೇವರು, ದನದ ಜಾತ್ರೆ, ಶಾಲೆ, ಸಾವು, ಸಮಾಜ, ಕಳ್ಳಭಟ್ಟಿ ಎಲ್ಲವೂ ಕಾದಂಬರಿಯಲ್ಲಿ ಜೀವ ಪಡೆಯುತ್ತವೆ. ಸಾವಂತ್ರಿ ಮತ್ತು ರಾಮಿಯ ಮೊಲೆಗಳು 'ನೀಲು'ನೊಂದಿಗೆ ಪೈಪೋಟಿ ನಡೆಸಿದಂತಾಗುತ್ತದೆ.

'ಲಂಕೇಶ್ ಪತ್ರಿಕೆ' ಪತ್ರಿಕಾ ಪ್ರಪಂಚದಲ್ಲಿ ಒಂದು ಪ್ರತ್ಯೇಕ ವಿಶ್ವಕೋಶ. ಅದೊಂದು 'ಮೌಲ್ಯಪ್ರಜ್ಞೆ' ಯುಗವನ್ನು ಸೃಷ್ಟಿಸಿದೆ. ಇಡೀ ಕರ್ನಾಟಕದಲ್ಲಿ ಮಿಂಚಿನ ಸಂಚಾರವನ್ನುಂಟುಮಾಡಿದ ಪತ್ರಿಕೆಯದು. ಅದೊಂದು ದೊಡ್ಡಶಕ್ತಿ. ಪತ್ರಿಕೋದ್ಯಮದಲ್ಲಿರುವ ನನ್ನಂತಹ ನೂರಾರು ಜನರಿಗೆ ಪತ್ರಿಕೆ ನೈತಿಕತೆಯನ್ನು ನೀಡಿದೆ. ನಾವು ಮಾಡುವ ಸಣ್ಣ ವರದಿಗಳಲ್ಲೂ ಅವರ ನೆರಳು ಬೀಳುತ್ತದೆ.

ಟೀಕೆ ಟಿಪ್ಪಣಿ, ಮರೆಯುವ ಮುನ್ನ, ನೀಲು ಪದ್ಯಗಳನ್ನು ಬರೆಯುತ್ತಾ 'ಕಣ್ಣು ಮುಚ್ಚಾಲೆ' ಆಟ ಆಡುತ್ತ ಹೊಸ ಲೇಖಕರನ್ನು ಪ್ರೋತ್ಸಾಹಿಸುತ್ತ ಕಪಟಿಗಳನ್ನು 'ಛೀ, ಛೀ' ಎಂದು ಬೈಯುತ್ತಾ ಲಂಕೇಶ್ ಸಾಗಿದರು. ಒಂದು ವಿರೋಧ ಪಕ್ಷದಂತೆ ಕೆಲಸ ಮಾಡಿದ ಕೀರ್ತಿ ಲಂಕೇಶ್ ಪತ್ರಿಕೆಗೆ ಸಲ್ಲುತ್ತದೆ.

ಅವರ ಟೀಕೆ ಟಿಪ್ಪಣಿಯಂತೂ ಒಂದು ಮೈಲಿಗಲ್ಲು, ಟೀಕೆಟಿಪ್ಪಣಿಯಲ್ಲಿ ಅವರು ಬರೆಯದ ವಿಷಯವಿಲ್ಲ, 'ಇಂದಿರಾ'ರವರನ್ನು ಟೀಕಿಸುತ್ತಿದ್ದ ಅವರು, ಅವರು ಸತ್ತಾಗ 'ಕಣ್ಮರೆಯಾದ ಪ್ರಿಯದರ್ಶಿನಿ' ಎಂದು ಬರೆದರು. ತೇಜಸ್ವಿಯವರನ್ನು ಮೆಚ್ಚಿಕೊಳ್ಳುತ್ತಲೇ ಚುಚ್ಚಿದರು. ಡಾ. ಶಿವರಾಂ, ಗಡ್ಡದ ರಾಮಣ್ಣ, ಕಲ್ಲಣ್ಣನವರ್‌ನಂತಹವರನ್ನು ಕುರಿತು ಹೇಳಿದರು. ಡಾ.ರಾಜ್‌ಕುಮಾರ್ ಅವರಿಗೆ ಬಹಿರಂಗ ಪತ್ರ ಬರೆದು ಸೈ ಎನಿಸಿಕೊಂಡರು. ಮೀಸಲಾತಿ ವಿರೋಧಿ ಹುಡುಗರೊಂದಿಗೆ ಮಾತಾಡಿದ್ದು, 'ನೀಲ ಗಗನದಲ್ಲಿ ಅರ್ಧಗಂಟೆ' ಇದ್ದದ್ದನ್ನು ಖುಷಿಯಿಂದ ಹೇಳಿದರು. 'ಹಕ್ಕಿಯಂತೆ ಮನುಷ್ಯನಂತೆ' ವರ್ಣಿಸಿದರು. ಪ್ರೇಮವನ್ನು 'ಗುಬ್ಬಚ್ಚಿಯ ಗೂಡಿ'ನಲ್ಲಿ ಭದ್ರವಾಗಿಟ್ಟುಕೊಂಡರು. ಬಾಬರ್, ನೆಲ್ಸನ್ ಮಂಡೇಲಾ ಮುಂತಾದವರ ಬಗ್ಗೆ ಬರೆಯುತ್ತಲೇ ಬುದ್ಧನ ಕುರಿತು 'ಮೋಕ್ಷ ಹುಡುಕುತ್ತಾ ಪ್ರೀತಿಯ ಬಂಧನದಲ್ಲಿ' ಬರೆದರು. ಈ ಶೀರ್ಷಿಕೆಯಡಿಯಲ್ಲಿ ಲೇಖನ ಬರೆಯದ ಪತ್ರಿಕೆಗಳಿಲ್ಲ,

ನಮ್ಮ ಸುತ್ತಲು ಪ್ರತಿದಿನ ನಡೆಯುವ ಘಟನೆಗಳು ನೂರಾರು. ಅದರಲ್ಲಿ ಹಲವು ನಮಗೆ ನೆನಪೇ ಇರುವುದಿಲ್ಲ; ಮರೆತುಬಿಡುತ್ತವೆ. ಅವುಗಳನ್ನು ದಾಖಲಿಸಿದರೆ ಅದೇ ಒಂದು ದೊಡ್ಡ ಕಾದಂಬರಿಯಾಗಬಹುದು. ಅಂತಹ ಅನೇಕ ಘಟನೆಗಳನ್ನು ಲಂಕೇಶ್ ತಮ್ಮದೇ ಆತ ರೀತಿಯಲ್ಲಿ ಗ್ರಹಿಸಿ 'ಮರೆಯುವ ಮುನ್ನ'ದಲ್ಲಿ ದಾಖಲಿಸಿದ್ದಾರೆ. ಈ ಪುಟ್ಟ ಟಿಪ್ಪಣಿಗಳು ಓದುಗರ ಮನಸ್ಸಲ್ಲೂ ದಾಖಲಾಗಿ ತಮ್ಮದೇ ಅನುಭವವಾಗಿ ಕಾಡುತ್ತವೆ.

'ನೀಲು' ಹೆಸರೇ ಒಂದು ಸುಂದರ. ಲಂಕೇಶರ ನೀಲು ಎಂದರೆ ಕೇಳಬೇಕೆ. 'ನೀಲು' ರೂಪಕ್ಕೆ, ಮಾದಕತೆಗೆ, ಮೊಲೆಗೆ ಬೆರಗುಗೊಂಡ ಬೆಂಗಳೂರು ವಿವಿಯ ಕೆಲವು ವಿದ್ಯಾರ್ಥಿಗಳು 'ನೀಲು ಕಾಂಪಸ್ ಕಾಲ್' ಎಂಬ ಕವಿತೆಯ ಸಂಕಲನವನ್ನು ಹೊರತಂದರು. ಹರೆಯದ ಚಡಪಡಿಕೆಯೇ ನೀಲುವಿನ ಹಾಗೆ. ನೀಲು ಪದ್ಯಗಳೆಂದರೆ ಸುಂದರಿಯೊಬ್ಬಳು ಹೊಕ್ಕಳು ಕಾಣುವಂತೆ ಸೀರೆ ಉಟ್ಟಂತೆ. ಬ್ರಾ ಇಲ್ಲದ ರವಿಕೆ ತೊಟ್ಟರೂ ಚೆಂದ ಕಾಣಿಸುವಂತೆ. ಲಂಕೇಶರ 'ನೀಲು'ವಿನ 'ಮೋಡಿ'ಗೆ ಮರುಳಾಗದವರು ವಿರಳ. ಆ ತರುಣಿಯ ಬೆರಳು ಮಾವಿನ ಚಿಗುರಿನಂತೆ ಮೋಹಕ. ನೀಲು ಪದ್ಯಗಳು ಕೇವಲ ತುಂಟಾಟದ ಪದ್ಯಗಳು ಮಾತ್ರ ಆಗಿರಲಿಲ್ಲ, ಆ ಪದ್ಯಗಳಲ್ಲಿ ವಿಶಿಷ್ಟವಾದ ಪ್ರಜ್ಞೆ ಇತ್ತು ಎಂಬುದು ಕೂಡ ನಿಜ.

ಉದಾಹರಣೆಗೆ ಈ ಪದ್ಯ ನೋಡಿ:

ಹಚ್ಚ ಹಸಿರು ತೋಪಿನ ಗುರಿಯಿಂದ,
ಕ್ಷಣ ಎದ್ದ ವೆಂಕಟಸ್ವಾಮಿ
ತನ್ನ ದೊಂಬರಮನದನ್ನೆಗೆ
ಮಾಸ್ತಿಯವರ ಜ್ಞಾನಪೀಠದ ಬಗ್ಗೆ
ಹೇಳಿ ಬೆಚ್ಚಗೆ ಮಲಗಿದನಂತೆ.

'ನೀಲು' ಇಲ್ಲಿ ಲಂಕೇಶ್ ಆಗಿ ಮುಳುಗಿದ್ದಾರೆ, ಮಾಸ್ತಿಯನ್ನು ಮಲಗಿಸಿದ್ದಾರೆ ಎನಿಸುವುದಿಲ್ಲವೇ..!

ನಾಡಿನ ಹಿರಿಯ ಕವಿ ಚನ್ನವೀರ ಕಣವಿ ಕೂಡ ನೀಲುವನ್ನು ಮೆಚ್ಚಿಕೊಂಡು 'ನೀಲುವಿಗೊಂದು ಶಾಲು' ಎಂಬ ಒಂದು ಕವಿತೆಯನ್ನು ಬರೆದಿದ್ದಾರೆ.

ಲಂಕೇಶರು 'ಗುಣಮುಖ' ನಾಟಕವನ್ನು ವಿಭಿನ್ನ ನೆಲೆಗಟ್ಟಿನಲ್ಲಿ ರಚಿಸಿದ್ದಾರೆ. ಪ್ರಸ್ತುತ ರಾಜಕಾರಣಿಗಳ ಸಣ್ಣತನವನ್ನು ಕುರಿತು ಈ ನಾಟಕ ಹೇಳುತ್ತದೆ. ಕನ್ನಡದ ನಾಟಕಗಳಲ್ಲಿ ಲಂಕೇಶರ ನಾಟಕಗಳು ವಿಶಿಷ್ಟ ಸ್ಥಾನ ಪಡೆದಿವೆ. ಶಿವಮೊಗ್ಗದ ನಮ್ ಟೀಮ್ ತಂಡ 'ಗುಣಮುಖ' ನಾಟಕವನ್ನು ಪ್ರದರ್ಶಿಸಿತ್ತು, ವರ್ತಮಾನದ ನಾಟಕವಿದು. ನಾದಿರ್ ಷಾನಂತಹ ರಕ್ತ ಪಿಪಾಸುಗೆ ಹಕೀಮ್‌ನೊಬ್ಬ 'ಚಿಕಿತ್ಸೆ' ನೀಡುತ್ತಾನೆ. ಆದರೆ ಪ್ರಸ್ತುತ ರಾಜಕಾರಣದಲ್ಲಿರುವ ನಾದಿರ್ ಷಾಗಳಿಗೆ ಚಿಕಿತ್ಸೆ ನೀಡುವ ಹಕೀಮ್ ಇಲ್ಲವಾಗಿದ್ದಾರೆ. ಹಾಗಾಗಿ ಲಂಕೇಶರ ಈ ನಾಟಕ ಎಲ್ಲ ಕಾಲಕ್ಕೂ ಎಲ್ಲಾ ದೇಶಕ್ಕೂ ಪ್ರಸ್ತುತವಾಗುತ್ತದೆ.

'ಕಲ್ಲು ಕರಗುವ ಸಮಯ' ಕತೆಯ ಹೆಸರೇ ಹೇಗಿದೆ ನೋಡಿ. ಕಲ್ಲು ಕರಗುವುದು ಎಂದರೆ ಸುಮ್ಮನೆ ಮಾತಾ. ಈ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಿಕ್ಕಿದೆ. 'ನಮ್ ಟೀಮ್'ನ ಹೊನ್ನಾಳಿ ಚಂದ್ರಶೇಖರ್ 'ಕಲ್ಲು ಕರಗುವ ಸಮಯ'ವನ್ನು ರಂಗರೂಪಕ್ಕೆ ತಂದು ನಿರ್ದೇಶನ ಮಾಡಿದ್ದರು. ನಾಟಕ ಅಷ್ಟೊಂದು ಯಶಸ್ವಿಯಾಗದಿದ್ದರೂ ಕಲ್ಲನ್ನೂ 'ನಾಟಕ' ರೂಪಕ್ಕೆ ತರುವ ಪ್ರಯತ್ನ ಮೆಚ್ಚಲೇಬೇಕು. ಅದರ ಜೊತೆಗೆ 'ಕೃತಿ'ಯ ಮೌಲ್ಯ ಕೂಡ ಹೆಚ್ಚುತ್ತದೆ. 'ಟಿ.ಪ್ರಸನ್ನನ ಗೃಹಸ್ಥಾಶ್ರಮ', 'ಪೋಲೀಸರಿದ್ದಾರೆ ಎಚ್ಚರಿಕೆ', 'ನನ್ನ ತಂಗಿಗೊಂದು ಗಂಡು ಕೊಡಿ' ನಾಟಕಗಳು ಕೂಡ ಅದ್ಭುತ. ಲಂಕೇಶರ ನಾಟಕಗಳು ನಿಜಕ್ಕೂ 'ಚಲನಶೀಲತೆ' ಕಂಡುಕೊಂಡು ಸಂಚಲನ ಉಂಟುಮಾಡಿದ್ದಂತೂ ಸತ್ಯ.


ಲಂಕೇಶರು ಚಲನಚಿತ್ರ ಮಾಧ್ಯಮದಲ್ಲೂ ಕೆಲಸ ಮಾಡಿದ್ದು ಅವರ ಸೃಜನಶೀಲತೆಗೆ ಮತ್ತೊಂದು ಸಾಕ್ಷಿ. ಅವರ 'ಪಲ್ಲವಿ' ಮತ್ತು 'ಅನುರೂಪ' ಚಿತ್ರಗಳು ಗಮನಸೆಳೆಯುವಂತಹವು. 'ಪಲ್ಲವಿ' ಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿ ಕೂಡ ಸಿಕ್ಕಿತ್ತು.

ಲಂಕೇಶ್ ಮಾತಾಡಿದ್ದಕ್ಕಿಂತ ಬರೆದದ್ದು ಹೆಚ್ಚು, ಮಲಗಿದ್ದಾಗಲೂ ಎಚ್ಚರ ಸ್ಥಿತಿಯಲ್ಲಿದ್ದ ಮನುಷ್ಯ ಆತ. ಅವರ ಸರಳತೆ ಎಷ್ಟಿತ್ತೆಂದರೆ ಎಸ್‌ಎಸ್‌ಎಲ್‌ಸಿ ಫೇಲಾದ ಹುಡುಗನೊಬ್ಬ ಬರೆದ ಪತ್ರವಿಟ್ಟುಕೊಂಡು 'ಇದು ನನಗೆ ಎಲ್ಲಾ ಗೌರವ ಪ್ರಶಸ್ತಿಗಳಿಗಿಂತ ದೊಡ್ಡದು' ಎಂದಿದ್ದರು.

ಇತ್ತೀಚಿನ ರಾಜಕೀಯ ಕಕ್ಕುಲತೆಗಳು, ಭ್ರಷ್ಟಾಚಾರಗಳು, ಚರ್ಚ್‌ಗಳ ಮೇಲಿನ ದಾಳಿ, ಗೋಹತ್ಯೆ ನಿಷೇಧ ಕಾನೂನು, ಯಡಿಯೂರಪ್ಪ ಅಳುತ್ತಿದ್ದದ್ದು, 'ಮಾಟ'ಕ್ಕೆ ಭಯಪಟ್ಟಿದ್ದು, ದೇವೇಗೌಡ-ಕುಮಾರಸ್ವಾಮಿಯ ವರ್ತನೆ, ಉತ್ತರಕರ್ನಾಟಕ ಸಂತ್ರಸ್ತರಿಗೆ ಇನ್ನೂ ನೆರವು ಸಿಕ್ಕದಿರುವುದು, ಆಪರೇಷನ್ ಕಮಲ, ವಿಧಾನಸಭೆಯಲ್ಲಿ ಬ್ಲೂ ಫಿಲಂ ನೋಡಿದ್ದು, ಅಸಹಾಯಕ ಭಂಗಿಗಳು ಮೈಮೇಲೆ ಮಲ ಸುರಿದುಕೊಂಡಿದ್ದು ಪ್ರತಿಭಟಿಸಿದ್ದು, ಬ್ರಾಹ್ಮಣರ ಎಂಜಲೆಲೆಯ ಮೇಲೆ ದಲಿತರು ಉರುಳಿದ್ದು ಮುಂತಾದ ವಿಚಿತ್ರ ವಿಚಿತ್ರ ಸನ್ನಿವೇಶಗಳನ್ನು ಕುರಿತು ಲಂಕೇಶ್ ಏನು ಬರೆಯುತ್ತಿದ್ದರೋ, ಏನು ಹೇಳುತ್ತಿದ್ದರೋ? ಅವರು ಬದುಕಿದಷ್ಟು ಕಾಲ ಸಮಾಜವನ್ನು ಎಚ್ಚರ ಸ್ಥಿತಿಯಲ್ಲಿಟ್ಟುಕೊಂಡಿದ್ದರು.

ತಮ್ಮ ಜೀವನದ ಕೊನೆಕೊನೆಗೆ ಒಂದೇ ಕಣ್ಣಲ್ಲಿ ಪತ್ರಿಕೆಯನ್ನು ಅವರು ಸಾಯುವವರೆಗೂ ಕಾಪಾಡಿದರು. ಸಾಯುವ ದಿನ ಕೂಡ ಪತ್ರಿಕೆಯನ್ನು ಅಚ್ಚಿಗೆ ಕಳುಹಿಸುವ ಕೆಲಸ ಮಾಡಿದ್ದರು. ಅವರಿಲ್ಲದೇ ಈಗ ಹದಿನಾಲ್ಕು ವರ್ಷಗಳಾಗಿವೆ. ನಾವು ಬದುಕಿರುವವರೆಗೂ ಅವರ ನೆನಪು ಗಾಢವಾಗಿರುತ್ತದೆ. 'ಮೇಷ್ಟ್ರು' ನಮ್ಮ ಜೊತೆಗೆ ಸದಾ ಇರುತ್ತಾರೆ...

● ಅರುಂಡಿ ಶ್ರೀನಿವಾಸಮೂರ್ತಿ




ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ದೇವಿ ಮತ್ತು ಶಂಕರಾಚಾರ್ಯ

ಸುವಕ್ತ್ರೋಜಕುಂಭಾಂ

ಶಂಕರನಿಗೇಕೆ ಸ್ತನಗಳ ಮೇಲೆಯೇ ಕಣ್ಣು ಎಂದು ಶಂಕರಾಚಾರ್ಯರ ಶಾರದಾಭುಜಂಗಪ್ರಯಾತಾಷ್ಟಕವನ್ನು ಕೇಳಿದರು ನನ್ನ ಸಾಹಿತಿ ಮಿತ್ರರೊಬ್ಬರು. ಕನ್ನಡ ಜನಪದ ಸಾಹಿತ್ಯದ ಅಧ್ಯಯನ ಮಾಡುವ ಅವರಿಗೆ ಶಂಕರನ ಕಂಡರೆ ಕೋಪ. ಏಕೆಂದರೆ, ಮುಗ್ಧವಾಗಿರುವ ಮತ್ತು ನೇರವಾಗಿರುವ ಜನಪದರು ಕೂಡ ಹೆಣ್ಣಿನ ಅಂಗಾಂಗಗಳನ್ನು ಹಾಗೆ ವರ್ಣಿಸುವುದಿಲ್ಲ. ಆದರೆ ಈ ಶಂಕರನಿಗೇಕೆ ಈ ಬುದ್ಧಿ? ಸುವಕ್ತ್ರೋಜಕುಂಭಾಂ ಸುಧಾಪೂರ್ಣಕುಂಭಾಂ ಅಂದರೆ ಕುಂಭದಂತಿರುವ ಕುಚಗಳು, ಅವೋ ಅಮೃತ ತುಂಬಿರುವ ಕುಂಭಗಳು ಎಂದು ವಿದ್ಯಾಧಿದೇವತೆ ಶಾರದೆಯ ಸ್ತನಗಳಿಂದಲೇ ಆಕೆಯನ್ನು ನೋಡಲು ಪ್ರಾರಂಭಿಸುವುದೇಕೆ? ಎಂದು ಅವರ ಪ್ರಶ್ನೆ.



ಶಂಕರಾಚಾರ್ಯ ತನ್ನ ಇತರೇ ಬ್ರಾಹ್ಮಣಾಧಿಕ್ಯದ ಅಂಧರಂತೆ ಶೂದ್ರರಿಗೆ ಜ್ಞಾನವನ್ನು ನಿರಾಕರಿಸಿದರು. ಭಾರತದಲ್ಲಿ ಬೇರೂರಿದ್ದ ಬೌದ್ಧಧಮ್ಮವನ್ನು ನಾಶ ಮಾಡಲು ಏನೇನೆಲ್ಲಾ ಮಾಡಲು ಸಾಧ್ಯವೋ ಅವೆಲ್ಲವನ್ನೂ ಮಾಡಿದರು. ನಾಗಾರ್ಜುನಕೊಂಡದಲ್ಲಿ ತಮ್ಮ ಹಿಂಬಾಲಕರೊಡನೆ ಬೌದ್ಧ ಸ್ಮಾರಕಗಳನ್ನು ನಾಶ ಮಾಡಿದರೆಂದು ಸಿಲೋನಿನ ಎ.ಎಚ್.ಲಾಂಗ್‌ಹಸ್ಟ್ 'ನಾಗಾರ್ಜುನಕೊಂಡದ ಬೌದ್ಧಾವಶೇಷಗಳು' ಎಂಬ ಕೃತಿಯಲ್ಲಿ ವಿವರಿಸುತ್ತಾರೆ.

ಸ್ವಾಮಿ ವಿವೇಕಾನಂದರು ಶಂಕರಾಚಾರ್ಯರನ್ನು ಕುರಿತು ಹೇಳುವಾಗ, "ಶಂಕರನಿಗೆ ಕ್ಷೌರದ ಕತ್ತಿಯಂತಹ ನಿಶಿತಮತಿಯಿತ್ತು, ಅವನು ಒಳ್ಳೆಯ ವಾದಪಟು ಮತ್ತು ವಿದ್ವಾಂಸ ಎನ್ನುವುದರಲ್ಲಿ ಸಂಶಯವಿಲ್ಲ, ಆದರೆ ಅವನಿಗೆ ಔದಾರ್ಯವಿರಲಿಲ್ಲ, ಅವನ ಹೃದಯವೂ ಹಾಗೆಯೇ ಇದ್ದಂತೆ ಕಾಣುತ್ತದೆ. ಜೊತೆಗೆ ಅವನು ತನ್ನ ಬ್ರಾಹ್ಮಣ್ಯದ ಬಗ್ಗೆ ಭಾರೀ ಹೆಮ್ಮೆಪಡುತ್ತಿದ್ದನು" ಎನ್ನುವುದಲ್ಲದೇ ಮತ್ತೊಂದು ಕಡೆ, "ಉಪನಿಷತ್ತಿನ ಮೇಲೆಯೆ ಬುದ್ಧಧಮ್ಮ ನಿಲ್ಲಿದಿದೆ. ಶಂಕರನ ತತ್ತ್ವ ಶಾಸ್ತ್ರಕ್ಕೂ ಅದೇ ಮೂಲ. ಬುದ್ಧನ ಮಹಾದ್ಭುತ ಅನುಕಂಪ ಹೃದಯದ ತಿಲಾಂಶವೂ ಶಂಕರನಿಗೆ ಇರಲಿಲ್ಲ, ಅವನದು ಬರಿಯ ಬುದ್ಧಿಯ ಪಾಂಡಿತ್ಯ. ಅವನು ತಂತ್ರಗಳಿಗೆ ಹೆದರಿ, ಜನಸಮುದಾಯಕ್ಕೆ ಅಂಜಿ, ಒಂದು ಕುರವನ್ನು ವಾಸಿ ಮಾಡಲು ಹೋಗಿ ಅದಿದ್ದ ತೋಳನ್ನೇ ಕತ್ತರಿಸಿಹಾಕಿದನು" ಎಂದು ಸುವಿಸ್ತಾರವಾಗಿ ಪ್ರಮಾಣಸಹಿತ ಟೀಕಿಸುತ್ತಾರೆ. (ಸ್ವಾಮಿ ವಿವೇಕಾನಂದ ಕಂಪ್ಲೀಟ್ ವರ್ಕ್ಸ್: ಸಂ 6, ಪು 123, ಕೊಲ್ಕತ್ತ, 1968) ಶಂಕರರ ದೃಷ್ಟಿ ಮತ್ತು ಅದರ ವಿಚಾರಗಳನ್ನು ಆಧಾರಸಹಿತವಾಗಿ ಕೆ.ಎಸ್.ಭಗವಾನರು ಶಂಕರಾಚಾರ್ಯ ಮತ್ತು ಪ್ರತಿಗಾಮಿತನದಲ್ಲಿ ವಿವರಿಸಿದ್ದಾರೆ. ಆದರೆ ಈಗಿರುವ ನನ್ನ ಮಿತ್ರರ ಪ್ರಶ್ನೆಯೆಂದರೆ, ಒಂದು ಹೆಣ್ಣನ್ನು ನೀವು ನೋಡುವಾಗ ನಿಮ್ಮ ಕಣ್ಣುಗಳು ಆಕೆಯ ಕುಚಗಳ ಮೇಲಿದ್ದರೆ ಆಕೆಗೆ ಅದೆಷ್ಟು ಮುಜುಗರ ಉಂಟಾಗುವುದು. ಅದೂಅಲ್ಲದೇ ನೀವು ಒಂದು ಹೆಣ್ಣನ್ನು ನೋಡುವಾಗಲೇ ನಿಮ್ಮ ದೃಷ್ಟಿಯು ಕುಚದ ಮೇಲಿತ್ತೆಂದರೆ ನಿಮ್ಮ ಮನಸ್ಥಿತಿ ಎಂತಹದು ಎಂದು?

ಕುಪುತ್ರೋ ಜಾಯೇತ ಕ್ವಚಿದಪಿ

ಶಂಕರರಿಗೆ ದ್ವಂದ್ವ ವ್ಯಕ್ತಿತ್ವವಿರುವುದು ಸುಸ್ಪಷ್ಟ. ಭಾಷ್ಯಗಳನ್ನು ಬರೆಯುತ್ತಾ, ವಾದಗಳನ್ನು ಮಾಡುತ್ತಾ, ತಮ್ಮದೇ ಆದ ಸಿದ್ಧಾಂತದ ಪ್ರತಿಪಾದನೆ ಮಾಡುತ್ತಾ ಎಂತೆಲ್ಲಾ ಪಾಂಡಿತ್ಯದ ಅಹಂಕಾರವನ್ನು ಪ್ರದರ್ಶಿಸುತ್ತಾ, ಇತರೇ ಸಿದ್ಧಾಂತಿಗಳನ್ನು ದಮನ ಮಾಡಲು ಯತ್ನಿಸುತ್ತಾ, ತಮ್ಮ [illegible] ಸಾಧನೆಯನ್ನು ವಿಜೃಂಭಿಸಿದರೂ, ಅವರೊಬ್ಬ ಕವಿಯೂ ಆಗಿದ್ದರು. ಅವರ ಸ್ತುತಿ ರಚನೆಗಳೆಲ್ಲವೂ ಭಾವುಕ ಹೃದಯದಿಂದಲೂ ಕೂಡಿದೆ. ಓದಲು ಮತ್ತು ಹಾಡಲು ಸುಂದರವೂ ಆನಂದವೂ ಆಗುತ್ತದೆ.

ಬ್ರಾಹ್ಮಣಾಧಿಕ್ಯದ ಪಾಂಡಿತ್ಯದ ಅಮಲು ಅದೇನೇ ಇದ್ದರೂ ಅವರ ತಾಯಿ ಆರ್ಯಾಂಬ ಅವರಲ್ಲಿ ಕವಿ ಹೃದಯವನ್ನು ಉಂಟುಮಾಡಿದ್ದಿರುವ ಸಾಧ್ಯತೆಯನ್ನು ಅಲ್ಲಗಳೆಯಲಾಗುವುದಿಲ್ಲ, ಸಿದ್ಧಾಂತ ಮತ್ತು ತರ್ಕಗಳ ಅಹಂನಿಂದ ಬೀಗುತ್ತಿದ್ದ ಶಂಕರ ಕೆಲವೊಮ್ಮೆ ಭಾವುಕರಾಗುತ್ತಿದ್ದರು. ಕವಿಯಾಗಿ ತಮ್ಮ ಭಾವನೆಗಳನ್ನು ಹರಿಯಬಿಡುತ್ತಿದ್ದರು.

ದೇವ್ಯಪರಾಧಕ್ಷಮಾಪಣ ಸ್ತೋತ್ರದಲ್ಲಿ ದೇವಿಯ ಮುಂದೆ ಕ್ಷಮೆ ಕೇಳುತ್ತಾ ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನ ಭವತಿ, ಕುಪುತ್ರ ಹುಟ್ಟಿದರೂ ಹುಟ್ಟಬಹುದು; ಆದರೆ ಕುಮಾತೆ ಎಲ್ಲಿಯೂ ಕಾಣಬರುವುದಿಲ್ಲ ಎಂದು ತಮ್ಮನ್ನು ತಾವು ನಿಂದಿಸಿಕೊಳ್ಳುತ್ತಾರೆ. ತಂದೆಯ ಮರಣಾನಂತರ ಅತ್ಯಂತ ಪ್ರೀತಿಯಿಂದ ತಮ್ಮನ್ನು ನೋಡಿಕೊಳ್ಳುತ್ತಿದ್ದ ತಾಯಿ ಆರ್ಯಾಂಬಳನ್ನು ತಮ್ಮ ಸಿದ್ಧಾಂತ ಮಂಡನೆಗೆ ಸಂನ್ಯಾಸಿಯಾಗಲು ಹೊರಟಾಗ ಆಕೆ ಅದಕ್ಕೊಪ್ಪಿರಲಿಲ್ಲ, ಆದರೆ ಯಾವುದೋ ತಂತ್ರವನ್ನು ಹೂಡಿದ ಶಂಕರ ತನ್ನ ತಾಯಿಯಿಂದ ಹೊರಟುಬಿಟ್ಟ. ಮುಂದೆ ಆಕೆ ಮರಣಿಸಿದಾಗ ಮರಳಿಬಂದ ಶಂಕರ, ಆಗಿನ ಬ್ರಾಹ್ಮಣ ಸಂಪ್ರದಾಯವನ್ನು ಎದುರಿಸಿ, ಆಕೆಯ ಶವಸಂಸ್ಕಾರವನ್ನು ತಾನೇ ತಮ್ಮ ಮನೆಯ ಹೊರಾವರಣದಲ್ಲಿ ಒಬ್ಬನೇ ಮಾಡಿದ್ದ. ಆಕೆಯ ಅಗಲಿಕೆ ಶಂಕರನ ಮೇಲೆ ತೀರಾ ಪ್ರಭಾವ ಬೀರಿರುವ ಸಾಧ್ಯತೆಗಳಿವೆ. ಜೊತೆಗೆ ತನ್ನ ತಾಯಿಯ ಪ್ರೀತಿಗೆ ವಿರುದ್ಧವಾಗಿ ಆಕೆಯನ್ನು ತ್ಯಜಿಸಿರುವ ಅಪರಾಧಿ ಮನೋಭಾವವೂ ಸಹಜವಾಗಿದೆ. "ನಾನು ನಿನ್ನನ್ನು ಬಿಟ್ಟಿರುವುದು ಉಚಿತವಾಗಿರಬಹುದು; ಆದರೆ ನೀನು ನನ್ನನ್ನು ಬಿಟ್ಟಿರುವುದು ಉಚಿತವಲ್ಲ" ಎಂದು ಹಪಹಪಿಸುತ್ತಾರೆ.

ಯಾರೇ ಒಬ್ಬ ಕವಿಯು ತಮ್ಮ ಹೃದಯ ಭಾವನೆಗಳನ್ನು ಹಲವಾರು ರೂಪಕಗಳಲ್ಲಿ ಕಟ್ಟಿಕೊಡುತ್ತಾ ಹೋಗುತ್ತಾರೆ. ಅವರ ವೈಯಕ್ತಿಕ ಸಂಕಟಗಳು, ಸಂತಸಗಳು, ನೋವು, ನಲಿವುಗಳು, ತಮ್ಮದೇ ಬದುಕಿನ ಬಗೆಗಿನ ದೃಷ್ಟಿಕೋನಗಳನ್ನು ತಮ್ಮ ಕಾವ್ಯದಲ್ಲಿ ಅಭಿವ್ಯಕ್ತಪಡಿಸಿರುತ್ತಾರೆ. ದೇವರ ಮುಂದೆ ತೋಡಿಕೊಳ್ಳುವ ಭಕ್ತರೂ ಸಹಜವಾಗಿ ತಮ್ಮ ಅನುಭವಾನುಸಾರ ಭಾವಪರವಶರಾಗುತ್ತಾರೆ. ಆರ್ತಭಾವದ ಭಜನೆಗಳನ್ನು ಮಾಡುವಾಗ ಮಡುಗಟ್ಟಿರುವ ದುಃಖವು ಹೊರಹೊಮ್ಮಿ ಭಕ್ತರು ಕಣ್ಣೀರು ಸುರಿಸಿ ಹಗುರವಾಗಲು, ಶಾಂತಿಯನ್ನು ಕಂಡುಕೊಳ್ಳಲು ಯತ್ನಿಸುತ್ತಾರೆ. ಅಹಂ ಬ್ರಹ್ಮಾಸ್ಮಿನ್ ಎಂದು ಘೋಷಿಸಿಕೊಂಡು ತಾತ್ವಿಕವಾಗಿ ತಾನೂ ಮತ್ತು ದೇವರೂ ಒಂದೇ ಅಥವಾ ಜೀವಾತ್ಮ ಮತ್ತು ಪರಮಾತ್ಮ ಎರಡಿಲ್ಲ ಎಂದ ಶಂಕರ ದೇವಿಯರ ಮೇಲೆ, ಶಿವ ಮತ್ತು ಇತರ ದೇವತೆಗಳ ಮೇಲೆಲ್ಲಾ ಅದೆಷ್ಟೊಂದು ಕೃತಿಗಳನ್ನು ರಚನೆಗಳನ್ನು ಮಾಡಿರುವುದು ಏಕೆ? ಈ ಸ್ತುತಿಗೀತೆಗಳೆಲ್ಲಾ ಅವರ ಪ್ರಾರಂಭಿಕ ರಚನೆಗಳಾಗಿದ್ದು, ಅಹಂ ಬ್ರಹ್ಮಾಸ್ಮಿಯೆಂಬ ತಾತ್ವಿಕ ಸಿದ್ಧಾಂತವೆಲ್ಲವೂ ನಂತರದ್ದೇ? ಅಥವಾ ಪಾಂಡಿತ್ಯದ ಮೆದುಳಿನ ಮತ್ತು ಭಾವನಾತ್ಮಕ ಹೃದಯದ ಸಂಘರ್ಷಗಳು ಆಗ್ಗಿಂದಾಗ್ಗೆ ಆಗುತ್ತಿದ್ದವೇ? ಹಾಗಾಗಿದ್ದರೂ ಆಶ್ಚರ್ಯವಲ್ಲ, ತರ್ಕ ಮತ್ತು ಭಾವನೆಗಳ ಮೇಲಾಟಗಳು ಯಾವುದೇ ಸಾಮಾನ್ಯ ಮನುಷ್ಯನಿಗೂ ಸಹಜವಾಗಿ ಬರಲಿಕ್ಕೆ ಸಾಧ್ಯ.

ಒಟ್ಟಿನಲ್ಲಿ ತಾಯಿಯನ್ನು ಒಂಟಿಯಾಗಿ ಬಿಟ್ಟು ಸಂನ್ಯಾಸಿಯಾಗಿ ಹೋದ ಶಂಕರ "ವಿಧಿಪೂರ್ವಕವಾದ ವಿವಿಧೋಪಚಾರಗಳಿಂದ ನಾನು ಎಂದೂ ನಿನ್ನ ಪೂಜಿಸಿಲ್ಲ, ಶುಷ್ಕ ಚಿಂತಾಪರವಾದ ಹರಟೆಗಳಿಂದ ಕಾಲವನ್ನು ಕಳೆದು ನಾನು ಯಾವ ತಪ್ಪನ್ನು ತಾನೇ ಮಾಡಿಲ್ಲ?" ಎಂದು ಪಶ್ಚಾತ್ತಾಪ ಪಡುತ್ತಾರೆ. ತಮ್ಮ ಅಪರಾಧಪ್ರಜ್ಞೆ ಜಾಗೃತವಾದಂತೆಲ್ಲಾ "ಹೇ ದುರ್ಗಾದೇವಿ, ಕರುಣಾರ್ಣವೇಶ್ವರಿ, ಆಪತ್ತಿನಲ್ಲಿ ಮುಳುಗಿ ನಿನ್ನನ್ನು ಸ್ಮರಿಸುತ್ತೇನೆ. ಇದನ್ನು ಮೋಸವೆಂದು ತಿಳಿಯಬೇಡ. ಹಸಿವೆಯಾದಾಗ, ಬಾಯಾರಿಕೆಯಾದಾಗ ಮಕ್ಕಳು ತಾಯನ್ನು ಸ್ಮರಿಸಿಕೊಳ್ಳುತ್ತವೆ" ಎಂದು ಒಂಟಿಯಾಗಿ ದೇವಿಯ ಮುಂದೆ ತಮ್ಮ ತಾಯಿದೇವಿಯನ್ನು ಕಾಣುತ್ತಾರೆ.


ನಾನೇ ಪರಮಾತ್ಮನಾಗಿದ್ದೇನೆ ಎಂದು ಸೈದ್ಧಾಂತಿಕವಾಗಿ ಸಾರುವ ಅದ್ವೈತಿಯು ಅಷ್ಟು ದೇವತಾ ಸ್ತುತಿಗಳನ್ನು ಹೊಗಳುತ್ತಾ, ಆರ್ತವಾಗಿ ನಿವೇದನೆ ಮಾಡಿಕೊಳ್ಳುತ್ತಾ ಏಕೆ ಬರೆದದ್ದು ಎಂದು ಯೋಚಿಸೋಣ.

ಆತ್ಮಾ ತ್ವಂ

"ನೀನೇ ನನ್ನ ಆತ್ಮ, ಗಿರಿಜೆಯು ನನ್ನ ಮತಿಯು" ಎಂದು ಹೇಳಿದ ಶಂಕರ ಶಿವಮಾನಸ ಪೂಜೆಯಲ್ಲಿ "ಕೈಕಾಲುಗಳಿಂದಲೂ, ಮಾತಿನಿಂದಲೂ, ದೇಹದಿಂದಲೂ, ಕರ್ಮದಿಂದಲೂ, ಕಣ್ಣುಕಿವಿಗಳಿಂದಲೂ ಅಥವಾ ಮನಸ್ಸಿನಿಂದಲೂ-ಮಾಡುವುದರಿಂದ ಅಥವಾ ಮಾಡದೇ ಇರುವುದರಿಂದಾದ-ಎಲ್ಲಾ ನನ್ನ ಅಪರಾಧಗಳನ್ನು ಕ್ಷಮಿಸು" ಎಂದು ಶಂಕರ ತನ್ನ ಗೊಂದಲವನ್ನು, ಪಾಪಪ್ರಜ್ಞೆಯನ್ನೂ ಹೇಳಿಕೊಳ್ಳುತ್ತಾರೆ.


ಇಲ್ಲಿ ಶಂಕರಾಚಾರ್ಯರ ಸಾಹಿತ್ಯವು ಅವರ ಅಭಿವ್ಯಕ್ತಿಯೇ ಆಗಿರುವುದು ಹೊರತು ಅವರು ಇತರರ ಬೂಟಲ್ಲಿ ಕಾಲಿಟ್ಟು ಬರೆದಿಲ್ಲವೆಂದೂ, ಹಾಗೆ ಬರೆಯಲು ಸಿನಿಮಾದ ಸನ್ನಿವೇಶಗಳಿಗೆ ಬರೆವ ಗೀತಸಾಹಿತಿ ಅವರಲ್ಲ!

ಭವಾನ್ಯಷ್ಟಕ, ದೇವ್ಯಪರಾಧಕ್ಷಮಾಪಣಾ ಸ್ತೋತ್ರ, ಶಿವಪರಾಧಕ್ಷಮಾಪಣಾ ಸ್ತೋತ್ರಗಳಂತಹ ಅನೇಕ ಸ್ತೋತ್ರಗಳಲ್ಲಿ ಆರ್ತತೆಯಿದೆ, ದೀನಭಾವವಿದೆ.



ಸ್ತನತಟಭರೇಣ

ಸುವಕ್ತ್ರೋಜಕುಂಭಾಂ ಎಂದು ಶಂಕರರ ಕಣ್ಣು ಕುಚಗಳ ಮೇಲೆ ಬೀಳಲು ಅಥವಾ ಸಾಹಿತ್ಯದಲ್ಲಿ ಧ್ವನಿಸಲು ಕಾರಣ ತಮ್ಮ ಮಾತೃಪ್ರೇಮದಿಂದ ತಾಯಿಯ ಹಾಲ್ಕುಡಿದ ಮೊಲೆಯನ್ನೇ ಸ್ತ್ರೀದೇವತೆಗಳಲ್ಲೂ ನೋಡಿರಬಹುದು ಹಾಗೂ ಸ್ತನವೆಂಬುದು ಫಲವತ್ತತೆಯ ಸಂಕೇತವಾಗಿ ಭಾರತೀಯ ತತ್ವಶಾಸ್ತ್ರಗಳಲ್ಲಿ ಆಗ್ಗಿಂದಾಗ್ಗೆ ಧ್ವನಿಸುತ್ತವೆ. ಶಿಲ್ಪಗಳಲ್ಲೂ ಮೂಡುತ್ತದೆ. ಹಾಗಾಗಿ ತಾಯಿಯ ನಗ್ನ ಶರೀರವನ್ನು ಮಗುವಿನ ನಗ್ನ ಕಣ್ಣುಗಳು ನೋಡಿದಾಗ ಬೇರೆಯೇ ಅರ್ಥವನ್ನು ಕಲ್ಪಿಸುವುದು ಬೇಡ ಎಂದೇನೋ ಈ ವಿಷಯವನ್ನು ಅಲ್ಲಿಗೇ ಬಿಟ್ಟುಬಿಡಲು ಈ ಮುಂದಿನ ಶ್ಲೋಕವನ್ನು ನೋಡಿದರೆ ಸಾಧ್ಯವಿದೆ. "ಹಿಮವಂತನ ಮಗಳೇ, ನಿನ್ನ ಸ್ತನ್ಯವನ್ನು, ನಿನ್ನ ಎದೆಯಿಂದ ಹುಟ್ಟಿದ ಕ್ಷೀರಸಮುದ್ರವು ಸರಸ್ವತಿಯ ರೂಪದಿಂದ ಹರಿಯುತ್ತಿರುವುದು ಎಂದು ತಿಳಿದೇನು. ಏಕೆಂದರೆ ದಯಾವತಿಯಾದ ನಿನ್ನಿಂದ ಕೊಡಲ್ಪಟ್ಟ ಮೊಲೆಹಾಲನ್ನು ಕುಡಿದು ಈ ಸ್ತೋತ್ರವನ್ನು ರಚಿಸಿದ ದ್ರವಿಡಶಿಶುವು ಪ್ರೌಢ ಕವೀಶ್ವರರ ಮಧ್ಯದಲ್ಲಿ ಕಮನೀಯನಾದ ಕವಿಯಾದನು" ಎಂದು ತಾವು ಕುಡಿದ ಮೊಲೆಹಾಲಿನ ನೆನಪನ್ನು ಶಂಕರರು ಸೌಂದರ್ಯಲಹರಿಯಲ್ಲಿ ದಾಖಲಿಸುತ್ತಾರೆ.



ಆದರೆ, "ಹೇ ನಾರೀತಿಲಕ ಶೈಲತನಯೆ, ಸಹಜವಾಗಿಯೇ ಕ್ಷೀಣವಾಗಿರುವ, ಸ್ತನಗಳ ಭಾರದಿಂದ ಶ್ರಮವನ್ನು ಹೊಂದಿ ಬಾಗಿ ಬಳುಕುತ್ತಿರುವುದರಿಂದ ಯಾವಾಗ ಮೆಲ್ಲಗೆ ಮುರಿದುಹೋಗುವುದೋ ಎಂಬಂತಿರುವ, ಬೀಳುವಂಥ ನದೀದಡದಲ್ಲಿರುವ ಮರಕ್ಕೆ ಸಮಾನವಾದ ಅವಸ್ಥೆಯುಳ್ಳ ನಿನ್ನ ನಡುವಿಗೆ ಚಿರಕಾಲ ಕ್ಷೇಮವಾಗಲಿ" (ಸೌಂದರ್ಯ ಲಹರಿ-79) ಎಂದು ಶಂಕರ ದೇವಿಗೆ ಹೇಳುವುದೇಕೆ? ಇನ್ನೂ ಮುಂದುವರಿದು "ಹೇ ಶಿವೆ, ಹೇ ಜನನಿ, ಕೃಶವಾದ ನಿನ್ನ ನಡುವಿನಲ್ಲಿ ಯಮುನಾ ನದಿಯು ಅತಿ ಚಿಕ್ಕದಾದ ತರಂಗಾಕೃತಿಯುಳ್ಳ ಯಾವ ಈ ರೋಮಾವಲಿ ರೂಪವಿರುವುದೋ ಅದು ವಿದುಷರಿಗೆ ಕುಚಕಲಶಗಳ ನಡುವೆ ಇರುವ ನೀಲಾಕಾಶವು ಅವುಗಳ ಪರಸ್ಪರ ಮರ್ದನದಿಂದ ಸಣ್ಣದಾಗಿ ಬಿಲವುಳ್ಳ ನಾಭಿಯನ್ನು ಪ್ರವೇಶಿಸಿದಂತೆ ಪ್ರಕಾಶಿಸುತ್ತದೆ" (ಸೌಂ.ಲ.77) ಎಂದು ತಾಯಿದೇವಿಯಲ್ಲಿ ಕುಚಗಳ ಮರ್ದನವನ್ನು ಕಾಣುವಂತಹ ದೃಷ್ಟಿ ಅದು ಹೇಗೆ ಬಂದಿರಬಹುದು? ಇದರಲ್ಲಿ ದೇವಿಯ ರೋಮಾವಳಿಯನ್ನು ಗಗನ ತಿಲಕೆಯೆಂದು, ಇನ್ನೂ ಇತರ ಶ್ಲೋಕಗಳಲ್ಲಿ ಧೂಮರೇಖೆಯೆಂದು ಉತ್ಪ್ರೇಕ್ಷಿಸಿರುವುದು ನಿಜವೇ. ಈ ಬಗೆಯ ಸ್ತನಭಾರದಿಂದ ಸೊಂಟವೇ ಬಿದ್ದುಹೋಗುವಂತಹ, ಉಜ್ವಲ ಕುಚದ್ವಯಗಳ, ಬೆವರಿಳಿಯುವ ಬಿಗಿದ ಚೋಲಿಗಳ, ನಾಭಿಯ ಅನೇಕ ವರ್ಣನೆಗಳು ಬರುತ್ತವೆ.

ಹೆಣ್ಣು ಒಬ್ಬ ಗಂಡಿಗೆ ತಾಯಿಯಾಗಿ ಪೊರೆದಂತೆ ಸತಿ ಅಥವಾ ಸಂಗಾತಿಯಾಗಿಯೂ ರತಿಸುತ್ತಾಳೆ. ಹಾಗಾಗಿಯೇ ಕವಿಯ ಕಣ್ಣಿಗೆ ಪ್ರಕೃತಿಯು ಪೊರೆಯುವ ತಾಯಿಯಾಗಿ ಕಂಡಂತೆ ರಮಣೀಯ ರತಿಯಾಗಿಯೂ ಕಾಣುತ್ತಾಳೆ. ಶಂಕರ "ನಿತ್ಯಾನಂದಕರಿ ವರಾಭಯಕರಿ ಸೌಂದರ್ಯ ರತ್ನಾಕರಿ" ಎಂದು ಅನ್ನ ಕೊಡುವ ಪ್ರಕೃತಿದೇವಿಯನ್ನು ಕಾವ್ಯದಲ್ಲಿ ಕಂಡಂತೆ, "ನಿನ್ನ ಸ್ತನಮಂಡಲವನ್ನು ನಿರ್ಮಿಸಿರುವ ಮನ್ಮಥನು ಸ್ತನಭಾರದಿಂದ ನಡುವು ಮುರಿದು ಕೆಳಗೆ ಬೀಳದಿರಲಿ ಎಂದು ಲವಲಿ ಎಂಬ ಹೆಸರಿನ ಬಿಳಿಯ ಬಳ್ಳಿಯಿಂದ ಮೂರು ಕಟ್ಟುಗಳನ್ನು ಬಿಗಿಸಿರುವನೋ" ಎಂದು ಅದೇ ದೇವಿಯನ್ನು ರಮಣೀಯವಾಗಿ ರಸಿಕತೆಯಿಂದ ವರ್ಣಿಸಿರುವುದು. ವಿದ್ವಾಂಸರು ಅದನ್ನು ನಾನಾರೀತಿಯಲ್ಲಿ ಅಧ್ಯಾತ್ಮ ತತ್ವಗಳಿಗೆ ಸಮೀಕರಿಸಿ ಅರ್ಥೈಸುತ್ತಾರೆ. ಮಾಡರ್ನ್ ಆರ್ಟ್ ಹೆಸರಿನಲ್ಲಿ ಅದೇನೇನೋ ಇರುವಂತಹ ವರ್ಣಾಕೃತಿಗಳನ್ನು ತಮ್ಮ ತಮ್ಮ ದೃಷ್ಟಿಗೆ ತಕ್ಕಂತೆ ವರ್ಣಿಸುವಂತೆ ಈ ಸ್ತೋತ್ರಗಳನ್ನೂ ನಾನಾ ಬಗೆಯಾಗಿ ವ್ಯಾಖ್ಯಾನಿಸಬಹುದು. ಅದಕ್ಕೆ ಶಂಕರರೇನೂ ತಲೆಕೆಡಿಸಿಕೊಳ್ಳುವುದಿಲ್ಲ.

ಸೌಂದರ್ಯಲಹರಿಯಲ್ಲಿ "ಹೇ ಭಗವತಿ, ಅತಿ ವೃದ್ಧನೂ ಕುರುಡನೂ ರತಿಕಲೆಗಳಲ್ಲಿ ಮೂಢನೂ ಆದ ಮನುಷ್ಯನು ನಿನ್ನ ಕಟಾಕ್ಷಕ್ಕೆ ಪಾತ್ರನಾದರೆ, ಅವನನ್ನು ಯುವತಿಯರು ಜಡೆಗಳು ಬಿಚ್ಚಿಹೋಗುತ್ತಿದ್ದರೂ, ಸೆರಗುಗಳು ಜಾರಿ ಬೀಳುತ್ತಿದ್ದರೂ, ಔಡ್ಯಾಣಗಳು ಕಿತ್ತು ಹೋಗುತ್ತಿದ್ದರೂ, ಪಟ್ಟೆಸೀರೆಗಳ ನಿರಿ ಜಾರಿ ಹೋಗುತ್ತಿದ್ದರೂ ಹಿಂಬಾಲಿಸುತ್ತಾರೆ." (13) ಎಂದು ಹೇಳುವಲ್ಲಿ ಶಂಕರರು ಕಟ್ಟಿಕೊಡುವ ಚಿತ್ರಣ ನೋಡಿ. ಮೈಮೇಲೆ ಜ್ಞಾನವಿಲ್ಲದೇ ಹೆಚ್ಚೂ ಕಡಿಮೆ ಬೆತ್ತಲೆಯೇ ಆಗುವಂತೆ ಕುರುಡ ವೃದ್ಧನ ಹಿಂದೆ ಓಡಿಹೋಗುವ ಯುವತಿಯರ ಚಿತ್ರ ಈ ಬ್ರಹ್ಮಚಾರಿ, ರತಿಸುಖ ವಂಚಿತ ಸಂನ್ಯಾಸಿಯ ಕಣ್ಣಲ್ಲಿನ ಒಂದು ಆಸೆಯ ಚಿತ್ರಣವಾಗಿ ನನಗೆ ಕಾಣುತ್ತದೆ.

ತನ್ನ ವಾದಗಳಿಂದ ಸ್ಪರ್ಧಿಗಳನ್ನು ಮಣಿಸುತ್ತಾ ಸಾಗುವ ಶಂಕರ ಮಂಡನ ಮಿಶ್ರನೊಂದಿಗೆ ವಾಗ್ವಾದಕ್ಕಿಳಿದಾಗ, ಮಂಡನ ಮಿಶ್ರನ ಹೆಂಡತಿಯಾದ ಭಾರತಿಯು ಕಾಮಶಾಸ್ತ್ರದ ಅನುಭವಗಳ ಬಗ್ಗೆ ವಿಷಯವನ್ನು ಮಂಡಿಸತೊಡಗುತ್ತಾಳೆ. ಇದರ ನೇರ ಅನುಭವವಿರದ ಶಂಕರ ಕಾಶೀರಾಜ ಅಮರುಕನು ಸತ್ತಾಗ ಅಲ್ಲಿ ಪ್ರವೇಶಿಸಿ, ಅಲ್ಲಿನ ರಾಜ ವೈಭೋಗಗಳನ್ನು ಭೋಗಿಸಿ, ಅವನ ಪತ್ನಿಯೊಂದಿಗೆ ರತಿಸುಖ ಅನುಭವಿಸಿ ಮತ್ತೆ ಭಾರತಿಯತ್ತ ಬಂದು ಅದರ ಬಗ್ಗೆಯೂ ಮಾತುಗಳನ್ನು ಆಡಿರಬಹುದು. ಆದರೆ, ಶ್ರೀ ಶಂಕರಭಗವತ್ಪಾದರು ಸಂನ್ಯಾಸಿಗಳೂ, ಬ್ರಹ್ಮಚಾರಿಗಳೂ ಆಗಿರುವಾಗ ಅವರು ಈ ರತಿಸುಖವನ್ನು ಪಡೆದರು ಎಂದು ಹೇಳಲು ಹೇಗೆ ಸಾಧ್ಯ? ಶಂಕರಾಚಾರ್ಯರೇನು ಬಿಡದಿಯ ನಿತ್ಯಾನಂದನೇ? ಹಾಗಾಗಿ ಸತ್ತ ರಾಜನ ದೇಹದಲ್ಲಿ ಪರಕಾಯ ಪ್ರವೇಶವನ್ನು ಮಾಡಿದ ಶಂಕರನ ಆತ್ಮವು ರಾಜನನ್ನು ಜೀವಂತವಾಗಿಸಿ, ರತಿ ಮತ್ತು ಇತರ ಭೋಗಗಳ ಅನುಭವವನ್ನು ಪಡೆದು ತನ್ನ ಶಿಷ್ಯರು ಕಾಯುತ್ತಿದ್ದ, ಶವದಂತೆ ಬಿದ್ದಿದ್ದ ತನ್ನ ದೇಹಕ್ಕೆ ಮರಳಿ, ಮೇಲೆದ್ದು ಭಾರತಿಯೊಂದಿಗೆ ತನ್ನ ಅನುಭವದ ಪ್ರಕಾರ ವಿಷಯವನ್ನು ಹಂಚಿಕೊಂಡರು ಎಂದು ನಂಬಿಸಲಾಗಿದೆ. ಈ ಇಡೀ ಪರಕಾಯ ಪ್ರವೇಶದ ಪ್ರಕರಣವೇ ನನಗೆ ಹಾಸ್ಯಾಸ್ಪದವಾಗಿ ಕಾಣುತ್ತದೆ.

ಇರಲಿ, ಅಧ್ಯಾತ್ಮ ಸೂಕ್ಷ್ಮವನ್ನೋ, ಸಿದ್ಧಾಂತದ ಪ್ರತಿಪಾದನೆಯನ್ನೋ, ಭಕ್ತಿಯನ್ನೋ ಸಾರುವ ಶಂಕರರ ತಾಯಿ ಮತ್ತು ಕಾಲ್ಪನಿಕ ಸಂಗಾತಿ ಮಾತ್ರ ದೇವಿಗಳಲ್ಲಿ ಕಂಡಿರುವುದನ್ನು ಅವರ ದೇವೀ ಸಂಬಂಧಿತ ಸ್ತೋತ್ರಗಳು ಹೇಳುತ್ತವೆ.

ನಾನು ಪ್ರಚಂಡ ಬಹುಮತದಿಂದ ಗೆದ್ದೆ ಗೊತ್ತುಂಟಾ!

ಧಾತ್ತೇರಿ


▸ ಯಾಹೂ

ಇಂದಿರಾ ಗಾಂಧಿ ಎದುರಿಗೆ ರಾಜ್‌ಕುಮಾರರನ್ನು ಚುನಾವಣೆಗೆ ನಿಲ್ಲಿಸುತ್ತೇವೆ ಎಂಬ ವದಂತಿಗೇ ಹೆದರಿದ ಡಾ. ರಾಜಕುಮಾರ್ ಅಂದು ವೇಷ ಮರೆಸಿಕೊಂಡು ತೀರ್ಥಯಾತ್ರೆಗೆ ಹೋದವರು ಇಂದಿರಾ ಗಾಂಧಿ ಚಿಕ್ಕಮಗಳೂರಲ್ಲಿ ಗೆದ್ದ ನಂತರ ಕಾಣಿಸಿಕೊಂಡರಂತಲ್ಲಾ. ಆದರೆ ಈಗ ಅವರ ಸೊಸೆ, ಮಧು ಬಂಗಾರಪ್ಪ ಎಂಬ ಹುಂಬನ ಮಾತು ಕೇಳಿ ಶಿವಮೊಗ್ಗ ಚುನಾವಣೆಯಲ್ಲಿ ಸ್ಪರ್ಧಿಸಿ ಮತ್ತೊಂದು ಬಿಜೆಪಿ ಸೀಟಿಗೆ ಅನುಕೂಲ ಮಾಡಿಕೊಡಲಿದ್ದಾರಂತಲ್ಲಾ. ಕುಮಾರ್ ಬಂಗಾರಪ್ಪ ಸಜ್ಜನ ರಾಜಕಾರಣಿ. ಅವನನ್ನು ರಾಜಕಾರಣದಿಂದಲೇ ದೂರವಿಡಬೇಕೆಂಬ ಹಟಕ್ಕೆ ಬಿದ್ದಿರುವ ಮಧು ಬಿಜೆಪಿಗೆ ಮತ್ತೆ ಶಿವಮೊಗ್ಗವನ್ನು ಬಾಳೆಲೆ ಮಾಡತೊಡಗಿದ್ದಾನಂತಲ್ಲಾ. ಇದನ್ನು ಗ್ರಹಿಸಿದ ಕಾಂಗ್ರೆಸ್ಸಿಗರು "ಈ ಬಂಗಾರಪ್ಪ ಬದುಕಿದ್ದಾಗಲೂ ಕಾಂಗ್ರೆಸ್ಸಿಗೆ ಕಂಟಕವಾಗಿದ್ದರು. ಆದರೆ ಈಗ ಮಧು ಎಂಬ ಕೀಟ ಶಿವಮೊಗ್ಗ ಕಾಂಗ್ರೆಸ್‌ನ ಕಾಂಡವನ್ನೇ ಕೊರೆಯತೊಡಗಿದೆ. ಅತ್ತ ಕುಮಾರ್ ಬಂಗಾರಪ್ಪನೂ ಹಾಳು, ಇತ್ತ ಗೀತಾ ಶಿವಣ್ಣನ ಮಾನವೂ ಹಾಳು. ಎಲ್ಲಕ್ಕಿಂತ ಮುಖ್ಯವಾಗಿ ಎಲ್ಲ ಜನಾಂಗದ ವಿಶ್ವಾಸ ಪ್ರೀತಿ ಗಳಿಸಿದ ರಾಜ್ ಕುಟುಂಬದ ಮರ್ಯಾದೆಯೂ ಮಣ್ಣು ಪಾಲು. ಇಂತಹ ನಿರ್ಧಾರವನ್ನು ಮಣ್ಣಿನ ಮಗನಲ್ಲದೆ ಇನ್ನಾರು ರೂಪಿಸಿಯಾರು" ಎಂದವಂತಲ್ಲಾ, ಥೂತ್ತೇರಿ!

* * *

ಮಂಡ್ಯದ ಉಪ ಚುನಾವಣೆಯಲ್ಲಿ ರಮ್ಯ ಗೆದ್ದ ಕೂಡಲೇ ಹಲವಾರು ಜನ ಮಹಿಳಾ ಮಣಿಗಳಿಗೆ ಚುನಾವಣಾ ತಿಮಿರು ಅಮರಿಕೊಂಡು ಕಟ್ಟಿಕೊಂಡವರನ್ನೆ ಕಾಡಿದರಂತಲ್ಲಾ. ಈ ಪೈಕಿ ರಕ್ಷಿತಾ ಎಂಬ ನಟಿ ದೇವೇಗೌಡರನ್ನ 'ಅಪ್ಪಾಜಿ' ಎಂದು ಕರೆದು, ಕುಮಾರಣ್ಣನನ್ನು "ಅಣ್ಣಾ ನೀನೇ ಗತಿ" ಎಂದರೂ ಪ್ರಯೋಜನವಾಗಲಿಲ್ಲವಂತಲ್ಲಾ. ಏಕೆಂದರೆ ದೇವ್ರೂ ಫ್ಯಾಮಿಲಿ ಚುನಾವಣೆಗೆ ಟಿಕೆಟ್ ಕೊಡಬೇಕಾದರೆ ಇನಿಷಿಯಲ್ ಅಮೌಂಟಾಗಿ ನಾಲ್ಕು ಲಕ್ಷ ಕೊಡುತ್ತದೆ. ಇನ್ನುಳಿದ ಖರ್ಚನ್ನ ಅವರೇ ನಿಭಾಯಿಸಿಕೊಳ್ಳಬೇಕು. ಇಂತಹ ನಿಭಾವಣೆಗೂ ಗತಿಯಿಲ್ಲದವರನ್ನು ಅವರು ತಿರುಗಿಯೂ ನೋಡುವುದಿಲ್ಲ, ಇಂತಲ್ಲಿ ರಕ್ಷಿತಾಳ ಆರ್ತನಾದ ಮುಳುಗಿಹೋಗಿ ಪುಟ್ಟರಾಜಣ್ಣನೇ ಪುನಃ ಎದ್ದು ನಿಂತನಂತಲ್ಲಾ. ಇದೆಲ್ಲಕ್ಕಿಂತ ಮುಖ್ಯವಾಗಿ ತಮ್ಮ ಅಧಿಕಾರಾವಧಿಯಲ್ಲಿ ಯಾರು ಕಾಸು ಮಾಡಿಕೊಂಡಿದ್ದಾರೊ ಅಂತಹವರಿಗೆ ಗಂಟು ಬಿದ್ದು ಕಾಸು ಬಿಚ್ಚಿಸುವವರೆಗೂ ಬಿಡದ ದೇವ್ರೂ ಕುಟುಂಬವನ್ನ ಯಾಮಾರಿಸಿದವನೆಂದರೆ ಚಲುವಣ್ಣನಂತಲ್ಲಾ. ರಾಮನಗರದಲ್ಲಿ ಕುಮಾರಣ್ಣ ರಾಜಿನಾಮೆ ಕೊಟ್ಟು ಅನಿತಾ ಕುಮಾರಸ್ವಾಮಿ ಕಣಕ್ಕಿಳಿದರು. ಅದರಂತೆ ಮಂಡ್ಯದಲ್ಲಿ ಚಲುವರಾಯಸ್ವಾಮಿ ರಾಜಿನಾಮೆ ಕೊಟ್ಟ ನಂತರ ಆತನ ಹೆಂಡತಿ ನಿಲ್ಲಬೇಕಾಗಿತ್ತು, ಈ ರೀತಿ ಪಲಾಯನ ಮಾಡಿ ನಮಗೆ ತೊಂದರೆ ಕೊಟ್ಟವರ ಬಗ್ಗೆ ನಿಗಾ ಇಡುತ್ತೇವೆ ಎಂದು ದೇವ್ರು ಗುಟುರು ಹಾಕಿದಾಗ ಚಲುವ ಬೆಚ್ಚಿಬಿದ್ದನಂತಲ್ಲಾ, ಥೂತ್ತೇರಿ!!

* * *



ಒಂದು ಕಾಲದಲ್ಲಿ ರಾಮಕೃಷ್ಣ ಹೆಗಡೆಯ ಜನಪ್ರಿಯತೆಗೆ ತಡೆಯೊಡ್ಡಲು ಕಾಂಗ್ರೆಸ್ ಜನಾರ್ದನ ಪೂಜಾರಿಯನ್ನೇ ಪಾರ್ಟಿಯ ಅಧ್ಯಕ್ಷನನ್ನಾಗಿ ಮಾಡಿ ಕರ್ನಾಟಕಕ್ಕೆ ಕಳುಹಿಸಿತ್ತು. ಅದಕ್ಕೂ ಮೊದಲು ಪೂಜಾರಿ ಅರ್ಥ ಸಚಿವರಾಗಿ ಕೇಳಿದವರಿಗೆಲ್ಲ ಮೂರು ಸಾವಿರ ಕೈಸಾಲ ಕೊಡಿಸಿ, ಅದರಲ್ಲಿ ಬಹುಪಾಲು ಫಲಾನುಭವಿಗಳು ಕಾಂಗ್ರೆ ಕಾರ್ಯಕರ್ತರೇ ಇದ್ದರಂತಲ್ಲಾ. ಅದೇನಾದರಾಗಲಿ ಆ ಮೂರು ಸಾವಿರ ಸಾಲವನ್ನು ಮರೆತ ಜನ ಪೂಜಾರಿಯನ್ನ ಮರೆತಿದ್ದು ಇತಿಹಾಸ. ಅಂದಿನಿಂದ ಇಂದಿನವರೆಗೆ ಏನು ಮಾಡಿದರೂ ಗೆಲ್ಲಲಾಗದ ಪೂಜಾರಪ್ಪನಿಗೆ, ಈಗ ಪಾರ್ಟಿಯವರೇ "ಪ್ರೈಮರಿ ಪರೀಕ್ಷೆಯಲ್ಲಿ ಪಾಸಾಗಿ ಬಂದರೆ ಮಾತ್ರ ಲೋಕಸಭೆಗೆ ಟಿಕೆಟ್" ಎನ್ನಲಾಗಿ ಅದರಲ್ಲೂ ಗೆದ್ದು ಬಂದರಂತಲ್ಲಾ.

ಈಗ ಪೂಜಾರಿ ಮಾತನಾಡಿಸಿದರೆ ಹೇಗೆ ಅನ್ನಿಸಿತು. ಆ ಕೂಡಲೇ ಮಂಗಳೂರು ಮೋಹನನಿಂದ ನಂಬರ್ ಪಡೆದು ಫೋನ್ ಮಾಡಿದರೆ ರಿಂಗಾಯ್ತು.

ರಿಂಗ್ ಟೋನ್: "ಎದ್ದೇಳು ಮಂಜುನಾಥಾ ಏಳು ಬೆಳಗಾಯಿತು. ಧರ್ಮದೇವತೆಗಳೂ ನಿನ್ನ..."

"ಹಲೋ ಯಾರು?"

"ನಾನು ಸಾರ್, ಯಾಹು, ಪತ್ರಕರ್ತ."

"ನಮಸ್ಕಾರ ಯಾಹು ಅವರೆ, ಬಹಳ ದಿನ ಆಯ್ತಲ್ಲಾ."

"ಹೌದು ಸಾರ್. ನಿಮ್ಮನ್ನ ಭೇಟಿ ಮಾಡೋ ಅವಕಾಶನೇ ಸಿಗಲಿಲ್ಲ, ಈಗ ಫೋನ್ ಮಾಡ್ಬೇಕಾಯ್ತು."

"ಯಂತಕ್ಕೆ ಫೋನು ಮಾಡಿದ್ದು ಹೇಳಿ?"

"ಮೊದಲನೆದಾಗಿ ನೀವು ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರದ ಪ್ರೈಮರಿ ಪರೀಕ್ಷೆಯಲ್ಲಿ ಗೆದ್ದದ್ದಕ್ಕೆ ಕಂಗ್ರಾಜುಲೇಷನ್ಸ್."

"ಈ ಚುನಾವಣೆ ಬಿಡಿ. ಮುಂದಿನ ಚುನಾವಣೆಯಲ್ಲಿ ಗೆಲ್ಲುವುದು ಮುಖ್ಯ ಅಲ್ಲವ."

"ಅದ್ರು ನಿಮ್ಮಂತವರಿಗೆ ಇಂತ ಅಗ್ನಿ ಪರೀಕ್ಷೆನೆ?"

"ಮಾಡಿಕೊಳ್ಳಲಿ ಬಿಡಿ. ಮಾಡಿದವರು ಯಾರೂ? ನಮ್ಮ ಪಾರ್ಟಿಯವರು ತಾನೆ. ಅವರಿಗಿದ್ದ ಅನುಮಾನ ಪರಿಹಾರವಾಯ್ತಲ್ಲ."

"ಅದು ಸರಿ ಸಾರ್. ಕೇಂದ್ರದಲ್ಲಿ ಹಣಕಾಸು ಸಚಿವರಾಗಿದ್ದವರು, ರಾಜ್ಯ ಕಾಂಗ್ರೆಸ್ ಅಧ್ಯಕ್ಷರಾಗಿದ್ದವರು, ದಕ್ಷಿಣ ಕನ್ನಡದಲ್ಲಿ ಎದುರಾಳಿಯೇ ಇಲ್ಲದೆ ಮೆರೆದವರನ್ನು ಈತರ ಒಂದು ಪ್ರೈಮರಿ ಚುನಾವಣೆಗೆ ಗುರಿ ಮಾಡಿದರೆ ಅವಮಾನ ಅಲ್ಲವೆ?"

"ನಾನು ಹಾಗೆ ತಿಳಿದುಕೊಂಡರೆ ಅವಮಾನ. ನಾನು ಹಾಗೆ ಭಾವಿಸಿಯೇ ಇಲ್ಲ, ಕಾಂಗ್ರೆಸ್ಸಿನಲ್ಲಿ ಇವ ದೊಡ್ಡವ, ಇವ ಸಣ್ಣವ ಅಂತ ಎಣಿಸುವುದಿಲ್ಲ, ನಾನೂ ಕೂಡ ಹಾಗೆ ಭಾವಿಸಿಲ್ಲ, ಆದ್ದರಿಂದ ನನಗೆ ಅವಮಾನವಾಗಿಲ್ಲ, ಒಂದು ವೇಳೆ ನಾನು ಸೋತಿದ್ದರೆ ಅವಮಾನವಾಗುತ್ತಿತ್ತು. ಆದರೆ ಪ್ರಚಂಡ ಬಹುಮತದಿಂದ ಗೆದ್ದು ಬಂದಿದ್ದೇನೆ."

"ನೂರಾರು ಮತಗಳಿಂದ ಗೆದ್ದದ್ದನ್ನೆ ಪ್ರಚಂಡ ಬಹುಮತ ಅಂತಿರಲ್ಲಾ ಸಾರ್?"

"ಅದು ಸುಮ್ಮನೆ ಮಾತಿಗೆ ಹೇಳಿದ್ದು."

"ನೀವು ಕಾಂಗ್ರೆಸ್ಸಿನಲ್ಲಿ ಹುಡುಕಿದರೂ ಸಿಕ್ಕದ ಅಪರೂಪದ ರಾಜಕಾರಣಿಯಂತೆ. ಪಾರ್ಟಿ ವಿಷಯದಲ್ಲಿ ಪ್ರಾಮಾಣಿಕರಂತೆ. ಅದ್ರು ಯಾಕೆ ಚುನಾವಣೆಯಲ್ಲಿ ಸೋಲ್ತೀರಿ."

"ನೀವು ಹೇಳಿದ್ದು ಸರಿ. ಆದರೆ ಧರೆ ಹತ್ತಿ ಉರಿದೊಡೆ ಎಂಬ ಮಾತಿನಂತೆ ಇಡೀ ಕರಾವಳಿಯೇ ಕೋಮುದಳ್ಳುರಿಗೆ ಸಿಕ್ಕಿ ಉರಿಯುವಾಗ ನಾನು ಗೆದ್ದು ಬರುವುದು ಸಾಧ್ಯವೆ."

"ಅಂಗಾದ್ರೆ ಈಗ್ಲೂ ಡವುಟ ಸಾರ್?"

"ಈಗ ಹಾಗಿಲ್ಲ, ಕಾಂಗ್ರೆಸ್ಸಿನ ದೈತ್ಯ ಶಕ್ತಿ ಮತ್ತೆ ವಿಜ್ರುಂಭಿಸುವುದುಂಟು. ಬಿಜೆಪಿಗಳ ಪಾಪದ ಕೊಡ ತುಂಬಿದೆ. ಹೆಣ್ಣು ಮಕ್ಕಳ ಶಾಪ ತಟ್ಟಿದೆ. ಅದೂ ಅಲ್ಲದೆ ನಾನು ವಿಧವೆ ಹೆಣ್ಣು ಮಕ್ಕಳ ಆಶೀರ್ವಾದ ಪಡೆದಿದ್ದೇನೆ."

"ನಿಮ್ಮ ವಿಧವೆ ಪೂಜಾರಿಗಳ ಕತೆ ಎಲ್ಲಿಗೆ ಬಂತು ಸಾರ್?"

"ಅದು ಒಂದು ದೊಡ್ಡ ಕತೆ ಮಾರಾಯ್ರೆ. ಅವರನ್ನು ಆ ಬಿಜೆಪಿ ಮೂಲಭೂತವಾದಿಗಳು ಆಡಿಕೊಳ್ಳುವುದುಂಟು. ನಾಯಿ ಬೊಗಳಿದರೆ ಭೂಲೋಕ ಹಾಳಾಗುವುದುಂಟ? ಹಾಗೆ ಈ ವಿಧವಾ ಪೂಜಾರಿಗಳು ಸುಮ್ಮನೆ ಪೂಜೆ ಮಾಡಿಕೊಂಡಿರಬೇಕು. ಬಿಜೆಪಿಗಳ ಟೀಕೆಗೆ ತಲೆಬಿಸಿ ಮಾಡಿಕೊಳ್ಳಬಾರದು."

"ಅವರಿಗೆ ಮಂತ್ರ ಬರಲ್ಲ ಅಂತ ಚೆಡ್ಡಿಗಳು ಹೇಳತಿದ್ರಲ್ಲ."

"ದೇವರ ಪೂಜೆಗೆ ಮಂತ್ರಕ್ಕಿಂತ ಭಕ್ತಿ ಮುಖ್ಯ ಅಂತ ಅವರಿಗೆ ನಾನು ಸರೀಗೆ ಉತ್ತರ ಕೊಟ್ಟಾಯ್ತು."

"ಚೆಡ್ಡಿಗಳಿಗೆ ಯಾವುದರಲ್ಲೂ ಭಕ್ತಿಯಿಲ್ಲ ಅಲ್ಲವೆ?"

"ಅವರಿಗೆ ಕಾಸಿನ ಮೇಲೆ ಭಕ್ತಿಯುಂಟು. ಅದರಿಂದಲೇ ಜೀವನ ನಡೆಯುವುದು ಅಂತ ಅವರಿಗೆ ಚೆನ್ನಾಗಿ ಗೊತ್ತು."

"ನೀವು ಹೊಸ ತಲೆಮಾರಿನ ಮೋನುಗೆ ಅವಕಾಶ ಮಾಡಿಕೊಡಬೇಕಿತ್ತು ಸಾರ್."

"ಯಾಕೆ? ನಾನು ಸಮರ್ಥನಲ್ಲವ? ಪ್ರೈಮರಿ ಚುನಾವಣೆಯಲ್ಲಿ ಗೆದ್ದಿಲ್ಲವಾ?"

"ನಿಮಗೆ ಮುಂದೆ ಓಟು ಮಾಡೋರು ಸಾಮಾನ್ಯ ಮತದಾರರು. ಪ್ರೈಮರಿ ಚುನಾವಣೇಲಿ ಗೆಲ್ಲೋದು ಗೆಲುವಲ್ಲ."

"ಅಂದರೆ ನಾನು ಮತ್ತೆ ಸೋಲುತ್ತೆನಾ?"

"ಯಾವುದಕ್ಕೂ ಮೋನು ಅವರನ್ನ ಜೊತೆಲಿ ಕರಕಂಡೋಗಿ."

"ಅದು ನನಗೆ ಮೊದಲೆ ಗೊತ್ತು."

"ಥೂತ್ತೇರಿ!!"

ಹೊಗಳಿಕೆ ತೆಗಳಿಕೆ

ಮೋದಿ ಎಂಬ ಗುಜರಿ ಗುಜರಾತಿ

ಗುಜರಾತ್ ಎಂದಾಕ್ಷಣ ಇತ್ತೀಚಿನವರೆಗೆ ನೆನಪಿಗೆ ಬರುವುದು ಗಾಂಧಿ ಇಲ್ಲವಾದರೆ ಸಿಂಹಗಳ ಗೀರ್ ಅರಣ್ಯ. ಆದರೀಗ ಗುಜರಾತ್ ಎಂದಾಕ್ಷಣ ದರಿದ್ರ ಮುಖವೊಂದು ಎಲ್ಲೆಡೆ ಉದ್ದೇಶಪೂರ್ವಕವಾಗಿ ಬಿಂಬಿಸಲ್ಪಡುತ್ತಿದೆ.

ಪ್ರಧಾನಿ ಪಟ್ಟದ ಆಕಾಂಕ್ಷಿಯಾದ (ಬಿಜೆಪಿ ಗೆದ್ದರೂ ಪ್ರಧಾನಿ ಪಟ್ಟ ಸುಲಭವಲ್ಲ, ಇದು ಪಕ್ಷದೊಳಗಿನ ವಾಸ್ತವ) ಈ ಮೋದಿ ದೇಶದ ಯಾವ ಮೂಲೆಗೆ ಹೋದರೂ ಅಲ್ಲಿ ಗುಜರಾತಿನ ಸಂಬಂಧವನ್ನು ತನ್ನದೇ ಕಲ್ಪನೆಯಲ್ಲಿ ಹೆಣೆಯುತ್ತಾನೆ. ಇತಿಹಾಸದ ಕಳಪೆ ಜ್ಞಾನದ ಕಾರಣ ಈ ಹೆಣಿಗೆ ಕೆಲವೊಮ್ಮೆ ನಗೆಪಾಟಲಿಗೀಡಾದದ್ದೂ ಇದೆ.

ಮೊನ್ನೆ ಈತ ಮಂಗಳೂರಿಗೆ ಬಂದಾಗ ನೆರೆದವರ ನಿರೀಕ್ಷೆಗೆ ತಕ್ಕಂತೆ ಹಿಂದೂತ್ವದ ಬಗ್ಗೆ ಮಾತಾಡದೇ ಅಡಿಕೆ ಹಾಗು ಬ್ಯಾಂಕಿನ ಬಗ್ಗೆ ಮಾತಾಡಿ ಅವುಗಳಿಗೂ ಗುಜರಾತಿಗೂ ಇರುವ ಸಂಬಂಧದ ಬಗ್ಗೆ ಹೇಳಿಕೊಂಡಿದ್ದ. ಇಲ್ಲಿನವರು ಬ್ಯಾಂಕ್ ತೆರೆದರೆ (ಹುಟ್ಟು ಹಾಕಿದರೆ) ಬ್ಯಾಂಕಿನ ತಿಜೋರಿ ತುಂಬುವುದು ಗುಜರಾತಿಗಳಂತೆ. ತನ್ನ ಸಭೆಗಳಲ್ಲಿ ಟೋಪಿಯ ಬಾಡಿಗೆ ಮುಸಲ್ಮಾನರು ಕಾಣಿಸುವಂತೆ ವ್ಯವಸ್ಥೆ ಸದಾ ಇರುವಂತೆ ನೋಡಿಕೊಳ್ಳುವ ಈತ ಮುಸಲ್ಮಾನರು ಪ್ರೀತಿಯಿಂದ ಕೊಟ್ಟ ಟೋಪಿ ಹಾಕಲು ನಿರಾಕರಿಸಿದ್ದ. ಹೋದಲ್ಲೆಲ್ಲ ಆಯಾ ಪ್ರದೇಶದ ದಿರಿಸು, ಟೊಪ್ಪಿಗಳನ್ನು ಧರಿಸಿ ಭಾವನಾತ್ಮಕವಾಗಿ ಜನರನ್ನು ಸೆಳೆಯುವ ಕಲೆ ಈತನಿಗೆ ಗೊತ್ತು.




ದೇಶದ ಗುಜರಿ ಸಾಮಾನುಗಳನ್ನು ಕಲೆಹಾಕಿ ದೇಶದ ಗೌರವಾನ್ವಿತ ನಾಯಕ ಪಟೇಲರ ಪ್ರತಿಮೆ ರಚಿಸಿ ಆ ಮೂಲಕ ಗುಜರಾತಿ ಪಟೇಲರ ಮಾನಕಳೆಯಲು ಹೊರಟ ಈತ ಗುಜರಾತಿ ಹೌದೋ? ಇಲ್ಲಾ ಗುಜರಾತಿನ ಮಾನಕಳೆಯಲೆಂದೇ ಬಂದವನೇ? ಎಂದು ಆಡಿಕೊಳ್ಳುವಂತಾಗಿದೆ. ಗಾಂಧಿ ವಿಶ್ವದೆಲ್ಲೆಡೆ ಗುಜರಾತಿನ ಶ್ರೇಷ್ಠತೆಯನ್ನು ಪಸರಿಸಿದರೆ ಮೋದಿಯ ಜಾಗತಿಕ ವರ್ಚಸ್ಸು (ಅಮೆರಿಕ ವೀಸಾ ಪ್ರಕರಣ) ಎಲ್ಲರಿಗೂ ತಿಳಿದದ್ದೇ. ಮೊನ್ನೆ ಲೂಧಿಯಾನದಲ್ಲಿ ಕಾಂಗ್ರೆಸ್ಸಿನ ಬಗ್ಗೆ ಎಬಿಸಿಡಿ ಅಂದರೆ ಆದರ್ಶ, ಬೊಫೋರ್ಸ್, ಕಾಮನ್‌ವೆಲ್ತ್ ಮತ್ತು ದಾಮಾದ್ ಕಿ ದರ್ಬಾರ್ ಎಂದು ತಮಾಷೆ ಮಾಡಿದ್ದ ಮೋದಿ ಮಾತಿನಲ್ಲಿ ಮರಳುಮಾಡುವ (ಬಡವರ ಉದ್ಧಾರದ ಮಾತಾಡುವ ಅಂಬಾನಿ ಸೇವಕ) ಮೋದಿಯಂತಹ ಗುಜರಾತಿ ವಿದ್ಯಾರ್ಥಿಗಳ ಬಗ್ಗೆ ಅಮೆರಿಕದಲ್ಲಿ ಇದೇ ಇಂಗ್ಲಿಷ್ ವರ್ಣಾಕ್ಷರ ಎಬಿಸಿಡಿಯ ಜೋಡಣೆಯಿಂದ ತಯಾರಿಸಿದ ಜೋಕೊಂದು 'ಅಮೆರಿಕನ್ ಬಾರ್ನ್ ಕಂಫ್ಯೂಸ್ಡ್ ದೇಸಿ' ಚಾಲ್ತಿಯಲ್ಲಿದೆ. ಅದು ಕೆಲವು ಬದಲಾವಣೆಗಳೊಂದಿಗೆ ಮೋದಿಗೆ ಸರಿಯಾಗೇ ಒಪ್ಪುತ್ತದೆ.

- ಶಶಿ ಪುತ್ತೂರ್, ದಕ

ಪತ್ರಿಕೆಯ ಫೆಬ್ರವರಿ 12, 2014 ರ ಸಂಚಿಕೆಯಲ್ಲಿ ಡಾ.ವಾಸು ಎಚ್.ವಿ ಬರೆದಿರುವಂತೆ ಕಾರ್ಪೊರೇಟ್ ಸಾಲಗಳ ಪುನರ್-ರಚನೆ (ಸಿಡಿಆರ್) ಮಾಡುವ ಒಂದು ದೊಡ್ಡ ಮಾಫಿಯಾ ಎಲ್ಲಾ ಸಾರ್ವಜನಿಕರಂಗದ ಬ್ಯಾಂಕುಗಳಲ್ಲಿ ಇದ್ದು ಅದು ಎಲ್ಲಾ ರಾಷ್ಟ್ರೀಕೃತ ಬ್ಯಾಂಕುಗಳನ್ನು ಗೆದ್ದಲಿನಂತೆ ಒಳಗಿಂದೊಳಗೇ ಕೊರೆದು ಟೊಳ್ಳು ಮಾಡುತ್ತಿವೆ. ಇತ್ತೀಚಿನವರೆಗೆ ಎರಡೂವರೆ ಲಕ್ಷ ಕೋಟಿಗೂ ಮಿಕ್ಕಿ ಬೃಹತ್ ಕಂಪನಿಗಳ ಸಾಲಗಳನ್ನು ಸಿಡಿಆರ್ ಅಡಿ ತರಲಾಗಿದ್ದು ಇದಕ್ಕಾಗಿ ಸುಮಾರು 25,000 ಕೋಟಿ ರೂಪಾಯಿಯ ಸಾಲಮನ್ನಾ ಮಾಡಲಾಗಿದೆ. ಇದರಲ್ಲಿ 20% ಮೊತ್ತ - ಅಂದರೆ ಸುಮಾರು 5,000 ಕೋಟಿ ರೂಪಾಯಿ - ರಾಷ್ಟ್ರೀಕೃತ ಬ್ಯಾಂಕುಗಳ ಉನ್ನತಾಧಿಕಾರಿಗಳು ಹಾಗೂ ವಿತ್ತ ಮಂತ್ರಾಲಯದ ಸೆಕ್ರೆಟರಿಗಳ ಕಿಸೆಗೆ ಸೇರಿದೆ (ಬ್ಯಾಂಕಿನ ಉನ್ನತಾಧಿಕಾರಿಗಳು ಎಂದರೆ ಬ್ಯಾಂಕಿನ - ಈಡಿ, ಎಮ್‌ಡಿ, ಜನರಲ್ ಮ್ಯಾನೇಜರುಗಳು ಮತ್ತು ಡೈರೆಕ್ಟರುಗಳು). ಈಗ ಸಾರ್ವಜನಿಕ ಬ್ಯಾಂಕಿನ ಉನ್ನತಾಧಿಕಾರಿಗಳು ಒಬ್ಬೊಬ್ಬರೂ ಕನಿಷ್ಠ ರೂ. 25 ಕೋಟಿ ತೂಗುತ್ತಾರೆ. ಒಬ್ಬ ಬಡ ರೈತನಿಗೆ ಜುಜುಬಿ ಒಂದೆರಡು ಸಾವಿರ ರೂಪಾಯಿ ಸಾಲಮನ್ನಾ ಮಾಡಲು ನೂರಾರು ನಿಬಂಧನೆ ಹಾಕುವ ರಾಷ್ಟ್ರೀಕೃತ ಬ್ಯಾಂಕುಗಳು ದೊಡ್ಡ ದೊಡ್ಡ ಕಂಪನಿಗಳ ಕೋಟ್ಯಾಂತರ ರೂಪಾಯಿ ಸಾಲ ಮನ್ನಾ ಮಾಡಲು ತಕ್ಷಣ ತಯಾರಾಗುತ್ತವೆ. ದೊಡ್ಡ ಕಂಪನಿಗಳು ಬ್ಯಾಂಕಿನ ಬೃಹತ್ ಸಾಲ ಮರುಪಾವತಿ ಮಾಡುವ ಬದಲು ಐಪಿಎಲ್ ಕ್ರಿಕೆಟ್ ಎಂಬ ಜುಗಾರಿಗೆ ಕೋಟ್ಯಾಂತರ ಹಣ ಸುರಿದು ಬ್ಯಾಂಕುಗಳಿಗೆ ಮೋಸ ಮಾಡಿದರೂ ಬ್ಯಾಂಕಿನ ಮಹಾಭ್ರಷ್ಟ ಮೇಲಧಿಕಾರಿಗಳು ಅವರಿಗೇ ಸಹಕಾರ ಕೊಟ್ಟು ಸಿಡಿಆರ್ ಎಂಬ ಮೋಸದಲ್ಲಿ ತಾವೂ ಭಾಗಿಯಾಗಿ ಕೋಟ್ಯಾಂತರ ರೂಪಾಯಿ ಜೇಬಿಗಿಳಿಸುತ್ತಿದ್ದಾರೆ.


ಉತ್ತರ ಭಾರತೀಯರೇ ಉನ್ನತಾಧಿಕಾರಿಗಳಾಗಿರುವ ಬ್ಯಾಂಕುಗಳಲ್ಲಿ ಈ ಸಿಡಿಆರ್ ಎಂಬ ಮೋಸ ಅತೀ



ಹೆಚ್ಚು, ದಕ್ಷಿಣ ಭಾರತೀಯ ಅಧಿಕಾರಿಗಳಲ್ಲಿ ಸ್ವಲ್ಪವಾದರೂ ಪ್ರಾಮಾಣಿಕತೆ ಇನ್ನೂ ಉಳಿದಿದೆ. ನಾನು ಮುಂಬೈಯಲ್ಲಿ ನಮ್ಮ ಬ್ಯಾಂಕಿನ ಹೆಡ್-ಆಫೀಸಿನಲ್ಲಿ ಮೂರು ದಶಕ ಕೆಲಸ ಮಾಡಿ ನಿವೃತ್ತಿಯಾದವನು. ಹಾಗಾಗಿ ಸಿಡಿಆರ್ ಎಂಬ ಮೋಸವನ್ನು ಕಣ್ಣಾರೆ ಕಂಡಿದ್ದೇನೆ. ನಾನು ಕೆಲಸಕ್ಕೆ ಸೇರಿದಾಗ ನನ್ನ ಬ್ಯಾಂಕಿನಲ್ಲಿ ಪ್ರಾಮಾಣಿಕ ಪಾರ್ಸಿ ಜನಾಂಗದವರ ಆಡಳಿತವಿದ್ದು ಆಗ ಅದು ರಾಷ್ಟ್ರೀಕೃತ ಬ್ಯಾಂಕುಗಳಲ್ಲೇ ಒಂದನೆಯ ಸ್ಥಾನದಲ್ಲಿ ಇತ್ತು, ನಂತರ ಕ್ರಮೇಣ ಉತ್ತರ ಭಾರತೀಯ ಅಧಿಕಾರಿಗಳ ಮೇಲುಸ್ತರದಲ್ಲಿ ಹೆಚ್ಚಾಗುತ್ತಾ ಹೋದಂತೆ ಭ್ರಷ್ಟಾಚಾರವೂ ಹೆಚ್ಚುತ್ತಾ ಹೋಗಿ, ಕೊನೆಗೆ ಈ ನನ್ನ ಘನ ಬ್ಯಾಂಕು ಕೆಳಗಿನ ಏಳನೆಯ ಸ್ಥಾನಕ್ಕೆ ಇಳಿದು ಈಗ ಶೋಚನೀಯ ಸ್ಥಿತಿ ತಲುಪಿದೆ. ಇದಕ್ಕೆ ಕಾರಣ ಕಾರ್ಪೊರೇಟ್ ಸಾಲಗಳ

ಸಂಕಲನಕಾರನೇ ಮೊದಲ ಪ್ರೇಕ್ಷಕ'

ಸಂದರ್ಶನ



ಇತ್ತೀಚಿಗೆ ಬಿಡುಗಡೆಯಾಗಿ ಯಶಸ್ವೀ ಪ್ರದರ್ಶನ ಕಾಣುತ್ತಿರುವ 'ಉಗ್ರಂ' ಚಿತ್ರದ ಸಂಕಲನಕಾರ ಶ್ರೀಕಾಂತ್ ಈಗಾಗಲೇ 'ಮಿನುಗು', 'ಹೌಸ್‌ಫುಲ್', 'ಚತುರ್ಭುಜ', 'ಜಾಸ್ಮಿನ್ 5' ಹಾಗೂ 'ಪಂದ್ಯ' ಚಿತ್ರಗಳಿಗೆ ಸ್ವತಂತ್ರ ಸಂಕಲನಕಾರರಾಗಿ ಕೆಲಸ ಮಾಡಿದ್ದಾರೆ. ಇಂತಹ ಭರವಸೆಯ ಪ್ರತಿಭೆ ಇಲ್ಲಿ ಮಾತಾಡಿದ್ದಾರೆ.

ನಿಮ್ಮ ಊರು, ಹೆತ್ತವರು, ಶಿಕ್ಷಣ ಕುರಿತು ...ರಾ?

...ನಕಪುರ ಸಮೀಪದ ಹೊನ್ನಿಗನಹಳ್ಳಿ ನನ್ನ ಊರು. ... ಸರಕಾರಿ ಉದ್ಯೋಗಿ, ನನ್ನ ತಾಯಿಗೆ ನನ್ನಂತ ...ಗನನ್ನು ಸಾಕುವುದೇ ಹೆಚ್ಚಿನ ಕೆಲಸವಾಗಿತ್ತು. ನ್ಯಾಷನಲ್ ...ಸಂಸ್ಥೆಯಲ್ಲಿ ಎಚ್ಚೆನ್ ಅವರ ವಿದ್ಯಾರ್ಥಿಯಾಗಿ ಇದ್ದದ್ದು ...ಜೀವನದ ಅತ್ಯಂತ ಹೆಮ್ಮೆಯ ವಿಷಯ.

ನಿಮಗೆ ಸಂಕಲನದ ಕಡೆ ಆಸಕ್ತಿ ಹೊರಳಿದ್ದು ... ವಯಸ್ಸಿನಲ್ಲಿ? ಯಾಕೆ?

...ಕ್ಕವಯಸ್ಸಿನಿಂದ ಸಿನಿಮಾ ಎಂದರೆ ಆಸಕ್ತಿ. 'ಗುಡ್ಡದ ...', 'ಮಾಲ್ಗುಡಿ ಡೇಸ್' ಮುಂತಾದ ಧಾರಾವಾಹಿಗಳನ್ನು ... ಅದು ಹೇಗೆ ಮಾಡುತ್ತಾರೆ, ಇದು ಹೇಗೆ ...ಡುತ್ತಾರೆ ಎಂಬ ಪ್ರಶ್ನೆ ನನ್ನನ್ನು ಕಾಡುತ್ತಲೇ ಇದ್ದವು. ... ವರ್ಲ್ಡ್' ನಲ್ಲಿ ಕೆಲಸ ಮಾಡುತ್ತಿದ್ದ ರಾಮು ...ಜಿವರು, ಅವರ ಕಚೇರಿ ಎದುರಿನ ಕ್ರೀಡಾಂಗಣದಲ್ಲಿ ... ಆಡುತ್ತಾ ಇರುತ್ತಿದ್ದ ನನ್ನನ್ನು ತುಂಬಾ ದಿನ ಗಮನಿಸಿ ... ದಿನ ಅವರು ತಮ್ಮ ಕಚೇರಿಗೆ ಸೇರಿಸಿಕೊಂಡರು. ...ನನಗೆ ವಯಸ್ಸು ಹದಿನೈದು. ಆ ವಯಸ್ಸಿನಲ್ಲೇ ... ಅನೇಕ ಹೊರದೇಶದ ಸಿನಿಮಾಗಳನ್ನ ನೋಡಿದ್ದೆ. ...ಗಾ ಸಹಜವಾಗಿ ನನಗೂ ಸಿನಿಮಾ ನಿರ್ದೇಶನ, ...ನದ ಬಗ್ಗೆ ಆಸಕ್ತಿ ಬೆಳೆದಿತ್ತು.

** ಸಿನಿಮಾ ರಂಗಕ್ಕೆ ಪ್ರವೇಶ ಹೇಗೆ ಸಿಕ್ತು? ಯಾರ ಮೂಲಕ?*

ಧಾರಾವಾಹಿಗಳಲ್ಲಿ ಆಗಲೇ ಸಾಕಷ್ಟು ಕೆಲಸ ಮಾಡಿದ್ದ ನನ್ನನ್ನು ಗೆಳೆಯ ಛಾಯಾಗ್ರಾಹಕ ಸತೀಶ್ 'ಆಟೋ' ಎನ್ನುವ ಸಿನಿಮಾಗೆ ಸ್ವತಂತ್ರ ಸಂಕಲನಕಾರನನ್ನಾಗಿ ಮಾಡಿದರು. ಈ ಚಿತ್ರ 2007ರಲ್ಲಿ ತೆರೆಕಂಡಿತ್ತು.

** ಸ್ವತಂತ್ರ ಸಂಕಲನಕಾರರಾಗಿ ನಿಮ್ಮ ಮೊದಲ ಸಿನಿಮಾ ಯಾವುದು? ಆ ಅವಕಾಶ ಹೇಗೆ ಬಂತು?*


ಖ್ಯಾತ ಸಂಕಲನಕಾರರಾದ ನರಸಯ್ಯ ಅವರೊಂದಿಗೆ ಕೆಲಸ ಮಾಡಿದ ಅನುಭವ ನನ್ನ ಸಂಕಲನ ಕಲೆಯನ್ನು ಹೆಚ್ಚಿಸಿಕೊಳ್ಳಲು ಸಹಾಯ ಮಾಡಿತು. 'ಮಿನುಗು', 'ಹೌಸ್‌ಫುಲ್' ಆದನಂತರ ಸಿನಿಮಾಗಳ ಸಂಕಲನ ಮಾಡುವುದೇ ಬೇಡ ಎಂದು ನಿರ್ಧರಿಸಿದ್ದೆ. ಗೆಳೆಯ ಮಹೇಶ್ ರಾವ್ ಮತ್ತೆ ನನ್ನಿಂದ 'ಮುರಳಿ ಮೀಟ್ಸ್ ಮೀರ' ಸಿನಿಮಾಗೆ ಸಂಕಲನ ಮಾಡಿಸಿದರು. ನಂತರ ಅವರದೇ 'ಭದ್ರ' ಚಿತ್ರಕ್ಕೂ ಸಂಕಲನದ ಕೆಲಸ ಮಾಡಿದೆ.

** ಭಾರತದಲ್ಲಿ ನಿಮ್ಮ ನೆಚ್ಚಿನ ಸಂಕಲನಕಾರರು ಯಾರ್‍ಯಾರು? ಅವರ ಕೆಲಸಗಳಿಂದ ನೀವು ಗ್ರಹಿಸಿದ್ದೇನು?*

ಡಾ. ರಾಜ್‌ಕುಮಾರ್ ಅವರ ಹೆಚ್ಚಿನ ಚಿತ್ರಗಳಿಗೆ ಸಂಕಲನ ಮಾಡಿರುವ ಭಕ್ತವತ್ಸಲಂ ಮತ್ತು ಶಶಿಕುಮಾರ್ ಅವರು ನನ್ನ ನೆಚ್ಚಿನ ಸಂಕಲನಕಾರರು. ಒಂದು ಸಿನಿಮಾವನ್ನು ಹೇಗೆ ಎಡಿಟ್ ಮಾಡಬಹುದು ಎಂಬುದನ್ನು ಅವರ ಕೆಲಸವನ್ನು ನೋಡಿ ಕಲಿತೆ. ಇನ್ನು ಹೊರದೇಶದ ಸಿನಿಮಾಗಳಲ್ಲಿ ಹೆಚ್ಚಾಗಿ ಇಷ್ಟವಾದದ್ದು ಸ್ಪಿಲ್‌ಬರ್ಗ್ ಚಿತ್ರಗಳ ಎಡಿಟರ್ ಮೈಕೆಲ್ ಕಾನ್. ವಾಲ್ಟರ್ ಮಾರ್ಚ್ ಅವರ ಕೆಲಸವೂ ನನಗೆ ಸಾಕಷ್ಟು ಸ್ಪೂರ್ತಿ ಕೊಟ್ಟಿದೆ.

** ಒಂದು ಚಿತ್ರ ಪರದೆ ಮೇಲೆ ಅದ್ಭುತವಾಗಿ ಮೂಡಿಬರುವಲ್ಲಿ ಸಂಕಲನಕಾರನ ಪಾತ್ರವೂ ದೊಡ್ಡದೇ ಆಗಿರುತ್ತದೆ. ಈ ಕುರಿತು ನಿಮ್ಮ ಅಭಿಪ್ರಾಯ ಹೇಳಿ.*

ನಿರ್ದೇಶಕ ಮತ್ತು ಸಂಕಲನಕಾರರು ಇಬ್ಬರೂ ಒಟ್ಟಿಗೆ ಕೆಲಸ ಮಾಡಿದರೆ ಚಿತ್ರವು ಚೆನ್ನಾಗಿ ಮೂಡಿಬರುತ್ತದೆ ಎಂಬುದು ಎಲ್ಲರೂ ಹೇಳುವ ಮಾತು. ಆ ಮಾತು ನಿಜ ಕೂಡ. ಶೂಟಿಂಗ್ ಮುಗಿಸಿದ ನಂತರವಷ್ಟೇ ನಮ್ಮ ಕೆಲಸ ಪ್ರಾರಂಭವಾಗುತ್ತದೆ. ನಮಗೆ ಕೆಲವು ಭಾಗಗಳಲ್ಲಿ ನ್ಯೂನತೆ ಕಾಣಿಸಿದರೆ ಅದನ್ನು ನಿರ್ದೇಶಕರಿಗೆ ಹೇಳಿ ಮತ್ತೆ ಅದನ್ನು ರೀ-ಶೂಟ್ ಮಾಡಿಸಬೇಕೆಂದಿರುತ್ತದೆ. ಸಂಕಲನಕಾರ ಮೊದಲ ಪ್ರೇಕ್ಷಕ ಆಗಿರುವುದರಿಂದ, ನಾವು ಕೋಟ್ಯಾಂತರ ಕಣ್ಣುಗಳ ಮೂಲಕ ಒಂದು ಸಿನಿಮಾವನ್ನು ನೋಡಿರುತ್ತೇವೆ. ನಿರ್ದೇಶಕರೂ ನಮ್ಮನ್ನು ಅರಿತು ಒಟ್ಟಿಗೆ ಕೆಲಸ ಮಾಡಿದರೆ ಚಿತ್ರವು ಚೆನ್ನಾಗಿ ಮೂಡಿಬರಲು ಕಾರಣವಾಗುತ್ತದೆ. ನನಗೆ ಇತ್ತೀಚಿನ ದಿನಗಳಲ್ಲಿ ನಿರ್ದೇಶಕ ಪ್ರಶಾಂತ್ ನೀಲ್ ಹಾಗೂ ಸಹ ನಿರ್ದೇಶಕ ರಾಮ್ ಲಕ್ಷ್ಮಣ್‌ರೊಂದಿಗೆ ಕೆಲಸ ಮಾಡುವಾಗ ಈ ಅನುಭವ ಹೆಚ್ಚಾಯಿತು. ಅವರು ನಮ್ಮೊಂದಿಗೆ ಕೂತು ವಿಚಾರ ವಿನಿಮಯಗಳ ನಂತರ ಎಷ್ಟೋ ದೃಶ್ಯಗಳನ್ನು ಮರುಚಿತ್ರೀಕರಿಸಿದರು.



** ನಿಮ್ಮ ಮುಂದಿನ ಸಿನಿಮಾಗಳು ಯಾವ್ಯಾವು?*


'ಚತುರ್ಭುಜ', 'ಜಾಸ್ಮಿನ್ 5' ಮತ್ತು 'ಪಂದ್ಯ' ಚಿತ್ರಗಳಿಗೆ ಈಗಾಗಲೇ ಸಂಕಲನದ ಕೆಲಸ ಮುಗಿಸಿದ್ದು ಸದ್ಯದಲ್ಲೇ ಬೆಳ್ಳಿತೆರೆಗೆ ಬರುತ್ತಿವೆ. ಇತ್ತೀಚಿಗೆ ಬಂದ 'ಉಗ್ರಂ' ಚಿತ್ರದಲ್ಲಿನ ನನ್ನ ಕೆಲಸವನ್ನು ಮೆಚ್ಚಿ ಅನೇಕ ಚಿತ್ರಗಳಲ್ಲಿ ಕೆಲಸ ಮಾಡಲು ಅವಕಾಶಗಳು ಬರುತ್ತಿವೆ ಎಂದು ಹೆಮ್ಮೆಯಿಂದ ಹೇಳಬಯಸುತ್ತೇನೆ.

** 'ಉಗ್ರಂ' ಚಿತ್ರದಲ್ಲಿನ ನಿಮ್ಮ ಕೆಲಸದ ಬಗ್ಗೆ ಮೆಚ್ಚುಗೆಯ ಮಾತುಗಳು ಕೇಳಿ ಬರುತ್ತಿವೆ. 'ಉಗ್ರಂ' ಚಿತ್ರದಲ್ಲಿನ ನಿಮ್ಮ ಅನುಭವ ಕುರಿತು ಹೇಳಿ...*

ಚಿತ್ರಮಂದಿರದಲ್ಲಿ ಸಿನಿಮಾ ಮುಗಿದ ಮೇಲೆ ಪ್ರೇಕ್ಷಕರು ಎದ್ದುನಿಂತು ಚಪ್ಪಾಳೆ ಹೊಡೆದದ್ದು ಕಂಡು ಸಂತೋಷವಾಯಿತು. ಜನ ನಮ್ಮ ಕೆಲಸವನ್ನು ಮೆಚ್ಚಿರುವುದನ್ನು ಕೇಳಿ ಸಂತೋಷವಾಗುತ್ತಿದೆ. ಈ ಮೂಲಕ ಎಲ್ಲರಿಗೂ ಧನ್ಯವಾದಗಳನ್ನು ಹೇಳುತ್ತಿದ್ದೇನೆ. ಪರಭಾಷೆಯ ಚಿತ್ರಗಳನ್ನು ನೋಡುತ್ತಿದ್ದ ಪ್ರೇಕ್ಷಕರು 'ಉಗ್ರಂ' ನೋಡಿ ಸಂತೋಷಗೊಂಡಿದ್ದಾರೆ. 'ಉಗ್ರಂ' ಚಿತ್ರವು ಕನ್ನಡ ಚಿತ್ರರಂಗದಲ್ಲಿಯೂ ಒಳ್ಳೆಯ ತಂತ್ರಜ್ಞರು, ಕಲಾವಿದರು ಇದ್ದಾರೆ ಎನ್ನುವುದನ್ನು ನಿರೂಪಿಸಿದೆ. ಇದರ ಹಿಂದಿನ ಶಕ್ತಿ ಪ್ರಶಾಂತ್ ನೀಲ್ ಮತ್ತು ಶ್ರೀಮುರಳಿ ಎನ್ನುವುದು ನಮ್ಮ ತಂಡದ ಮಾತು. ಸಾಮಾನ್ಯವಾಗಿ ಯಾವುದೇ ಸಿನಿಮಾಗಳಲ್ಲಿ 60-80 ಸೀನ್‌ಗಳು ಇರುತ್ತವೆ. ಆದರೆ 'ಉಗ್ರಂ'ನಲ್ಲಿ ಅತಿಹೆಚ್ಚು ಸೀನ್‌ಗಳಿವೆ. ಪ್ರಶಾಂತ್ ನೀಲ್ ಅವರು ಪ್ರತಿಯೊಂದು ಸೀನ್‌ಗಳನ್ನು ಎರಡು ಅಥವಾ ಮೂರು ವಿಭಿನ್ನ ರೀತಿಯಲ್ಲಿ ಎಡಿಟ್ ಮಾಡಿಸಿ ನಂತರ ಒಂದನ್ನು ತೆಗೆದುಕೊಳ್ಳುತ್ತಿದ್ದರು. ಅದು ಅವರಿಗೆ ಒಳ್ಳೆಯ ಸಿನಿಮಾ ಮಾಡಬೇಕು ಎನ್ನುವುದರ ಬಗ್ಗೆ ಇರುವ ಪ್ರೀತಿ ಎಂದೇ ಹೇಳಬಹುದು. ಒಂದೇ ಮಾತಿನಲ್ಲಿ ಹೇಳುವುದಾದರೆ 'ಉಗ್ರಂ' ಚಿತ್ರದಲ್ಲಿನ ನನ್ನ ವರ್ಕ್ ನನ್ನ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ.



ಸಂದರ್ಶಕ: ಹೃದಯಶಿವ



...ಳ ಮತ್ತು ಉತ್ತರ ಭಾರತೀಯ ಮೇಲಧಿಕಾರಿಗಳ ...ಂದ ಭ್ರಷ್ಟಾಚಾರ.

- ಹರೀಶ್ ಎಂ. ರಾವ್, ಬೆಂಗಳೂರು

...ದಿನಗಳ ಹಿಂದೆ ಚುನಾವಣಾಪೂರ್ವ ಸಮೀಕ್ಷೆಗಳಲ್ಲಿ ... ಪಡೆ ಮುಂದಿರುವುದನ್ನು ನೋಡಿ ಆತಂಕವಾಗಿತ್ತು. ...ರ ಗೌರಿಯವರು ತಮ್ಮ ಅಂಕಣದಲ್ಲಿ ಅದೇ ...ರೊಂದಿಗೆ ಹೊಸದಾಗಿ ಮತದಾನ ಮಾಡುತ್ತಿರುವ ...ಮೋದಿಯ ಪರವಿರುವ ಬಗ್ಗೆ ಬರೆದಿದ್ದಾರೆ. ...ವರ ಕಾಳಜಿ ಅರಿಯುವ ಮನಸ್ಸು ಯುವ ಪಡೆಗೆ ...

... ನಾಡಿನ ಪ್ರಜ್ಞಾವಂತರಿಗೆ ಲಂಕೇಶ್‌ರ ಪ್ರತಿ ...ಸೋತ್ಸವದಲ್ಲಿ "ಪಿ.ಲಂಕೇಶರು ಈಗ ಇದ್ದಿದ್ದರೆ" ಎಂದು ನೆನೆಯುವಂತಾಗಿದೆ. ನನ್ನಂತಹ ಕಿರಿಯ ಓದುಗನಿಗೂ ತಮ್ಮ ಬರವಣಿಗೆಗಳ ಮೂಲಕ ಛಾಟಿ ಬೀಸುತ್ತಿದ್ದ ಲಂಕೇಶರು, ತೇಜಸ್ವಿಯವರು, ರಾಮದಾಸರು ಹಿಂದೆಂದಿಗಿಂತಲೂ ಹೆಚ್ಚು ಇಂದು ಇದ್ದಿದ್ದರೆ ಅನಿಸುತ್ತದೆ. ಇದು ಖಂಡಿತ ನಾಟಕೀಯತೆ ಅಲ್ಲ, ಮುಂದೆ ಮೋದಿ ಪ್ರಧಾನಿಯಾಗಿ ಗುಜರಾತ್ 'ಮಾದರಿ' ರಾಷ್ಟ್ರವ್ಯಾಪಿಯಾದರೆ ಎಂಬ ಆತಂಕ.

- ಡಿ.ಎಲ್. ಮಂಜು, ಮಂಗಳೂರು

ಮನೋಜ್ ಮಿಟ್ಟಾ ಅವರು ಬರೆದಿರುವ 'ದಿ ಫಿಕ್ಷನ್ ಆಫ್ ಫ್ಯಾಕ್ಟ್ ಫೈಂಡಿಂಗ್- ಮೋದಿ ಅಂಡ್ ಗೋಧ್ರಾ' ಕೃತಿಯನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಬೇಕೆಂದು ಕೋರಿಕೆ.

- ಚಿದಾನಂದ, ಸಿಂಧನೂರು

ಪತ್ರಿಕೆಯ ಕಳೆದ ಎರಡು ಸಂಚಿಕೆಗಳಲ್ಲಿ 'ಕಟ್ಟೆಪುರಾಣ', 'ಥೂತ್ತೇರಿ', 'ಅಣಕ', 'ಚಾರ್ವಾಕ', ಪಿ.ಲಂಕೇಶರ ಹಳೇ ಬರಹಗಳು ಯಾವುದೂ ಇಲ್ಲ, ಇನ್ನು ನಿಮ್ಮ ಪತ್ರಿಕೆ ಖರೀದಿಸಲು ನಮಗೆ ಹುಚ್ಚು ನಾಯಿ ಕಚ್ಚಿದೆಯಾ? ಪ್ರೊಫೆಶನಲ್ ಆಗಿ...

- ನಾಗ

ಅಮೇಧ್ಯವನ್ನು ಗಂಧ ಎಂದೊಡನೆ ಅದರಿಂದ ಸುವಾಸನೆ ಬರುವುದಿಲ್ಲ.

ನರಹಂತಕ ಮೋದಿಯನ್ನು ದೇಶದ ಯಾವ ಪತ್ರಿಕೆಯೂ ಗೌರಿ ಲಂಕೇಶ್ ವಾರ ಪತ್ರಿಕೆಯ ಹಾಗೆ ಇಷ್ಟೊಂದು ಬಯಲು ಮಾಡಿದ್ದು ಇನ್ನೊಂದು ಇಲ್ಲವೇನೋ.

ಸತ್ಯ ಹೇಳಲು ಗಟ್ಟಿ ಗುಂಡಿಗೆ ಬೇಕು.

- ರವಿಕುಮಾರ್, ಹಾಸನ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.


Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 15/- 26-03-2014 RNI No. KARKAN2005/14646




ಪುನೀತ್-ಪಾರ್ವತಿ ಮತ್ತೆ ಮತ್ತೆ

'ಮಿಲನ' ಚಿತ್ರದ ಮೂಲಕ ಮೋಡಿ ಮಾಡಿದ್ದ ಪುನೀತ್-ಪಾರ್ವತಿ ಜೋಡಿ ಮತ್ತೆ ಒಂದಾಗಲಿದೆ. ಅದೂ ಹೊಸಹುಡುಗ ಪವನ್ ಒಡೆಯರ್ ನಿರ್ದೇಶನದ 'ಧೀರ ರಣವಿಕ್ರಮ' ಚಿತ್ರದ ಮೂಲಕ. ಜಯಣ್ಣ-ಬೋಗೇಂದ್ರ ಜೋಡಿ ನಿರ್ಮಿಸುತ್ತಿರುವ ಈ ಚಿತ್ರದಲ್ಲಿ ಪಾರ್ವತಿ ಮೆನನ್ ಹಿರೋಯಿನ್ ಆಗಿ ನಟಿಸುವ ಬದಲಾಗಿ ಒಂದು ವಿಶಿಷ್ಟ ಪಾತ್ರದಲ್ಲಿ ಪುನೀತ್ ಜೊತೆ ಕಾಣಿಸಿಕೊಳ್ಳುತ್ತಿದ್ದಾರೆ. ಮಾರ್ಚ್ ತಿಂಗಳಲ್ಲಿ ಮುಹೂರ್ತ ಆಚರಿಸಿಕೊಳ್ಳಲಿರುವ ಈ ಸಿನಿಮಾ ಏಪ್ರಿಲ್‌ನಲ್ಲಿ ಶೂಟಿಂಗ್ ಭಾಗ್ಯ ಕಾಣಲಿದೆ. ಅಂದಹಾಗೆ, ಈ ಚಿತ್ರವೂ ತೆಲುಗಿನ 'ದೂಕುಡು' ಚಿತ್ರದ ರೀಮೇಕ್ ಚಿತ್ರವಾಗಿದ್ದು, ಚಿತ್ರದ ಕೆಲವೊಂದು ದೃಶ್ಯಗಳು ಬೆಳಗಾವಿಯಲ್ಲಿ ಚಿತ್ರೀಕರಣಗೊಳ್ಳುವ ಸಂಭವವಿದೆ.

'ಗಜಕೇಸರಿ' ಇನ್ ಜೋರ್ಡಾನ್





'ಮುಂಗಾರು ಮಳೆ' ಸಿನಿಮಾಲಿ ಜೋಗ್ ಫಾಲ್ಸ್‌ನ ಬೆಚ್ಚಿ ಬೀಳಂಗೆ ತೋರಿಸಿ ಭಲೇ ಎನ್ನಿಸಿಕೊಂಡು ರಾತ್ರೋರಾತ್ರಿ ಹೆಸರು ಮಾಡಿದ ಕ್ಯಾಮ್ರಾಮ್ಯಾನ್ ಎಸ್.ಕೃಷ್ಣ ಅಲಿಯಾಸ್ ಕಿಟ್ಟಪ್ಪ ತಮ್ಮ ಬೋ ದಿನದ ಕನಸಾಗಿದ್ದ ಡೈರೆಕ್ಷನ್ ಕೆಲ್ಸಕ್ಕೆ ಕೈ ಹಾಕಿ 'ಗಜಕೇಸರಿ' ಅನ್ನೋ ಸಿನಿಮಾನ ಶುರು ಮಾಡಿದ್ರು. ಈ ಸಿನಿಮಾಲಿ ಯಶ್-ಅಮೂಲ್ಯ ಜೋಡಿ ಆದರು. ಈ ಸಿನಿಮಾ ಶುರು ಆದಾಗಿಂದ್ಲೂ ಏನಾರ ಒಂದು ಸುದ್ದಿ ಮಾಡ್ತಾಲೇ ಕಿಟ್ಟಪ್ಪ ಗಮನ ಸೆಳಿತಾನೆ ಬಂದ್ರು. ಇವಾಗ್ ನೋಡುದ್ರೆ ಇನ್ನೊಂದ್ ಭಯಂಕರ ಬಾಂಬ್ ಹಾಕವ್ರೆ. ಅದೇನಪ ಅಂದ್ರೆ, 'ಗಜಕೇಸರಿ' ಸಿನಿಮಾದಲ್ಲಿ ಹಾಡುಗಳವಲ್ಲಾ. ಅವುಗಳ ಪೈಕಿ ಎರಡು ಹಾಡುಗಳನ್ನ ಶೂಟ್ ಮಾಡೋಕೆ ಅಂತ ಫಾರಿನ್‌ಗೆ ಇಡೀ 'ಗಜಕೇಸರಿ' ಟೀಮ್ನ ಕರ್ಕೊಂಡು ಹೋಗವ್ರೆ. ಫಾರಿನ್ನು ಅಂದ್ರೆ ಯಾವ್ದು ಅಂದ್ಕೊಂಡ್ರಿ? ಪೆಟ್ರಾ, ಜೋರ್ಡಾನ್ ಥರದ ಸಖತ್ ಸ್ಥಳಗಳು. ಈ ಎರಡು ಹಾಡುಗಳನ್ನು ಶೂಟ್ ಮಾಡಿಕೊಂಡು ಬರೋಕೆ ಅಂತ ಕ್ಯಾಮರಾಮ್ಯಾನ್ ಸತ್ಯ ಹೆಗಡೆ, ಡಾನ್ಸ್ ಮಾಸ್ಟರ್ ಹರ್ಷ, ಜೊತೆಗೆ ಒಟ್ಟು ಇಪ್ಪತ್ತೆಂಟು ಜನರ ಪಟಾಲಮ್ಮು ಕಟ್ಕೊಂಡು ಕಿಟ್ಟಪ್ಪ ಹೊಂಟವ್ರೆ. ಈ ಎರಡೂ ಹಾಡುಗಳಲ್ಲೂ ಯಶ್-ಅಮೂಲ್ಯ ಜೋಡಿ ಆಕ್ಟಿಂಗ್ ಮಾಡ್ತದೆ. ಇನ್ನ ಫಾರಿನ್ ಶೂಟಿಂಗ್ ಮುಗಿಸಿಕೊಂಡು ಇಂಡಿಯಾಗೆ ಬಂದಮೇಲೆ 'ಗಜಕೇಸರಿ' ಸಿನಿಮಾಗೆ ಇನ್ನೊಂದು ಹಾಡು

ಬಾಕಿ ಉಳಿತದೆ. ಅದನ್ನು ಚಿತ್ರೀಕರಣ ಮಾಡಿ ಯಾವ ಟೈಮಲ್ಲಿ ಬೇಕಾದ್ರೂ ಸಿನಿಮಾನ ರಿಲೀಸ್ ಮಾಡೋ ಚಾನ್ಸ್ ಇದ್ಯಂತೆ. ಒಂದುಕಾಲದಲ್ಲಿ ಯೋಗರಾಜ ಭಟ್ಟರ ಜೊತೆ ನಿಯತ್ತಾಗಿ ಮುನಿಸಿ ಕೊಂಡು ತಿರ್ಗಾ ಯಂಗೋ ಒಂದಾಗಿ ಕಾರ್ಯ ಸಾಧಿಸ್ತಿರೋ ಕಿಟ್ಟಪ್ಪ.. ಆಲ್ ದ ಬೆಸ್ಟ್ ಕಣ್ರೀ..

ಅಶ್ವಿನಿ ರಾಮಪ್ರಸಾದ್ ಕೈಲಿ ಕರೋಡ್ ಪತಿ



ಮಂಡ್ಯದ ರವಿಗೌಡ ಅನ್ನೋ ಪ್ರತಿಭಾವಂತ ವಾಚಾಳಿಯನ್ನ ಮಡಿಕಂಡು ಆತನ ಕೈಲಿ ಒಂದಿಷ್ಟು ಜನಪದ ಶೈಲಿಯ ಪೋಲಿ ಹಾಡುಗಳನ್ನ ಬರೆಸಿ, ಹಾಡಿಸಿ ಅಲ್ಪ ಸ್ವಲ್ಪ ಕಾಸು ಮಾಡಿಕೊಂಡು ತಿರುಗಾಡುತ್ತಿದ್ದ ಅಶ್ವಿನಿ ರಾಮಪ್ರಸಾದ್ 'ಕನಸುಗಾರ' ಚಿತ್ರದ ಮೂಲಕ ಸಿನಿಮಾ ಕ್ಯಾಸೆಟ್, ಸಿಡಿಗಳ ರೈಟ್ಸ್ ಕೊಳ್ಳುವ, ವಿತರಿಸುವ ಯವಾರಾನು ಶುರು ಹಚ್ಕೊಂಡಿದ್ರು. ಅವತ್ತಿಗೆ ಒಂದು ರೇಂಜಿಗೆ ಪೀಕ್‌ನಲ್ಲಿದ್ದ ಗುರುಕಿರಣ್ ಬಳಸಿಕೊಂಡು ಅಶ್ವಿನಿ ರಾಮಪ್ರಸಾದ್ ಚಿಗುರಿದ್ದು ನಿಮಗೆ ಗೊತ್ತಿದೆ.

ಅದೇ ಜೋಶ್‌ನಲ್ಲಿ ಮುಂದೊಂದು ದಿವಸ ಮಾತುಗಾರ ಪ್ರೇಮ್‌ನನ್ನು ಕಟ್ಟಿಕೊಂಡು 'ಜೋಗಿ' ಅನ್ನೋ ಸಿನಿಮಾಗೆ ದುಡ್ಡು ಹಾಕಿ ಅಕಸ್ಮಾತ್ ಕೋಟ್ಯಂತರ ರೂಪಾಯಿ ಸಂಪಾದನೆ ಮಾಡಿಕೊಂಡಿದ್ದೂ ನಿಮಗೆ ಗೊತ್ತಿರ್ತದೆ. ಯಾವಾಗ ಈ ರಾಮಪ್ರಸಾದ್ ಜೋಳಿಗೆಗೆ ತಾನು ನಿರ್ದೇಶಿಸಿದ 'ಜೋಗಿ' ಸಿನಿಮಾ ಅಷ್ಟೊಂದು ದುಡ್ಡು ಸುರಿಯಿತೋ, ಇದೇ ಕರೆಕ್ಟ್ ಟೈಮ್ ಅಂತ ಅರ್ಥಮಾಡಿಕೊಂಡ ಕಿಲಾಡಿ ಪ್ರೇಮ್, ಇದೇ ರಾಮಪ್ರಸಾದ್ ಕೈಲಿ ನಾಲ್ಕಾರು ಕೋಟಿ ಹಣ ಸುರಿಸಿ 'ಪ್ರೀತಿ ಏಕೆ ಭೂಮಿ ಮೇಲಿದೆ' ಚಿತ್ರದ ಮೂಲಕ ಹೀರೋ ಆಗ್ಲಿಕ್ಕೆ ನೋಡಿದ್ರು. ಆದ್ರೆ ಆ ಸಿನಿಮಾ ಮಕಾಡೆ ದಬಾಕೊಂಡು ಪ್ರೇಮ್ ಹೀರೋ ಆಗಲು ಅನ್‌ಫಿಟ್ ಅಂತ ಜನ ಸಾಬೀತುಮಾಡಿದ್ರು. 'ಜೋಗಿ' ತರಾನೇ 'ಪ್ರೀತಿ ಏಕೆ ಭೂಮಿ ಮೇಲಿದೆ' ಕೂಡ ಕೋಟಿ ಕೋಟಿ ಮಾಡ್ತದೆ ಅಂತ ಪ್ರೇಮ್ ಮಾತು ನಂಬಿ ಹಣ ಹೂಡಿದ್ದ ಪಾಪ್ಪಾ ಯವಾರಸ್ಥ ರಾಮಪ್ರಸಾದ್ ಕಂಗಾಲಾಗಿ ತಲೆ ಮೇಲೆ ಟವಲ್ ಹಾಕೊಂಡು 'ಈ ಪ್ರೇಮ್ ಮಾತ್ ಕೇಳ್ಕೊಂಡು ನಾನು ಹಾಳಾದೆ.. ಅಜ್ಜಯ್ಯನ ಪಾದದಾಣೆಗೂ ಇದು ದಿಟ' ಅಂತೆಲ್ಲಾ ಮಾತಾಡೋಕೆ ಶುರು ಮಾಡಿದ್ರು.

ಇಂಥ ಅಮೋಘ ಇತಿಹಾಸ ಇರೋ ರಾಮಪ್ರಸಾದ್ ಈಗ ಇದೇ ವಾರ ರಿಲೀಸಾಗ್ತಿರೋ ಕೋಮಲ್ ಅಭಿನಯಿಸಿರೋ 'ಕರೋಡ್ ಪತಿ' ಅನ್ನೋ ಸಿನಿಮಾನ ವಿತರಣೆ ಮಾಡ್ತಾವ್ರೆ. ಮತ್ತೆ ಕರೋಡ್ ಪತಿ ಆಗೋ ಕನಸು ಕಾಣ್ತಾವ್ರೆ... ತಕ್ಕಮಟ್ಟಿಗೆ ಸುಳ್ಳು-ಪಳ್ಳು, ತಂತ್ರ-ತಟವಟ, ಕಾಲೆಳೆತ-ಕರಾಮತ್ತುಗಳ ಕುರಿತಂತೆ ಸಾಕಷ್ಟು ಹೆಸರು ಮಾಡಿರೋ ಈ ರಾಮಪ್ರಸಾದ್ ಎಂಬೋ ಮನುಷ್ಯಾಕೃತಿ ಇನ್ನಾದರೂ ನೆಟ್ಟಗಾಗಲಿ ಅಲ್ಲವೇ?



ಗೌಡರ ವಿರುದ್ಧ ಶ್ರುತಿ!



ಮೊದಮೊದಲಿಗೆ ಸಿನಿಮಾ ನಟಿಯಾಗಿದ್ದು ಕೊನೆಕೊನೆಗೆ ಬಣ್ಣ ಹಚ್ಚದೆಯೇ ನಾಟಕವಾಡಲು ಶುರುಮಾಡಿಕೊಂಡ ನಟಿ ಶ್ರುತಿ ಈಗ ಹೊಸದೊಂದು ನಾಟಕಕ್ಕೆ ಬಣ್ಣ ಹಚ್ಚುವ ಸೂಚನೆಗಳು ಕಾಣುತ್ತಿವೆ. ಅದೇನೆಂದರೆ, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಹಾಸನ ಲೋಕಸಭಾಕ್ಷೇತ್ರದಿಂದ ಬಿಜೆಪಿ ಪಕ್ಷದಿಂದ ಕಣಕ್ಕಿಳಿಯಲಿದ್ದಾರೆ? ಅನ್ನೋದು ಈಗ ಪ್ರಶ್ನೆ. ಇಷ್ಟಕ್ಕೂ ಈ ಚತುರ ನಟಿ ಹಾಸನದಿಂದ ಸ್ಪರ್ಧಿಸಬಹುದು ಅನ್ನುವ ಕೆಟ್ಟ ಐಡಿಯಾ ಹೊಳೆದಿರುವುದರ ಹಿಂದೆ ಒಂದು ಬಾಲಿಶ ಕಾರಣವಿದೆ. ಅದೇನೆಂದರೆ, ಈ ನಟಿಮಣಿಯ ಹೆತ್ತವ್ವ ಹಾಸನ ಜಿಲ್ಲೆಯ ಹೊಳೆನರಸೀಪುರದವರು. ಆ ಒಂದೇ ಕಾರಣಕ್ಕೆ ಈ ಶ್ರುತಿಯೆಂಬ ಸದ್ಯದ ನಿರುದ್ಯೋಗಿಯನ್ನು ಹಾಸನದಿಂದ ಲೋಕಸಭಾ ಚುನಾವಣೆಗೆ ನಿಲ್ಲಿಸಲು ಮುಂದಾಗಿರುವ ಬಿಜೆಪಿ ಇನ್ನೆಂಥ ಅವಿವೇಕಿತನದ ಪರಮಾವಧಿ ಬಿಂಬಿಸಲು ಹೊರಟಿದೆ ಅನ್ನೋದನ್ನ ನೀವೇ ಯೋಚಿಸಬೇಕು ಪ್ರಜ್ಞಾವಂತರೇ. ಅಂದಹಾಗೆ, ಹಾಗೊಂದು ವೇಳೆ ಬಿಜೆಪಿ ತನ್ನ ತೆವಲಿಗಾಗಿ ಶ್ರುತಿಯನ್ನು ಬಳಸಿಕೊಳ್ಳಲು ಹೊರಟಿದ್ರೆ ಆದರೆ ಹಾಸನ ಕ್ಷೇತ್ರದಿಂದ ಜೆಡಿಎಸ್ ಪಕ್ಷದಿಂದ ಸ್ಪರ್ಧಿಸುತ್ತಿರುವವರು ಮಾಜಿ ಪ್ರಧಾನಿ, ತಂತ್ರಿ ಎಚ್.ಡಿ.ದೇವೇಗೌಡ ಅನ್ನೋದನ್ನು ಯಾರೂ ಮರೆಯಬಾರದು ಅಲ್ಲವೇ?

ಮಾಣಿಕ್ಯ ಮುಂದಕ್ಕೆ



ಉಗಾದಿಗೆ ರಿಲೀಸಾಗಬೇಕಿದ್ದ 'ಮಾಣಿಕ್ಯ' ಸಿನಿಮಾ ಮುಂದಕ್ಕೆ ಹೋಗೈತೆ. ಅರೆ! ಹಿಂಗ್ಯಾಕಾಯ್ತು ಅಂತ ರೀಜನ್ ಹುಡುಕ್ತಾ ಹೋದ್ರೆ ಕಡೆಗೆ ಗೊತ್ತಾಗಿದ್ದು ಏನಪಾ ಅಂದ್ರೆ, ಎಲೆಕ್ಷನ್ನು! ಇದೇನು, ಎಲೆಕ್ಷನ್‌ಗೂ ಸುದೀಪ್‌ಗೂ ಏನ್ರಿ ಸಂಬಂಧ? ಸುದೀಪ್ ಏನಾರಾ ಶಿವಮೊಗ್ಗದಿಂದಲೋ, ಅವ್ರ ಜಾತಿಯವರೇ ತುಂಬಿರೋ ಚಿತ್ರದುರ್ಗದಿಂದಲೋ ಎಲೆಕ್ಷನ್‌ಗೆ ನಿಲ್ತಿದಾರಾ? ಅಂತೆಲ್ಲ ಕೇಳಬೇಡಿ ಪ್ಲೀಸ್. ಬರೋ ಲೋಕಸಭೆ ಎಲೆಕ್ಷನ್ ಡೇಟ್ ಅನೌನ್ಸ್ ಆಗಿರೋದ್ರಿಂದ ಅದೇ ಸೀಜನ್‌ನಲ್ಲಿ 'ಮಾಣಿಕ್ಯ' ರಿಲೀಸಾದ್ರೆ ಹೊಡ್ತ ಬೀಳ್ತದೆ ಅನ್ನೋದು ಸುದೀಪ್ ಅಂಡ್ ಗ್ಯಾಂಗ್ ಲೆಕ್ಕಾಚಾರ. ಅದಕ್ಕೆ ಏನ್ ಮಾಡವ್ರೆ ಅಂದ್ರೆ 'ಮಾರ್ಚ್ ಹದಿನೇಳ್ನೇ ತಾರೀಕು ರಿಲೀಸ್ ಮಾಡದು ಬ್ಯಾಡ, ಈ ಎಲೆಕ್ಷನ್ ಆಗೋಗ್ಲಿ, ಹಂಗೇನೆ ಎಸ್ಸೆಸ್ಸೆಲ್ಸಿ, ಪಿಯೂಸಿ ಪರೀಕ್ಷೆ ಬ್ಯಾರೆ ಅದೇ ಟೈಮ್‌ಗೆ ಅಟಕಾಯಿಸಕೊಂಡವೆ. ಅತ್ಲಾಗಿ ಅವೂ ಮುಗಿದುಹೋಗಲಿ. ಒಂದೇ ದಪ ಏಪ್ರಿಲ್ ಹದಿನೆಂಟ್ಕೋ, ಇಲ್ಲ ಇಪ್ಪತ್ತೈದಕ್ಕೋ ಸಿವಾ ಅಂತ ರಿಲೀಸ್ ಮಾಡಿಬುಡುವಾ' ಅಂತ ಪ್ಲಾನ್ ಮಾಡವ್ರೆ. ರವಿಚಂದ್ರನ್-ಸುದೀಪ್ ಜೋಡಿ ಯಂಗೆ ಕರಾಮತ್ ತೋರಿಸ್ತದೋ ನೋಡೇಬುಡುವಾ ಅಂತ ಕೆಲವ್ರು ಕಾಯ್ತಾವ್ರೆ ಅಂತಲೇ ಹೇಳಬಹುದು ಅಲ್ವಾ? ಅದಕ್ಕಾದ್ರೂ 'ಮಾಣಿಕ್ಯ' ಬೇಗ ಬರಲಿ ಸಿವ್ನೆ...

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com